ರಂಜನೆ ಬೋಧನೆ ಪ್ರಚೋದನೆ


# ಲಂಕೇಶ್

10 ಡಿಸೆಂಬರ್ 2014 ಪುಟ 20 ರೂ. 15/-



ಆಂಡರ್ಸನ್ ದೇವರಾಯನ ದುರ್ಗದ ಏಕಾಂಗಿ

# ಲಿಂಗಾ ...ಂಬ ಸುನಾಮಿ



...ಗಳೂರು



# ನೆಲಕಂಟಕ ಶಂಕರ್‌ರೆಡ್ಡಿ



ಮಂಡ್ಯ


## ಅಂಬಿಗೆ ಅರ್ಧಚಂದ್ರ ...ಷ್ಣಗೆ ಜೋಡಿಚಂದ್ರ

## ಹುಬ್ಬಳ್ಳಿ ಮೂಜಗು ಬ್ಲ್ಯಾಕ್‌ಮೇಲ್



## ...ಕಲ್ ಚಳವಳಿ: ಬದಲಾವಣೆಯ ಗಾಳಿ

# ನಮ್ಮ ನ್ಯಾಯಾಂಗ ಪೂರ್ವಗ್ರಹಗಳಿಂದ ಮುಕ್ತವ




ಕಳೆದ ಒಂದು ವಾರದಲ್ಲಿ ನಮ್ಮ ನ್ಯಾಯಾಂಗ ವ್ಯವಸ್ಥೆಯು ಪ್ರಜಾಪ್ರಭುತ್ವದ ಮಿಕ್ಕ ರಚನೆಗಳಿಗಿಂತ ಭಿನ್ನವಾದುದಲ್ಲ; ಅದೂ ಸಹ ವರ್ಗ, ಜಾತಿ, ಲಿಂಗ, ಧರ್ಮ ಪೂರ್ವಗ್ರಹಪೀಡಿತವಾದದ್ದು ಎಂಬುದನ್ನು ಬಿಂಬಿಸುವ ವಿದ್ಯಮಾನಗಳು ನಡೆದವು. ಇದೇನೂ ಹೊಸ ವಿಚಾರವಲ್ಲ; ಹೊಸ ಸಂಶೋಧನೆಯೂ ಅಲ್ಲ; ಸಾರ್ವಜನಿಕ ಚರ್ಚೆಗೇ ಬಾರದಿದ್ದ, ಗುಟ್ಟುಗುಟ್ಟಾಗಿ ನಡೆಯುತ್ತಿದ್ದ ಸಂಗತಿಯೂ ಅಲ್ಲ. ಆದರೆ ಯಾವುದನ್ನು ಸಾಮಾನ್ಯವಾಗಿ ನ್ಯಾಯಾಂಗ ನಿಂದನೆಯ ಪರಿಧಿಯ ಒಳಗೆ ಬರುತ್ತದೆ ಎಂದು ಭಾವಿಸಲಾಗುತ್ತದೋ, ಅದನ್ನು ಪ್ರಮುಖ ಸಾರ್ವಜನಿಕ ಸ್ಥಾನಗಳಲ್ಲಿರುವವರೇ ಬಹಿರಂಗವಾಗಿ ಎದುರುಗೊಂಡು ಮಾತನಾಡಿದರು. ಆ ಮಟ್ಟಿಗೆ ಇದು ಹೊಸದು ಅಷ್ಟೇ.

ಒಂದು ಮಡೆಸ್ನಾನ ಕುರಿತ ಹೈಕೋರ್ಟ್ ತೀರ್ಪು; ಇನ್ನೊಂದು-ಕಂಬಾಲಪಲ್ಲಿ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ರಾಷ್ಟ್ರೀಯ ವಿಚಾರಮಂಥನದಲ್ಲಿ ಸವಿವರವಾಗಿ ಬಿತ್ತರವಾದ - ಕಂಬಾಲಪಲ್ಲಿಯಷ್ಟೇ ಅಥವಾ ಅದಕ್ಕಿಂತಲೂ ಭೀಕರವಾಗಿ ನಡೆದ ಹಾಗೂ ಅದಕ್ಕಿಂತಲೂ ನಿಚ್ಚಳವಾಗಿ ನ್ಯಾಯಾಂಗ ವ್ಯವಸ್ಥೆಯ ಈ ಮುಖವನ್ನು ಬಿಂಬಿಸಿದ ಆಂಧ್ರದ ಚುಂಡೂರು ಹತ್ಯಾಕಾಂಡ.

ಮಡೆಸ್ನಾನ ಕುರಿತಂತೆ ಈ ಹಿಂದೆ ಕೋರ್ಟು ಎಡೆಸ್ನಾನ (ಎಂಜಲೆಲೆ ಅಲ್ಲ, ಪ್ರಸಾದದ ಎಲೆ ಮೇಲೆ ಉರುಳುವುದು)ಕ್ಕೆ ಮಾತ್ರ ಅವಕಾಶವೀಯುವ ಮಧ್ಯಂತರ ಆದೇಶ ನೀಡಿತ್ತು. ಅದಾದರೂ ಹೇಗೆ ಸರಿ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಬಂದಿತ್ತು. ಈಗ ಇನ್ನೊಂದು ಮಧ್ಯಂತರ ಆದೇಶ ಬಂದಿದ್ದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ; ಅದರಂತೆ, ಈ ವರ್ಷ ಮಡೆಸ್ನಾನ ನಡೆಸಲೂ ಅಭ್ಯಂತರವಿಲ್ಲ. ಈ ಆದೇಶದ ನಂತರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಡೆಸ್ನಾನ ನಡೆದೂಹೋಯಿತು.

ಈ ಕುರಿತು ರೈತಸಂಘದ ನಾಯಕ ಮತ್ತು ಶಾಸಕರಾದ ಕೆ.ಎಸ್.ಪುಟ್ಟಣ್ಣಯ್ಯನವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ತೀಕ್ಷ್ಣವಾಗಿ ಎನ್ನುವುದಕ್ಕಿಂತಲೂ, ಒಬ್ಬ ಪ್ರಜ್ಞಾವಂತರು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೋ ಆ ರೀತಿ ಪ್ರತಿಕ್ರಿಯಿಸಿದ್ದಾರೆ. 'ಮಡೆಸ್ನಾನ ಮಾಡಬಹುದು ಎನ್ನುವುದಾದರೆ, ಮೊದಲು ಅದಕ್ಕೆ ಅವಕಾಶವಿತ್ತಿರುವ ನ್ಯಾಯಾಧೀಶರು ಎಂಜಲೆಲೆ ಮೇಲೆ ಉರುಳಲಿ. ಆ ನಂತರ ಅದಕ್ಕೆ ಅವಕಾಶ ನೀಡಲಿ' ಎಂದು ಹೇಳಿದ್ದಾರೆ. 'ಈ ರೀತಿ ಮಾತನಾಡುವುದು ನ್ಯಾಯಾಂಗನಿಂದನೆ ಎನ್ನುವುದಾದರೆ, ಅದನ್ನೂ ತಾನು ಎದುರಿಸುವುದಾಗಿಯೂ' ಅವರು ಹೇಳಿದ್ದಾರೆ. ಪುಟ್ಟಣ್ಣಯ್ಯನವರು ಸರಿಯಾಗಿಯೇ ಹೇಳಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ; ಆದರೆ ತೀರ್ಪು ನೀಡಿದ ನ್ಯಾಯಾಧೀಶರ ಕುರಿತು ಈ ರೀತಿ ಸಾರ್ವಜನಿಕವಾಗಿ ಹೇಳಬೇಕಾಗಿ ಬಂದಿರುವ ಸ್ಥಿತಿಯನ್ನು ತಂದುಕೊಂಡಿರುವುದು ನ್ಯಾಯಾಂಗವೇ ಆಗಿದೆ. ಯಾವುದು ನ್ಯಾಯಾಂಗ ನಿಂದನೆ ಎಂಬುದರ ಕುರಿತು ನಮಗಂತೂ ಸ್ಪಷ್ಟವಿಲ್ಲ; ಆ ಕುರಿತು ನ್ಯಾಯಾಂಗದಲ್ಲೇ ಸ್ಪಷ್ಟತೆ ಇದೆಯೇ ಎಂಬುದೂ ಸ್ಪಷ್ಟವಿಲ್ಲ. ಏಕೆಂದರೆ, ನ್ಯಾಯಾಧೀಶರ ವಿವೇಚನೆಯ ಮೇಲೆ ತೀರ್ಮಾನಿಸಲ್ಪಡುವ ಸಂಗತಿಗಳಲ್ಲಿ ಇದೂ ಒಂದಿರುವಂತೆ ಕಾಣುತ್ತದೆ. ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸುವುದು ನಿಂದನೆಯಾಗುವುದಿಲ್ಲ; ವಾಸ್ತವದಲ್ಲಿ ಕೆಳಗಿನ ಕೋರ್ಟಿನ ತೀರ್ಪನ್ನು ಪ್ರಶ್ನಿಸಿ ಮೇಲೆ ಆಪೀಲು ಹೋಗಲು ನ್ಯಾಯ ವ್ಯವಸ್ಥೆಯಲ್ಲೇ ಅವಕಾಶವಿದೆ. ಆಗ ಕೆಳಗಿನ ಕೋರ್ಟಿನ ನ್ಯಾಯಾಧೀಶರು ಈ ರೀತಿ ತಪ್ಪಾಗಿ ತೀರ್ಪು ನೀಡಿದ್ದಾರೆ ಎಂದು ತಾನೇ ಮೇಲೆ ಹೋಗುವುದು. ಅಂತಿಮವಾಗಿ ಸುಪ್ರೀಂಕೋರ್ಟ್ ಸಹ ಸಂವಿಧಾನ ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳ ಆಧಾರದ ಮೇಲಷ್ಟೇ ತೀರ್ಪು ನೀಡುತ್ತದೆ. ಸಂವಿಧಾನಕ್ಕೂ ತಿದ್ದುಪಡಿ ಮಾಡಲು ಶಕ್ಯವಿರುವುದರಿಂದಲೂ, ಅದು ಮುಂದೆಂದೂ ಯಾರೂ ಬದಲಾಯಿಸಬಾರದ ಧರ್ಮಗ್ರಂಥವಲ್ಲವಾದ್ದರಿಂದ, ಸುಪ್ರೀಂಕೋರ್ಟಿನ ಸಂವಿಧಾನಪೀಠ ನೀಡುವ ತೀರ್ಪಿನ ಕುರಿತೂ ಸಾರ್ವಜನಿಕ ಚರ್ಚೆ ನಡೆಯಬಾರದು ಎಂದು ಹೇಳಲಾಗುವುದಿಲ್ಲ.

ಆದರೆ, ನ್ಯಾಯಾಧೀಶರ ಕುರಿತು, ಅವರ ಉದ್ದೇಶದ ಕುರಿತು ಮತ್ತು ನ್ಯಾಯಾಂಗದ ಒಟ್ಟು ಘನತೆಯ ಕುರಿತೇ ಅವಹೇಳನಕಾರಿ ಮಾತುಗಳನ್ನಾಡುವುದು ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಹೇಳಲಾಗುತ್ತದೆ. ಒಂದು ವೇಳೆ ನ್ಯಾಯಾಧೀಶರೇ ತಪ್ಪು ಮಾಡಿದರೆ, ಅವರ ಉದ್ದೇಶದಲ್ಲೇ ಸಮಸ್ಯೆಗಳಿದ್ದರೆ, ಅವರುಗಳ ಒಟ್ಟು ನಡವಳಿಕೆ ಒಟ್ಟಾರೆ ನ್ಯಾಯಾಂಗದ ಘನತೆಯ ಕುರಿತೇ ಪ್ರಶ್ನೆಗಳನ್ನೆಬ್ಬಿಸುವುದಾದರೆ ಆಗ ಏನು ಮಾಡಬೇಕು? ಸಮಾಜದ ಸಮಷ್ಟಿ ಪ್ರಜ್ಞೆ, ಪ್ರಜಾತಾಂತ್ರಿಕ ತಿಳಿವಳಿಕೆ ಮತ್ತು ಸಾಂವಿಧಾನಿಕ ಆಶಯಗಳ ಹಿನ್ನೆಲೆಯಲ್ಲಿ ಚೌಕಟ್ಟನ್ನು ಮುರಿಯುವ ಚಿಂತನೆ ಹೊರಬರದಿದ್ದರೆ, ಈ ಸಮಾಜ ಮುಂದಕ್ಕೆ ಹೋಗಬಲ್ಲುದೇ? ಒಂದು ಪ್ರಜ್ಞಾವಂತ, ನಾಗರಿಕ ಸಮಾಜದಲ್ಲಿ ಮಡೆಸ್ನಾನಕ್ಕೆ ಅವಕಾಶವೀಯುವ ತೀರ್ಪನ್ನು ಉಚ್ಚ ನ್ಯಾಯಾಲಯ ನೀಡಿದಾಗ ಇಂತಹ ಪ್ರಶ್ನೆಗಳು ಏಳುತ್ತವೆ; ಅಂತಹ ಪ್ರಶ್ನೆಯನ್ನು ಸಾರ್ವಜನಿಕವಾಗಿ ಎತ್ತುವ ಧೈರ್ಯವನ್ನು ಪುಟ್ಟಣ್ಣಯ್ಯನವರು ತೋರಿದ್ದಾರೆ.

ಇದಕ್ಕಿಂತ ನಿಚ್ಚಳವಾಗಿ ನ್ಯಾಯಾಂಗ ವ್ಯವಸ್ಥೆಯ ವರ್ಗ ಮತ್ತು ಜಾತಿ ಪೂರ್ವಗ್ರಹಗಳನ್ನು ಎತ್ತಿ ತೋರಿಸುವುದು ದಲಿತ ಹತ್ಯಾಕಾಂಡಗಳ ಕುರಿತ ತೀರ್ಪುಗಳು. ಕಂಬಾಲಪಲ್ಲಿಯ ತೀರ್ಪು ನಮ್ಮ ಕಣ್ಣೆದುರಿಗೇ ಇದೆ. ಸಾಕ್ಷಿಗಳಲ್ಲಿ ಹೆಚ್ಚಿನವರು ನಿಜ ಹೇಳಲಿಲ್ಲ; ಹಾಗಾಗಿ ನ್ಯಾಯಾಂಗವೇನು ಮಾಡಲು ಸಾಧ್ಯ ಎಂಬ ಪ್ರಶ್ನೆ ಏಳುತ್ತದೆ. ಘಟನೆ ನಡೆದ ಹಲವು ವರ್ಷಗಳ ನಂತರ ವಿಚಾರಣೆ ನಡೆದಾಗ, ಹತ್ಯಾಕಾಂಡಕ್ಕೇ ಒಳಗಾಗಬಹುದಾದ ಸಮುದಾಯದ ಸಾಕ್ಷಿಗಳು ಸತ್ಯ ನುಡಿಯಬಲ್ಲರೇ? ನಮ್ಮ ಸಾಮಾಜಿಕ ರಚನೆಯ ಕಾರಣಕ್ಕೆ ನಡೆಯುವ ಹತ್ಯೆಗಳ ವಿಚಾರದಲ್ಲಿ, ಆ ರಚನೆಯಲ್ಲಿ ಯಾವ ದೊಡ್ಡ ಬದಲಾವಣೆ




ನಡೆಯದೇ, ವಿಚಾರಣೆಯಲ್ಲಿ ಮಾತ್ರ ಎಲ್ಲಿಲ್ಲದ ಧೈರ್ಯವನ್ನು ತಂದುಕೊಳ್ಳಲು ಸಾಧ್ಯವೇ ಎಂಬೆಲ್ಲಾ ಪ್ರಶ್ನೆಗಳನ್ನು ಪ್ರಜಾಪ್ರಭುತ್ವವೂ, ಅದರ ಒಂದು ಮುಖ್ಯ ಅಂಗವಾದ ನ್ಯಾಯಾಂಗವೂ ಹಾಕಿಕೊಳ್ಳಬೇಕಿದೆ. ಕಂಬಾಲಪಲ್ಲಿಯ ವಿಚಾರದಲ್ಲಿ ಸಾಕ್ಷಿಗಳು ಸರಿಯಾದ ಸಾಕ್ಷ್ಯ ನುಡಿಯಲಿಲ್ಲ ಎಂಬುದೇನೋ ನಿಜ. ಹಾಗಾದರೆ ಕಣ್ಣ ಸಾಕ್ಷಿಗಳು, ಭೌತಿಕ ಪುರಾವೆಗಳು, ಪೊಲೀಸ್ ಹೇಳಿಕೆಗಳು, ವೈದ್ಯಕೀಯ ವರದಿಗಳು, ಸಾಂದರ್ಭಿಕ ಸಾಕ್ಷ್ಯ ಎಲ್ಲವೂ ಸರಿಯಿದ್ದ ಕಡೆಯೂ ಏಕೆ ಶಿಕ್ಷೆಯಾಗಲಿಲ್ಲ? ಈ ಪ್ರಶ್ನೆಯನ್ನು ಚುಂಡೂರು ಹತ್ಯಾಕಾಂಡದಲ್ಲಿ ನ್ಯಾಯಕ್ಕಾಗಿ ಹೋರಾಡಿದವರು ಬಲವಾಗಿ ಪ್ರಶ್ನಿಸುತ್ತಿದ್ದಾರೆ. ಬೆಂಗಳೂರಿಗೆ ಬಂದಿದ್ದ ಆಂಧ್ರ ಹೈಕೋರ್ಟ್ ನ್ಯಾಯವಾದಿ ಬೊಜ್ಜಾ ತಾರಕಂ, ಈ ಕೇಸಿನ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಶಿವನಾಗೇಶ್ವರ ರಾವ್ ಮತ್ತು ಸಂತ್ರಸ್ತ ಕುಟುಂಬದ ಮೋಸಸ್ ಈ ಪ್ರಶ್ನೆಗಳನ್ನು ಮುಂದಿಟ್ಟರು.

ಜೊತೆಗೆ ಇನ್ನೂ ಒಂದು ಪ್ರಶ್ನೆಯಿದೆ. ದಲಿತರ ಮೇಲಿನ ಹತ್ಯಾಕಾಂಡಗಳಲ್ಲಿ ಎಲ್ಲಾ ಸಂದರ್ಭಗಳಲ್ಲೂ ಹೀಗೇಕೆ ಆಗುತ್ತಿದೆ? ತಮಿಳುನಾಡಿನ ಅನುಭವಗಳನ್ನು ಪಿ. ಶಿವರಾಮನ್ ಅವರು ಇದರ ಸುದೀರ್ಘ ಪಟ್ಟಿಯನ್ನೇ ಮುಂದಿಟ್ಟರು. ಏಕೆಂದರೆ, ಅಲ್ಲಿ ಈ 'ನ್ಯಾಯ ಪರಂಪರೆ'ಯು 1950ರಿಂದಲೇ ಶುರುವಾಗುತ್ತದೆ. ಮುದುಕಲ...
1950ರಲ್ಲಿ ಇಮ್ಮಾನ್ಯುಯಲ್ ಎಂಬ ದಲಿತ ...
ಪ್ರಬಲ ಜಾತಿಯಾದ ಥೇವರ್‌ರ ವಿರುದ್ಧ ...
ಮಾಡಿದ್ದರಿಂದ, ಮುತ್ತುರಾಮಲಿಂಗ ಥೇವರ್ ...
ನೇತೃತ್ವದಲ್ಲಿ 31 ಜನರನ್ನು ಸಾಯಿಸಲಾಯಿತು. ...
ಸೆ. 11 1957ರಂದು ಇಮ್ಮಾನ್ಯುಯೆ...
ಸಾಯಿಸಲಾಯಿತು. ಆದರೆ ಥೇವರ್ ನಿರ್ದೋ...
ಮುದುಕೋಟ್ಟೈ ಕೋರ್ಟು ಹೇಳಿತು.

ಅದರ 10 ವರ್ಷಗಳ ನಂತರ, ಕೀಳ್ವೆಣ್ಮಣಿ ...
ದಲಿತರ ಮೇಲೆ ದಾಳಿ ನಡೆಸಿ 44 ಜನರನ್ನು ಸುಡ...

ಚೆನ್ನೈ ಹೈಕೋರ್ಟಿನಲ್ಲಿ ಎಲ್ಲಾ ಆರ...
ಬಿಡುಗಡೆಯಾಯಿತು. ನಂತರ ವಿಳ್ಳುಪುರ. ...
14 ಜನ ದಲಿತರನ್ನು ಅಲ್ಲಿ ಕೊಲ್ಲಲಾಯಿತು...
ಜನರು ಅದಕ್ಕೆ ಸಾಕ್ಷಿಗಳಿದ್ದರು. ಆದರೆ ಕೋರ್ಟು ...
ಕುರುಂಜಾಮಲಂ ಎಂಬ ಹಳ್ಳಿಯಲ್ಲಿ ದೇವಸ್ಥಾನ ...
5 ಜನ ದಲಿತರನ್ನು ಸಾಯಿಸಿದರು. ಮೇಲ್ಮರವ...
ಪಂಚಾಯ್ತಿಯಲ್ಲಿ ಮೀಸಲಾತಿ ಆಧಾರದ...
ಚುನಾವಣೆಗೆ ನಿಂತ ಕಾರಣದಿಂದ 6 ಜನ ...
ಕೊಲ್ಲಲಾಯಿತು. ಅಲ್ಲಿಯೂ ಆರೋ...
ನಿರ್ದೋಷಿಗಳೆಂದು ತೀರ್ಪು ಬಂದಿತು.


ಆ ನಂತರ '90ರ ದಶಕದಲ್ಲಿ ಚೆಂಗಲ್‌ಪ...
ಅಂಬೇಡ್ಕರ್ ಜಯಂತಿ ಮಾಡಿದರೆಂಬ ಕಾರಣಕ್ಕೆ ...
ಇಬ್ಬರ ಸಾವಿಗೂ ಇದೇ ಗತಿಯಾಯಿತು. ...
18 ಜನ ಮಹಿಳೆಯರ ಮೇಲೆ ದೌರ್ಜನ್ಯ...
ಅರಣ್ಯ ಅಧಿಕಾರಿಗಳಿಗೂ ಯಾವ ಶಿಕ್ಷೆಯಾಗಲಿ...
ಇತ್ತೀಚೆಗೆ ಧರ್ಮಪುರಿಯಲ್ಲಿ ಇಳವರಸ...
(ವಣ್ಣಿಯರ್) ಪ್ರೇಮದ ವಿಚಾರದಲ್ಲಿ 300 ಗುಡಿ...
ಸುಟ್ಟದ್ದು ಮತ್ತು ಇಳವರಸನ್‌ರ ಕೊಲೆಗ...
ಗತಿಯಾಗುತ್ತದೆಂದು ಎಲ್ಲರ ಅನಿಸಿಕೆ.

ಬಿಹಾರದ ಲಕ್ಷ್ಮಣ್‌ಪುರ ಬಾತೆ, ಬತಾ...
ಆಂಧ್ರದ ಕಾರಂಚೇಡು ಮಿಕ್ಕ ಕಡೆಗಳಲ್...
ಕಥೆಯಾಗಿದೆ. ಕೆಲವು ಕಡೆ ಜಿಲ್ಲಾ ನ್ಯಾಯಾ...
ಶಿಕ್ಷೆ ವಿಧಿಸಿದ್ದರೂ, ಹೈಕೋರ್ಟು ಆರೋಪಿಗಳನ್ನು ...
ಮಾಡಿತು. ಅಂತಹ ಒಂದು ಪ್ರಕರಣ ಚುಂಡೂ...
ದಲಿತರನ್ನು ತುಂಡುತುಂಡಾಗಿ ಕತ್ತರಿಸಿ ಗೋಣಿ...
ತುಂಬಿ ತುಂಗಭದ್ರ ನದಿಯ ಕಾಲುವೆಗೆ ಎಸೆಯ...
ಮೇಲೆ ಹೇಳಿದಂತೆ ಎಲ್ಲವೂ ಸ್ಪಷ್ಟವಾಗಿದ್ದ...
ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ಕೊಟ್ಟಿ...

ಆದರೆ ಹೈಕೋರ್ಟು ಇತ್ತೀಚೆಗೆ ಎಲ್ಲಾ ...
ಗಳನ್ನೂ ಬಿಡುಗಡೆ ಮಾಡಿತು. ಕೆಳ ನ್ಯಾಯ...
ಸಂದೇಹಕ್ಕೆಡೆಯಿಲ್ಲದಂತೆ ಪುರಾವೆಗಳನ್ನು ...
ನೀಡಿದ ತೀರ್ಪನ್ನು ಹೈಕೋರ್ಟು ತನ್ನಿಚ್ಛೆ...
ತಿರುಚಿರುವುದು ಒಂದಲ್ಲ, ಎರಡಲ್ಲ ಹಲವಾರು ...
ಸ್ಪಷ್ಟವಾಗಿದೆ. ಮತ್ತು ಕೇವಲ ತಪ್ಪು ವ್ಯಾಖ್ಯಾನ ಮಾ...
ಸುಳ್ಳುಗಳನ್ನೂ ನ್ಯಾಯಾಧೀಶರು ಹೇಳಿದ್ದಾರೆ...
ಶಿವನಾಗೇಶ್ವರರಾವ್ ವಿವರಗಳ ಸಮೇತ ಮುಂ...
ಅವರು ಯಾವ ಹಿಂಜರಿಕೆಯೂ ಇಲ್ಲದೇ ನ...
ಎಂಬ ನ್ಯಾಯಾಧೀಶ ತನ್ನ ಕುಲಬಾಂಧವರನ್ನು ...
ಈ ರೀತಿ ಮಾಡಿದ್ದಾರೆ ಎಂದು ಹೇಳುತ್ತಾ...
ಕಾರಣಗಳೂ ಇವೆ. ನ್ಯಾಯಾಲಯದ ಕಲಾಪ ನ...
ಸಂದರ್ಭದಲ್ಲೇ ನ್ಯಾಯಾಧೀಶ ರೆಡ್ಡಿ, ವಾದಿಗಳಿ...
ಯೊಡ್ಡಿದ್ದಾರೆ. ಈ ಕುರಿತು ಅದೇ ನ್ಯಾಯಾಲಯಕ್ಕೆ ...
ಅಫಿಡವಿಟ್ ಸಹ ಸಲ್ಲಿಸಿದ್ದಾರೆ. ಆ ಅಫಿಡ...
ವಾಪಸ್ ತೆಗೆದುಕೊಳ್ಳಬೇಕೆಂದು ದಬಾಯಿಸಿ...

ಇಷ್ಟೆಲ್ಲಾ ನಡೆದ ಮೇಲೆ ನ್ಯಾಯಾಂಗ ...
ಪಕ್ಷಪಾತ ರಹಿತವಾಗಿರುತ್ತದೆಂದು ಹೇಗೆ ಹೇಳ...
ಎಂಬುದು ಎಲ್ಲರ ಒಕ್ಕೊರಲ ಪ್ರಶ್ನೆ. ನ್ಯಾ...
ನೇಮಕಾತಿ ಮತ್ತು ನ್ಯಾಯಾಂಗದ ಉತ್ತರದಾಯಿ...
ವಿಷಯದ ಕುರಿತು ಚುಂಡೂರು ದಲಿತ ...
ನ್ಯಾಯ ಹೋರಾಟ ಸಮಿತಿಯು ಆಂಧ್ರದ ...
ಅಧಿವೇಶನಗಳನ್ನು ನಡೆಸಿ ಈ ಪ್ರಶ್ನೆಗಳನ್ನು ಬಹಿ...
ಎತ್ತಿದೆ. ನ್ಯಾಯಾಂಗವು ಮತ್ತು ನ್ಯಾಯಾಧೀಶ...
ಜಾತಿ, ಲಿಂಗ ಪೂರ್ವಗ್ರಹಗಳಿಂದ ಹೊರತಾಗಿಲ್ಲ...
ಈ ಮಟ್ಟಕ್ಕೆ ಬಹಿರಂಗ ಚರ್ಚೆಗೆ ...
ಪರಿಸ್ಥಿತಿ ಇದೆ ಎಂದಾದರೆ, ಬೆಕ್ಕಿಗೆ ಗಂಟೆ ಕಟ್ಟ...
ಅದನ್ನು ಚುಂಡೂರು ಹತ್ಯಾಕಾಂಡದ ...
ಮಾಡಿದ್ದಾರೆ. ಅವರ ಜೊತೆ ದನಿಗೂಡಿಸುವ ...
ನಮ್ಮ ಮೇಲಿದೆ.

# ಪುಟ್ಟ ಮಕ್ಕಳ ಚಿಕ್ಕ 'ಸಾಹಸ'



ಪುಟಾಣಿ ಗ್ರಾಹಕಿಗೆ ನಿಂಬೆರಸ ಮಾರುತ್ತಿರುವ ಸಮಯ್, ಇಶಾ ಮತ್ತು ಸಮರ್

ಕಳೆದ ಭಾನುವಾರ "ಇವತ್ತು ನಾವು 180 ರೂಪಾಯಿ ಸಂಪಾದಿಸಿದ್ವಿ" ಎಂದು ಮಗಳು ಇಶಾ ಹರುಷಪಟ್ಟಳು. ಅಲ್ಲಾ, 10 ವರ್ಷ ವಯಸ್ಸಿನ ಈ ಪೋರಿ ಹೇಗೆ ಹಣ ಸಂಪಾದಿಸಿದಳು ಎಂದು ಅಚ್ಚರಿಯಾಗಿ "ಹೇಗೆ?" ಎಂದೆ. "ನಾನು, ಸಮರ್ ಮತ್ತು ಸಮಯ್ ಮೂವರೂ ಅಜಿತು ಮಾಮನ ಮನೆ ಮುಂದೆ ನಿಂಬೆ ಹಣ್ಣಿನ ರಸ ಮಾರಿದ್ವಿ" ಎಂಬ ಉತ್ತರ ಅವಳಿಂದ ಬಂತು.

ಏನಾಗಿತ್ತೆಂದರೆ, ಮೂವರು ಮಕ್ಕಳು ಸೇರಿ ನಿಂಬೆ ರಸ ಮಾಡಿ, ಒಂದು ಪುಟ್ಟ ಟೇಬಲ್ ಮೇಲೆ ಲೋಟ, ಸಕ್ಕರೆ ಮತ್ತು ಉಪ್ಪಿನ ಡಬ್ಬ ಇಟ್ಟು, 'ತಾಜಾ ನಿಂಬೆರಸ, ಹತ್ತು ರೂಪಾಯಿ' ಎಂಬ ಕೈಬರಹದ ಬೋರ್ಡ್‌ಅನ್ನು ಕೈಯಲ್ಲಿ ಹಿಡಿದು ರಸ್ತೆ ಪಕ್ಕ 'ವ್ಯಾಪಾರ' ಪ್ರಾರಂಭಿಸಿದ್ದಾರೆ. ಕೋರಮಂಗಲ ಬಡಾವಣೆಯಲ್ಲಿ ಈ ಪುಟಾಣಿಗಳ 'ಬಿಸಿನೆಸ್' ಎಷ್ಟು ಬೇಗನೆ ಯಶಸ್ವಿಯಾಗಿದೆ ಎಂದರೆ ಮೂವರಿಂದ ಅದನ್ನು ನಿಭಾಯಿಸಲಾಗದೆ ಅದೇ ರಸ್ತೆಯಲ್ಲಿ ವಾಸಿಸುತ್ತಿರುವ ಹುಡುಗನೊಬ್ಬನ ಸಹಾಯವನ್ನು ಕೋರಿದ್ದಾರೆ. ಅವನೂ ಚಾಲಾಕಿ. "ನನಗೆಷ್ಟು ಸಂಭಾವನೆ ಕೊಡುತ್ತೀರಿ?" ಎಂದು ಕೇಳಿದ್ದಾನೆ. ಈ ಮೂವರು ತಮ್ಮ ನಡುವೆ ಚರ್ಚೆ ಮಾಡಿಕೊಂಡು "ಇಪ್ಪತ್ತು ರೂಪಾಯಿ ಕೊಡ್ತೀವಿ" ಅಂದಿದ್ದಕ್ಕೆ ಆತ ಒಪ್ಪಿಕೊಂಡಿದ್ದಾನೆ.

ಈ ಮಕ್ಕಳು ಪಾಲಿಸಿದ 'ಬಿಸಿನೆಸ್ ಪಾಲಿಸಿ' ಮಜಬೂತಾಗಿದೆ. "ಬೋರ್ಡ್ ಮೇಲೆ ಹತ್ತು ರೂಪಾಯಿ ಅಂತ ಬರೆದಿದ್ವಿ, ಆದರೆ ಸಾಹುಕಾರರ ತರಹ ಕಂಡವರಿಗೆ ಹತ್ತು ರೂಪಾಯಿಗೆ ಮಾರಿದ್ವಿ, ಬಡವರ ತರಹ ಕಂಡವರಿಗೆ ಐದು ರೂಪಾಯಿಗೆ ಕೊಟ್ವಿ. ಒಬ್ಬ ಕಟ್ಟಡ ಕಾರ್ಮಿಕನನ್ನು 'ತಾಜಾ ಮತ್ತು ರುಚಿಯಾದ ನಿಂಬೆ ರಸ ಬೇಕಾ?' ಅಂತ ಕೇಳಿದೆ. ಅವನು ತಗೊಂಡಿದ್ದರೆ ಅವನಿಗೆ ಐದು ರೂಪಾಯಿಗೆ ಕೊಡ್ತಿದ್ವಿ" ಎಂದಳು.

"ಪಾಪ, ಬಡವರಲ್ಲಿ ನಿಂಬೆ ರಸಕ್ಕೆ ಹಣ ಇರಲ್ಲ ಮರಿ. ಅದಕ್ಕೆ ಅವನು ಖರೀದಿಸಿರುವುದಿಲ್ಲ" ಎಂದೆ.

"ಇಲ್ಲಾ ಅಮ್ಮಾ, ಅವರ ಹತ್ತಿರ ಒಂದು ಸಾವಿರ ರೂಪಾಯಿಯ ನೋಟ್ ಇತ್ತು. ಆದರೆ ನಮ್ಮ ಹತ್ತಿರ ಅಷ್ಟೊಂದು ಚಿಲ್ಲರೆ ಇರಲಿಲ್ಲ. ಅದಕ್ಕೇ ಆತ ಕೊಂಡುಕೊಳ್ಳಲಿಲ್ಲ" ಎಂಬ ಉತ್ತರ ಕೇಳಿ ನಗುಬಂತು.

ಒಬ್ಬರಿಗೆ ಸಕ್ಕರೆ ಅಥವಾ ಉಪ್ಪು ಇಲ್ಲದ ನಿಂಬೆ ರಸ ಕೊಟ್ಟಾಗ ಆತ ಮುಖ ಸಿಂಡರಿಸಿಕೊಂಡಿದ್ದು, ಇನ್ನೊಬ್ಬ ಮಹಿಳೆ ಬಂದು 'ಧೂಳು ಇದೆ. ನೀವು ಲೋಟ ಮುಚ್ಚಿಲ್ಲ' ಎಂದೆಲ್ಲ ಲೆಕ್ಚರ್ ಕೊಟ್ಟನಂತರವೂ ನಿಂಬೆ ರಸ ಖರೀದಿಸದೆ ಹೋದದ್ದು, ಯುವಕನೊಬ್ಬ ಒಂದು ಲೋಟ ರಸಕ್ಕೆ ಬರೋಬ್ಬರಿ ಮೂವತ್ತು ರೂಪಾಯಿ ಕೊಟ್ಟಿದ್ದು, ಕಾರ್‌ಅನ್ನು ಓಡಿಸುತ್ತಿದ್ದ ಯುವತಿ ವಾಪಸ್ ಬಂದು ಇವರ ಪ್ರಯತ್ನವನ್ನು ಮೆಚ್ಚಿದ್ದು- ಹೀಗೆ ವಿವಿಧ ಅನುಭವಗಳು ಅಂದು ಮೂವರು ಮಕ್ಕಳಿಗೆ ಆಗಿದೆ.

ಹಲವು ಗಂಟೆಗಳ ಕಾಲ ನಡೆದ ಈ 'ಬಿಸಿನೆಸ್'ನಲ್ಲಿ ಒಟ್ಟು 180 ರೂಪಾಯಿಗಳನ್ನು ಪುಟಾಣಿಗಳು ಸಂಪಾದಿಸಿದರು. ಹಾಕಿದ್ದ ಬಂಡವಾಳ, ನೇಮಿಸಿಕೊಂಡಿದ್ದ 'ಸಹಾಯಕ'ನ ಬಾಬತ್ತುಗಳನ್ನು ಕಳೆದ ನಂತರ ಇಶಾಳ ಕೈಗೆ ಸಿಕ್ಕಿದ್ದು 50 ರೂಪಾಯಿ. ಇದು ಆಕೆ 'ದುಡಿದ' ಪ್ರಥಮ ಆದಾಯ! ಇದರಿಂದ ಉತ್ತೇಜನ ಪಡೆದಿರುವ ಮೂವರೂ ಮುಂದಿನ ಬೇಸಿಗೆ ರಜೆಯಲ್ಲಿ ಇನ್ನಷ್ಟು ನಿಂಬೆ ರಸ ಮಾರಿ ಹೆಚ್ಚಿನ ಹಣ ಸಂಪಾದಿಸುವ ಉಮೇದಿನಲ್ಲಿದ್ದಾರೆ!! ಅಷ್ಟು ಹೊತ್ತಿಗೆ ಅವರ ತಲೆಗಳಿಗೆ ಇನ್ನೆಷ್ಟು ಐಡಿಯಾಗಳು ಹೊಳೆದಿರುತ್ತವೋ!

ಹಾಗೇ ಸುಮ್ಮನೆ ಈ ಪುಟ್ಟ ಮಕ್ಕಳ ಚಿಕ್ಕ ಸಾಹಸದ ಬಗ್ಗೆ ಹಂಚಿಕೊಳ್ಳಬೇಕು ಅನ್ನಿಸಿದ್ದರಿಂದ ಈ ಟಿಪ್ಪಣಿ.

● ಗೌರು


# ಪತಿ ಸಾವಿತ್ರಿ'ಯೊಬ್ಬಳಿಂದ ಹೀಗೊಂದು ಪ್ರತಿಭಟನೆ

ನರೇಂದ್ರ ಮೋದಿ ನಾಲ್ಕು ದಶಕಗಳ ಹಿಂದೆಯೇ ...ಕೈಹಿಡಿದಿದ್ದ ಪತ್ನಿಯನ್ನು ತೊರೆದಿದ್ದು, ಆನಂತರ ...ಮತ್ತ ತಿರುಗಿಯೂ ನೋಡದ್ದು ಎಲ್ಲರಿಗೂ ಗೊತ್ತು. ...ದೇಶಸೇವೆ ಮಾಡುವುದಕ್ಕಾಗಿ ಮೋದಿ ...ಕೊಂಡಿದ್ದವಳ ಕೈಬಿಟ್ಟಿದ್ದರೂ ಆ ಅಮಾಯಕ ಪತ್ನಿ ...ೋದಾಬೆನ್ ಮಾತ್ರ ಮೋದಿಗೆ ಯಾವ ರೀತಿಯಲ್ಲೂ ...ಟ್ಟಿಲ್ಲ, ಕಿರಿಕ್ಕು ಮಾಡಿಲ್ಲ, ಬದಲಾಗಿ ಆಕೆ ಕಳೆದ ...ವತ್ತೂರು ವರ್ಷಗಳಿಂದ ಶಬರಿಯಂತೆ ತನ್ನ ರಾಮನಿಗಾಗಿ ...ದ್ದಾಳೆ, ಸತಿ ಸಾವಿತ್ರಿಯಂತೆ ಪತಿಯ ಹಿತರಕ್ಷಣೆಗೆ ...ರ್ಥಿಸಿದ್ದಾಳೆ- ಉಪವಾಸ ವ್ರತಗಳನ್ನು ಕೈಗೊಂಡಿದ್ದಾಳೆ, ...ಯಂತೆ ಕಷ್ಟ-ನಷ್ಟ-ನೋವುಗಳನ್ನು ಸಹಿಸಿದ್ದಾಳೆ. ಪಕ್ಕಾ ...ರತೀಯ ಮಧ್ಯಮ ವರ್ಗದ ಮಹಿಳೆಯಂತೆ ...ೋದಾಬೆನ್ ತನ್ನೊಂದಿಗೆ ಪತಿ ಇಲ್ಲದಿದ್ದರೂ ಆತನೇ ...ಮೇಶ್ವರ ಎಂಬಂತೆ ಬದುಕಿದ್ದಾಳೆ. ಎಲ್ಲಕ್ಕಿಂತ ಮುಖ್ಯವಾಗಿ ...ಯಾವ ಹಕ್ಕನ್ನೂ ಚಲಾಯಿಸದೆ ನಲವತ್ತು ವರ್ಷಗಳ ... ಶಾಲಾ ಶಿಕ್ಷಕಿಯಾಗಿ ದುಡಿಯುತ್ತಾ ಯಾರನ್ನೂ ...ಅವಲಂಬಿಸದೆ ಸ್ವಾಭಿಮಾನಿಯಾಗಿ ಜೀವನ ಸಾಗಿಸಿದ್ದಾಳೆ. ...ದಿ 13 ವರ್ಷಗಳ ಕಾಲ ಗುಜರಾತಿನ ಮುಖ್ಯಮಂತ್ರಿ ...ದ್ದಾಗಲೂ ಜಶೋದಾಬೆನ್ ಆತನ ವಿರುದ್ಧ ತುಟಿಪಿಟಿಕ್ ...ಎಂದಿರಲಿಲ್ಲ.

...ಂತಹ ಭಾರತೀಯ ನಾರಿ ಜಶೋದಾಬೆನ್ ಈಗ ...ಹಕ್ಕುಗಳಿಗಾಗಿ ಸೆಟೆದೆದ್ದು ನಿಂತಿದ್ದಾರೆ. "ಪ್ರಧಾನಿಯ ...ಯಾದ ನನಗೆ ಯಾವ್ಯಾವ ಹಕ್ಕುಗಳಿವೆ, ಸೌಕರ್ಯಗಳಿವೆ, ...ಕೂಲಗಳಿವೆ ಎಂಬುದನ್ನು ತಿಳಿಸಿ" ಎಂದು ಮಾಹಿತಿ ... ಕಾಯ್ದೆಯಡಿ ಅರ್ಜಿ ಗುಜರಾಯಿಸಿದ್ದಾರೆ. ಸೋಜಿಗದ ...ರವೆಂದರೆ ಜಶೋದಾಬೆನ್ ಹೀಗೆ ಅರ್ಜಿ ...ಸುವುದು ತನಗೆ ಹೆಚ್ಚೆಚ್ಚು ಸವಲತ್ತುಗಳು ಬೇಕು ... ಕಾರಣಕ್ಕಲ್ಲ, ಬದಲಾಗಿ ತನಗೆ ಈಗ ಕೊಟ್ಟಿರುವ ...ಣಾ ಪಡೆಯಿಂದ ಕಿರುಕುಳ ಆಗಿದೆ ಎಂಬ ಕಾರಣಕ್ಕೆ!

...ಳೆದ ಸೋಮವಾರ ಜಶೋದಾಬೆನ್ ಬಿಳಿ ಸೀರೆ ...ಟ್ಟು, ಕೇಸರಿ ಬಣ್ಣದ ರವಿಕೆ ತೊಟ್ಟು, ಹಣೆಯಲ್ಲಿ ...ಕುಮ ಧರಿಸಿ, ಕೊರಳಲ್ಲಿ ಮಂಗಳಸೂತ್ರ ಕಟ್ಟಿಕೊಂಡು ...ತಮ್ಮನ ಸ್ಕೂಟರ್ ಏರಿ ಹೊರಟಾಗ ಆಕೆಯ ಬೆನ್ನ ...ಯೇ ಐಶಾರಾಮಿ ಏಸಿ ಕಾರುಗಳಲ್ಲಿ ಸಾಗಿದ ವಿಶೇಷ ...ಣಾ ತಂಡದ ಐವರು ಸದಸ್ಯರಿಗೆ ಆಕೆ ಎಲ್ಲಿಗೆ ...ಗುತ್ತಿದ್ದಾರೆ ಎಂಬುದು ಗೊತ್ತಿರಲಿಲ್ಲ. ಆದರೆ ಆಕೆ ...ವಾಗಿ ಮೆಹಸಾನಾದ ಎಸ್‌ಪಿ ಆಫೀಸಿಗೆ ಹೋಗಿ ...ದು ಪ್ರಶ್ನೆಗಳಿದ್ದ ಪಟ್ಟಿಯನ್ನು ಮಾಹಿತಿ ಹಕ್ಕು ಕಾಯಿದೆ ... ಸಲ್ಲಿಸಿದಾಗ ಆಕೆಯ ರಕ್ಷಣಾ ಪಡೆಗೆ ಮಾತ್ರವಲ್ಲ ... ದೇಶಕ್ಕೆ ಅಚ್ಚರಿ ಆಯಿತು. ಯಾಕೆಂದರೆ ...ೋದಾಬೆನ್ ಅವರು ಹೀಗೆ ಮಾಡಿಯಾರು ಎಂದು ...ಯೂ ನಿರೀಕ್ಷಿಸಿರಲಿಲ್ಲ.

ಜಶೋದಾಬೆನ್ ಓರ್ವ ಮುಗ್ಧೆ ಅಮಾಯಕ ಮಹಿಳೆ. ಇತರರಿಂದಿರಲಿ, ತನ್ನ ಪತಿಯಿಂದಲೂ ಆಕೆ ಎಂದೂ ಏನನ್ನೂ ನಿರೀಕ್ಷಿಸಿದವರಲ್ಲ. ಮುಂದೊಂದು ದಿನ ಇತರೆ ಸಂಸಾರಸ್ಥರಂತೆ ತಾನೂ ತನ್ನ ಪತಿಯೊಂದಿಗೆ ದಾಂಪತ್ಯ ಜೀವನವನ್ನು ನಡೆಸುವ ಏಕೈಕ ಆಸೆಯನ್ನು ಮಾತ್ರ ಜೀವನದಲ್ಲಿ ಹೊಂದಿರುವವರು. ತಮ್ಮ ಈ ನಿರೀಕ್ಷೆ ನಿಜವಾಗಲಿ ಎಂದು ವಾರದ ನಾಲ್ಕು ದಿನ ಉಪವಾಸ ಮಾಡುವಷ್ಟು ಮೌಢ್ಯವನ್ನು ಹೊಂದಿದ್ದಾರೆ. ಗಂಡ ತನ್ನನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದರೂ ಆತನ ಏಳಿಗೆಗಾಗಿ ಗುಡಿಗಂಡಾರಗಳನ್ನು ಸುತ್ತುವ ಸಂಪ್ರದಾಯಸ್ಥ ಮಹಿಳೆ.



ಆದರೆ ಮೋದಿ ಈಕೆಯ ಇರುವಿಕೆಯನ್ನೇ ನಿರಾಕರಿಸಿದ್ದ ಕ್ರೂರಿ. ಆತ ಎಲ್ಲೂ, ಎಂದೂ ತಾನು ಜಶೋದಾಬೆನ್ ಎಂಬಾಕೆಯನ್ನು ಮದುವೆಯಾಗಿದ್ದೀನಿ ಎಂದು ಒಪ್ಪಿಕೊಂಡೇ ಇರಲಿಲ್ಲ. ಆದರೆ ಈ ವರ್ಷ ಲೋಕಸಭಾ ಚುನಾವಣೆಯ ಮುನ್ನ ಕಣಕ್ಕಿಳಿಯುತ್ತಿರುವ ಅಭ್ಯರ್ಥಿಗಳು ಚುನಾವಣಾ ಅರ್ಜಿಯಲ್ಲಿ ಯಾವುದೇ ಕಲಂಅನ್ನು ಖಾಲಿ ಬಿಡುವಂತಿಲ್ಲ ಎಂದು ಚುನಾವಣಾ ಆಯೋಗ ಆದೇಶಿಸಿತ್ತು. ಪ್ರಧಾನಿ ಆಗುವ ತನ್ನ ಆಸೆಗೆ ಎಲ್ಲಿ ಭಂಗ ಬರುತ್ತದೋ ಎಂಬ ಕಾರಣಕ್ಕೇ ಮೋದಿ ಬರೋಡಾದಿಂದ ಸ್ಪರ್ಧೆಗಿಳಿದಾಗ ಪ್ರಥಮ ಬಾರಿಗೆ ಜಶೋದಾಬೆನ್ ಅವರ ಹೆಸರನ್ನು ಚುನಾವಣಾ ಅರ್ಜಿಯಲ್ಲಿ ದಾಖಲಿಸಿದ್ದ. ಅದು ಗೊತ್ತಾಗಿದ್ದೇ ತಡ ಅಮಾಯಕ ಜಶೋದಾಬೆನ್ ಅವರಿಗೆ ಅದೆಷ್ಟು ಖುಷಿ ಆಯಿತೆಂದರೆ ಆಕೆ ಕಣ್ಣೀರಿಟ್ಟರು. ಅಷ್ಟೇ ಅಲ್ಲ, "ನನ್ನ ಹೆಸರನ್ನು ನನ್ನ ಪತಿ ಚುನಾವಣಾ ಅರ್ಜಿಯಲ್ಲಿ ದಾಖಲಿಸಿದ್ದಾರೆ. ಇದರಿಂದ ಅವರ ಹೃದಯದಲ್ಲಿ ಈಗಲೂ ನನ್ನ ಮೇಲೆ ಒಲವಿದೆ ಎಂಬುದು ನನಗೆ ಗೊತ್ತಾಗಿದೆ" ಎಂದು ಮಾಧ್ಯಮದವರ ಮುಂದೆ ಹರುಷವನ್ನು ವ್ಯಕ್ತಪಡಿಸುವಷ್ಟು ಮುಗ್ಧೆ!

ಚುನಾವಣೆಗಳು ಮುಗಿದು, ಮೋದಿ ಪ್ರಧಾನಿ ಆಗಿ ಈಗ ಆರು ತಿಂಗಳು ಕಳೆದಿವೆ. ಈ ಅವಧಿಯಲ್ಲಿ ಜಶೋದಾಬೆನ್ ಅವರು ಕಟ್ಟಿಕೊಂಡಿದ್ದ ಯಾವ ಕನಸೂ ನನಸಾಗಿಲ್ಲ. ದೆಹಲಿಯ 7, ರೇಸ್ ಕೋರ್ಸ್ ರೋಡ್‌ನಲ್ಲಿರುವ ಭಾರತದ ಪ್ರಧಾನಿಯ ಅಧಿಕೃತ ವಸತಿಯಲ್ಲಿ ತಂಗುವ ಆಸೆ ಬಹಳ ದೂರದ್ದು. ಅದು ಬೇಡ. ಆದರೆ ಕನಿಷ್ಠ ಚುನಾವಣೆ ಗೆದ್ದ ನಂತರ ಪತಿ ಮೋದಿಯೊಂದಿಗೆ ಅಂಬಾಜಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಬೇಕೆಂದೂ, ಆತನ ಪ್ರಮಾಣವಚನ ಸ್ವೀಕರಿಸುವ ಸಭೆಗೆ ಹಾಜರಾಗಬೇಕೆಂದೂ ಆಕೆ ಇಟ್ಟುಕೊಂಡಿದ್ದ ಆಸೆಗಳೂ ಈಡೇರಲಿಲ್ಲ, ಇಷ್ಟೆಲ್ಲದರ ನಡುವೆಯೂ ಆಕೆ ಹಲವಾರು ಬಾರಿ "ಅವರು ಒಮ್ಮೆ ಕರೆದರೆ ಸಾಕು, ನಾನು ಅವರೊಂದಿಗೆ ಇದ್ದು ಅವರ ಸೇವೆ ಮಾಡಲು ಸಿದ್ಧ" ಎಂದು ಹೇಳಿದ್ದಾರೆ!

ಪತಿ ಮೋದಿ ಪ್ರಧಾನಿ ಆದ ನಂತರ ಜಶೋದಾಬೆನ್ ಅವರಿಗೆ ಹೆಚ್ಚಿನ ಸವಲತ್ತುಗಳ ಬದಲಿಗೆ ಸಿಕ್ಕಿದ್ದು ಸಹಿಸಲಾಗದಂತಹ ಕಿರಿಕಿರಿ. ಅದೂ ಅವರಿಗೆ ಬೇಡವಾಗಿದ್ದ ಅವರು ಕೇಳಿರದಿದ್ದ ವಿಶೇಷ ರಕ್ಷಣಾ ತಂಡದಿಂದ. ಪ್ರೋಟಕಾಲ್ ಪ್ರಕಾರ ಮೋದಿ ಪ್ರಧಾನಿ ಆದಾಗಿನಿಂದ ಮೆಹಸಾನಾ ಎಂಬ ಪುಟ್ಟ ನಗರದಲ್ಲಿ ನಿವೃತ್ತ ಜೀವನ ನಡೆಸುತ್ತಿರುವ ಜಶೋದಾಬೆನ್ ಅವರಿಗೂ ರಕ್ಷಣೆ ಕೊಡಲಾಯಿತು. ದಿನದ 24 ಗಂಟೆಗಳ ಕಾಲ ಎರಡು ಪಾಳಿಯ ಹತ್ತು ಸದಸ್ಯರು ಇವರನ್ನು ಸುತ್ತುವರಿದಿರುತ್ತಿದ್ದರಲ್ಲದೆ ಅವರು ಹೋಗಿಬಂದಲ್ಲೆಲ್ಲ ಹಿಂಬಾಲಿಸುತ್ತಿದ್ದರು. ಜಶೋದಾಬೆನ್ ಅವರಿಗೆ ವಿಚಿತ್ರವಾಗಿ ಕಂಡಿದ್ದು ಸ್ವತಃ ಅವರೇ ಸಾರ್ವಜನಿಕ ಸಾರಿಗೆಯಲ್ಲೋ ಅಥವಾ ಆಟೋರಿಕ್ಷಾದಲ್ಲೋ ಹೋಗುತ್ತಿದ್ದರೆ, ಅವರ ರಕ್ಷಣೆಗೆಂದು ಅವರನ್ನು ಹಿಂಬಾಲಿಸುತ್ತಿದ್ದ ತಂಡ ಸರ್ಕಾರದ ಐಷಾರಾಮಿ ಏಸಿ ಕಾರ್‌ಗಳಲ್ಲಿ ಬರುತ್ತಿದ್ದದ್ದು! ಅಷ್ಟೇ ಅಲ್ಲ, 14,000 ಪಿಂಚಣಿಯಲ್ಲಿ ಅದು ಹೇಗೋ ಜೀವನ ಸಾಗಿಸುತ್ತಿರುವ ಜಶೋದಾಬೆನ್ ಅವರಿಗೆ "ನೀವು ನಮ್ಮನ್ನು ಅತಿಥಿಗಳಂತೆ ಪರಿಗಣಿಸಿ" ಎಂದು ರಕ್ಷಣಾ ತಂಡ ಅಂದದ್ದೂ ಕಿರಿಕಿರಿ ಉಂಟುಮಾಡಿದೆ. ಅದಕ್ಕೇ ಆಕೆ "ಪ್ರಧಾನಿಯ ಪತ್ನಿಯಾದ ನನಗೆ ಯಾರ ಆದೇಶದ ಮೇಲೆ ರಕ್ಷಣೆ ನೀಡಲಾಗಿದೆ? ಯಾರ ಆದೇಶದ ಮೇಲೆ ಇವರೆಲ್ಲಾ ನನ್ನನ್ನು ಹಿಂಬಾಲಿಸುತ್ತಿದ್ದಾರೆ? ನಾನು ಸಾರ್ವಜನಿಕ ವಾಹನದಲ್ಲಿ ಪ್ರಯಾಣಿಸುತ್ತಿದ್ದರೆ ಇವರಿಗೆಲ್ಲ ಸರ್ಕಾರಿ ಕಾರ್‌ಗಳಲ್ಲಿ ನನ್ನನ್ನು ಹಿಂಬಾಲಿಸುವ ಅಧಿಕಾರ ಕೊಟ್ಟವರು ಯಾರು? ಪ್ರಧಾನಿಯ ಪತ್ನಿಯಾದ ನನಗೆ ಇತರೆ ಯಾವ ಸೌಲಭ್ಯಗಳು ಸಿಗುತ್ತವೆ ಎಂಬ ವಿವರಗಳನ್ನು ನೀಡಿ" ಎಂದೆಲ್ಲ ಪ್ರಶ್ನಿಸಿದ್ದಾರೆ.

## ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಮೋದಿ ಪತ್ನಿ ಜಶೋದಾಬೆನ್ ಅವರನ್ನು ತೊರೆದಿರಬಹುದು, ನಿರ್ಲಕ್ಷಿಸಿರಬಹುದು. ಆದರೆ ಕಾನೂನಿನ ಪ್ರಕಾರ ಆಕೆ ಆತನ ಪತ್ನಿ ಆಗಿರುವುದರಿಂದ ಆಕೆಗೆ ಕಾನೂನುಬದ್ಧ ಹಕ್ಕುಗಳಿವೆ. ಅದೂ ಪ್ರಧಾನಿಯ ಪತ್ನಿಯಾದ ಕಾರಣಕ್ಕೆ ಅವರಿಗೆ ವಿಶೇಷ ಅಧಿಕಾರಗಳು ಮತ್ತು ವಿನಾಯಿತಿಗಳೂ ಸಿಗಬೇಕು. ಅವುಗಳು ಯಾವುವು ಎಂದು ಆಕೆ ಈಗ ಕೇಳುತ್ತಿದ್ದಾರೆ. ತನಗೆ ಸೂಕ್ತವಾದ ಮನೆ, ಕಾರು, ಇತ್ಯಾದಿಗಳು ಬೇಕು ಎಂದಲ್ಲ, ಬದಲಾಗಿ ತನಗೆ ಕಿರಿಕಿರಿ ಬೇಡ ಎಂಬ ಕಾರಣಕ್ಕೆ!


ಜಶೋದಾಬೆನ್ ಅವರು ಅರ್ಜಿ ಸಲ್ಲಿಸಿದ ದಿನ ಅವರ ಸಹೋದರ ಮಾರ್ಮಿಕವಾಗಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ "ಆಕೆ ಪತ್ನಿಯಾಗಿ ಆಶಿಸುತ್ತಿರುವ ಪ್ರೀತಿ ಆಕೆಗೆ ಸಿಗುತ್ತಿಲ್ಲ, ಬದಲಾಗಿ ಆಕೆ ಪ್ರಧಾನಿಯ ಪತ್ನಿ ಎಂಬ ಕಾರಣಕ್ಕೆ ಆಕೆ ಇಚ್ಛಿಸದ ರಕ್ಷಣೆ ಕೊಡಲಾಗಿದೆ." ಜಶೋದಾಬೆನ್ ಎಂಬ 'ಭಾರತೀಯ ನಾರಿ'ಯ ಬದುಕಿನ ವಿಪರ್ಯಾಸಗಳಲ್ಲಿ ಇದೂ ಒಂದು ಎನ್ನಬಹುದು. •


# ನಾಡಗೀತೆ ಪರಿಷ್ಕರಣೆ ವಿವಾದ: ಕೆಲವು ಗೊಂದಲಗಳು

ನಾಡಗೀತೆ'ಯ ಪರಿಷ್ಕರಣದ ವಿವಾದ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಗಿದೆ. ...ವಾಣಿ, ನವೆಂಬರ್ 22, 2014, ಪುಟ 6) ನಾಡೋಜ ಡಾ.ಚೆನ್ನವೀರ ...ಯವರು 'ಜೈ ಭಾರತ ಜನನಿಯ ತನುಜಾತೆ' ನಾಡಗೀತೆಯನ್ನು ಕುರಿತಂತೆ ...ಂಪು ಇದನ್ನು ನಾಡಗೀತೆಗೆಂದು ಬರೆದಿದ್ದಲ್ಲ, 'ಕೊಳಲು' ಸಂಕಲನದ ...ಇದು" ಎಂದಿದ್ದಾರೆ. ಪುಂಡಲೀಕ ಹಾಲಂಬಿಯವರ ಅಭಿಪ್ರಾಯದಲ್ಲಿ ...ಂಪು ಅವರು ಈ ಗೀತೆಯನ್ನು ರಚಿಸಿದಾಗ ಇದು ನಾಡಗೀತೆಯಾಗುತ್ತದೆ ... ಭಾವಿಸಿರಲಿಲ್ಲ". ನಾಡೋಜ ಕೆ.ಎಸ್.ನಿಸಾರ್ ಅಹಮದ್ ಅವರು ...ಂಪು ಬಂದು ತಮ್ಮ ಹಾಡನ್ನು ನಾಡಗೀತೆ ಮಾಡಿ ಎಂದು ಯಾರಲ್ಲೂ ...ಕೇಳಿರಲಿಲ್ಲ" ಎಂದಿದ್ದಾರೆ. ಈ ಹಿರಿಯರು ಕುವೆಂಪು ಅವರು ತಮ್ಮ ...ನ ದೋಣಿ' (ಪು.545)ಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ...ಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

...ದೊಂದು ಸ್ವಾರಸ್ಯದ ವಿಷಯ. 1924-25 ರ ನನ್ನದೊಂದು ...ತೆಯಲ್ಲಿ 'ಕರ್ನಾಟಕ ರಾಷ್ಟ್ರಗೀತೆ' ಎಂಬ ಕವನವಿದೆ. ಅದು ನನ್ನ ...ಯ ಕರ್ನಾಟಕ ಮಾತೆ' ಎಂಬ ನಾಡಗೀತೆಯ ಪ್ರಪಿತಾಮಹನೋ, ...ತಾಮಹನೋ ಆಗಿರಬೇಕು. ಠಾಕೂರರ 'ಜನಗಣಮನ'ದಂತೆ ನಮ್ಮ ...ನಾಡಿಗೂ ಒಂದು ರಾಷ್ಟ್ರಗೀತೆಯನ್ನು ನೀಡುವ ಪ್ರಯತ್ನದ ...ಸೃಷ್ಟಿಯಂತಿದೆ ಅದು. ಕನ್ನಡ ಸಾಹಿತ್ಯ ಪರಿಷತ್ತು ಅದನ್ನು ನಾಡಗೀತೆಯಾಗಿ ...ಸಿದಾಗ ಮೂರು ನಿಮಿಷಗಳಲ್ಲಿ ಅದನ್ನು ಹಾಡಿ ಮುಗಿಸುವಂತೆ ...ಸಿಕೊಳ್ಳಲಾಯಿತು. 47 ವರ್ಷಗಳ ಅನಂತರ 1972ನೇ ಜುಲೈ ...ರಲ್ಲಿ ಇಂದು (ನಾನೀಗ ಇದನ್ನು ಬರೆಯುತ್ತಿರುವುದು 27-7-1972) ... ಕರ್ನಾಟಕ ಎಂಬ ಹೆಸರಿಡುವ ನಿರ್ಣಯವನ್ನು ವಿಧಾನಸಭೆ ...ಸಿದೆ. ಬಹುಶಃ ಪರಿಷತ್ತು ಅಂಗೀಕರಿಸಿದ ನಾಡಗೀತೆಯನ್ನು ಸರಕಾರವೂ ...ಕೆಂದು ಹಾರೈಸುತ್ತೇನೆ."

...ವೆಂಪು ಅವರು ಠಾಕೂರರ 'ಜನಗಣಮನ' ದ ಹಾಗೆ ತಮ್ಮ ಗೀತೆಯೂ ...ಟಕದ 'ನಾಡಗೀತೆ' ಆಗಬೇಕೆಂಬ ಸದಾಶಯದಿಂದಲೇ ಬರೆದಿದ್ದಾರೆ. ...ಗೀತೆಯೊಂದನ್ನು ಹಾಡಲು ಬೇಕಾದ ಸಮಯ, ರೀತಿ, ರಿವಾಜುಗಳ ...ಅರಿವಿತ್ತು, ಇದೊಂದು ಉದ್ದೇಶಪೂರ್ವಕ ರಚನೆಯಾಗಿದೆ. ಸರಕಾರ ... 'ನಾಡಗೀತೆ'ಯನ್ನಾಗಿ ಸ್ವೀಕರಿಸಬೇಕೆಂಬ ಆಳದ ತುಡಿತವೂ ಅವರಿಗಿತ್ತು





ಎನ್ನುವುದು ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ. ಹಿರಿಯರು ತಮ್ಮ ನಿಲುವನ್ನು ಕುರಿತು ಮರುಚಿಂತನೆ ಮಾಡಬೇಕೆಂದು ವಿನಂತಿಸುವೆ.

ನಾಡೋಜ ಡಾ. ಎಂ.ಚಿದಾನಂದ ಮೂರ್ತಿಯವರು ಕುವೆಂಪು ಅವರ ನಾಡಗೀತೆಯನ್ನು ಸಾರಾಂಶೀಕರಿಸುತ್ತ "ಕರ್ನಾಟಕದ ಹೆಮ್ಮೆಯ ವಿದ್ಯಾರಣ್ಯ ಬಸವಣ್ಣ, ಮಧ್ವರಂಥ ಶ್ರೇಷ್ಠ ಸಾಧಕರಿಗೆ, ಚಿಂತಕರಿಗೆ, ಪಂಪ, ರನ್ನ, ಪೊನ್ನ, ಜನ್ನ, ಲಕ್ಷ್ಮೀಶರಂತಹ ಶ್ರೇಷ್ಠ ಕವಿಗಳಿಗೆ ಕರ್ನಾಟಕ ಮಾತೆ ಜನ್ಮ ನೀಡಿದ್ದಾಳೆ" ಎಂದಿದ್ದಾರೆ. ಇದು ಕುವೆಂಪು ಅವರ ನಾಡಗೀತೆಯಲ್ಲಿ 'ಮಧ್ವ'ರ ಹೆಸರು ಇದೆ ಎಂಬ ತಪ್ಪು ಕಲ್ಪನೆಯನ್ನು ಮೂಡಿಸುತ್ತದೆ. ಈ ಕುರಿತು ಈಗಾಗಲೇ ನಡೆದ ವಾಗ್ವಾದಗಳನ್ನು ಮರೆಮಾಚುತ್ತದೆ. ಡಾ. ಚಿದಾನಂದಮೂರ್ತಿಯವರು ತಮ್ಮ ಲೇಖನದ ಆರಂಭದಲ್ಲಿಯೇ "ರಾಷ್ಟ್ರಕವಿ ಕುವೆಂಪು 1930 ರಲ್ಲಿ ರಚಿಸಿದ 'ಜೈ ಭಾರತ ಜನನಿಯ ತನುಜಾತೆ' ಕವನವು ಅವರ ಕೈಯಲ್ಲೇ ಮುಂದೆ ಸಣ್ಣಪುಟ್ಟ ಮಾರ್ಪಾಟುಗಳನ್ನು ಪಡೆಯಿತು" ಎಂದು ಉಲ್ಲೇಖಿಸಿರುವುದರಿಂದ ಮೇಲೆ ಸೂಚಿಸಿದ ತಪ್ಪು ಅಭಿಪ್ರಾಯ ಮೂಡುತ್ತದೆ.

ಇಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಸ್ಪಷ್ಟೀಕರಣವನ್ನು ಗಮನಿಸಬೇಕು. "ನಾಡಗೀತೆಯಲ್ಲಿ ಮಧ್ವರ ಹೆಸರು ಸೇರಿಸಬೇಕೆಂದು ಕುವೆಂಪು ಅವರ ಹತ್ತಿರ ಬಂದವರೇನೂ ಬ್ರಾಹ್ಮಣರಾಗಲಿ, ಮಧ್ವಮತಾನುಯಾಯಿಗಳಾಗಲೀ ಅಲ್ಲ. ಅವರ ಚಿತಾವಣೆಯಿಂದ ಪ್ರಭಾವಿತಗೊಂಡ ಹಲವು ಮತಮೂಢ ಶೂದ್ರರೇ ಮುಂದಾಗಿದ್ದು. ತಾವು ಯಾರ ಪರವಾಗಿ ದನಿ ಎತ್ತಿದರೋ ಅವರೇ ಈ ರೀತಿ ವರ್ತಿಸುವುದನ್ನು ಕಂಡು ಕುವೆಂಪು ಏನಾದರೂ ಮಾಡಿಕೊಳ್ಳಿ ಎಂದು ಹೇಳಿಕಳಿಸಿದರೇ ಹೊರತು ಅದರ ತಿದ್ದುಪಡಿಗಳನ್ನು ತಾವೇ ಮಾಡಿಕೊಟ್ಟರೆಂಬುದು ಹಾಗೂ ಅದಕ್ಕೆ ಅವರ ಸಮ್ಮತಿ ಇತ್ತೆಂಬುದೂ ಶುದ್ಧ ಸುಳ್ಳು'. (ಕುವೆಂಪು; ಶತಮಾನದ ಶಿಖರ, ಪು. 5)

2004 ಫೆಬ್ರುವರಿ 23 ರಂದು ಕರ್ನಾಟಕ ಸರಕಾರವು ಅಧಿಕೃತವಾಗಿ ಘೋಷಿಸಿದ ಈ ನಾಡಗೀತೆಯನ್ನು, ಹಿರಿಯರಿಗೆ ನಿಲ್ಲಲು ತೊಂದರೆ ಹಾಗೂ ಬೇರೆ ಬೇರೆ ದಾಟಿ, ಲಯಗಳಲ್ಲಿ ಹಾಡುತ್ತಿರುವ ಕಾರಣಗಳಿಂದ ಮೊಟಕುಗೊಳಿಸಿ ಪರಿಷ್ಕರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿಯಮಿಸಿದ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು ಡಾ. ಚೆನ್ನವೀರ ಕಣವಿಯವರು. ಅವರು ಕುವೆಂಪು ನಾಡಗೀತೆಯ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಸಾಲನ್ನು ತೆಗೆದಿದ್ದಾರೆಂದು ಸುದ್ದಿ ಹಬ್ಬಿಸಿರುವ ಹಾಗೂ ಆ ಸುದ್ದಿಯನ್ನೇ ನಂಬಿ ಕೆಲವರು ವಿರೋಧಿ ಹೇಳಿಕೆ ನೀಡುತ್ತಿರುವುದರ ಬಗ್ಗೆ ನೈತಿಕ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಆಧಾರರಹಿತವಾಗಿ ಹೇಳಿಕೆ ನೀಡುವುದು ತಪ್ಪು.

ರವೀಂದ್ರನಾಥ ಠಾಕೂರರಿಗೆ ತಮ್ಮ ಗೀತೆ 'ರಾಷ್ಟ್ರಗೀತೆ'ಯಾಗಬೇಕೆಂಬ ಉದ್ದೇಶವಿರಲಿಕ್ಕಿಲ್ಲ. ಹೀಗಾಗಿ ಅವರ ಐದು ಭಾಗಗಳ ಸುದೀರ್ಘ ಪದ್ಯದ ಒಂದು ಭಾಗವನ್ನು ಎತ್ತಿಕೊಂಡು ರಾಷ್ಟ್ರಗೀತೆಯನ್ನಾಗಿ ಸ್ವೀಕರಿಸಲಾಗಿದೆ. ಒಂದು ವೇಳೆ ಮೊದಲ ಭಾಗದಲ್ಲಿ ಇನ್ನೂ ಕೆಲವು ಸಾಲುಗಳಿದ್ದರೂ ಅದನ್ನು ಒಪ್ಪಿಕೊಳ್ಳಲಾಗುತ್ತಿತ್ತು, ಆದರೆ ಕುವೆಂಪು ಠಾಕೂರರ ಪರಿಷ್ಕೃತ ರಾಷ್ಟ್ರಗೀತೆಯನ್ನು ಅನುಲಕ್ಷಿಸಿ ಸಾಕಷ್ಟು ಯೋಚಿಸಿ 'ನಾಡಗೀತೆ'ಗಾಗಿಯೇ ಈ ಗೀತೆಯನ್ನು ಬರೆದಿರುವುದರಿಂದ ಅದನ್ನು ಮತ್ತೆ ಮತ್ತೆ ಮೊಟಕುಗೊಳಿಸುವ ಅಥವಾ ಬೇರೇನನ್ನೋ ಸೇರಿಸುವ ಪ್ರಯತ್ನ ಕುವೆಂಪು ಅವರ ವ್ಯಕ್ತಿತ್ವಕ್ಕೆ ಗೌರವ ತರುವಂಥದ್ದಲ್ಲ.


• ಡಾ. ಎಂ.ಡಿ. ಒಕ್ಕುಂದ



# ನಕ್ಸಲೀಯ ಚಳವಳಿಯಲ್ಲಿ ಬದಲಾವಣೆಯ ಗಾಳಿ

ಕರ್ನಾಟಕದ ನಕ್ಸಲೀಯ ಚಳವಳಿಯ ಚರಿತ್ರೆಯಲ್ಲಿ ಹೊಸ ಪರ್ವದ ಗಾಳಿ ಬೀಸುತ್ತಿದೆ. ಸುಮಾರು ಎರಡು ದಶಕಗಳಿಗೂ ಹೆಚ್ಚುಕಾಲ ನಕ್ಸಲೀಯ ಸಂಘಟನೆಯಲ್ಲಿ ಸಕ್ರಿಯರಾಗಿದ್ದ ಇಬ್ಬರು ನಾಯಕರು ಸದ್ಯದಲ್ಲೆ 'ಪ್ರಜಾತಾಂತ್ರಿಕ ಮುಖ್ಯವಾಹಿನಿ'ಗೆ ಬಂದು ಸೇರ್ಪಡೆಯಾಗಲಿದ್ದಾರೆ. 'ನಕ್ಸಲೀಯರ ಶರಣಾಗತಿ ಮತ್ತು ಪುನರ್ವಸತಿ ಯೋಜನೆ' ಅಡಿ ರಾಜ್ಯ ಸರ್ಕಾರ ಸ್ಥಾಪಿಸಿರುವ ರಾಜ್ಯ ಮಟ್ಟದ ಸಮಿತಿ ನವೆಂಬರ್ 26ಕ್ಕೆ ಸಭೆ ಸೇರಿ, ಇಬ್ಬರು ನಕ್ಸಲ್ ನಾಯಕರಾದ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್‌ರನ್ನು ಮುಖ್ಯವಾಹಿನಿಗೆ ಕರೆತರುವ ಪ್ರಕ್ರಿಯೆಗೆ ಅಂತಿಮ ರೂಪುರೇಷೆ ಕೊಟ್ಟಿದೆ. ಸರ್ಕಾರ ನಿಗದಿಪಡಿಸಿರುವಂತೆ ಎಲ್ಲವೂ ನಡೆದರೆ, ಬಹುಶಃ ಡಿಸೆಂಬರ್ ಮೊದಲ ವಾರದಲ್ಲೇ ನಕ್ಸಲ್ ನಾಯಕರ ಬಹಿರಂಗ ಆಗಮನವನ್ನು ನಾವು ನಿರೀಕ್ಷಿಸಬಹುದು.


ದೇಶದ ನಕ್ಸಲೀಯ ಚರಿತ್ರೆಯಲ್ಲಿ ಸರ್ಕಾರದ



ಮುಂದೆ ಅಥವಾ ಪೊಲೀಸರ ಮುಂದೆ ನಕ್ಸಲೀಯರು ಶರಣಾಗುವ ಪ್ರಕ್ರಿಯೆ ಹೊಸದೇನಲ್ಲ. ಹೀಗೆ ಶರಣಾದವರಲ್ಲಿ ಕೇಂದ್ರ ಮಟ್ಟದ, ರಾಜ್ಯ ಮಟ್ಟದ ನಾಯಕರಿಂದ ಹಿಡಿದು ನಕ್ಸಲೀಯರ ಸಶಸ್ತ್ರ ದಳಗಳ ಸಾಮಾನ್ಯ ಸದಸ್ಯರವರೆಗೂ ಎಲ್ಲರೂ ಇದ್ದಾರೆ. ಪೊಲೀಸರ ನಾನಾ ಒತ್ತಡಗಳಿಗಾಗಿ ಅಥವಾ ಖಾಸಗಿ ಕಾರಣಗಳಿಗಾಗಿ ಈ ಹಿಂದೆ ಹಲವಾರು ನಕ್ಸಲೀಯರು 'ಶರಣಾಗತಿ' ಆಗಿದ್ದಾರೆ. ಆದರೆ ಕರ್ನಾಟಕದಲ್ಲಿ ಈಗ ಆರಂಭವಾಗಿರುವ ಪ್ರಕ್ರಿಯೆ ಈ ಮೇಲಿನ ಶರಣಾಗತಿ ಪ್ರಕ್ರಿಯೆಗಳಿಗಿಂತ ತೀರಾ ಭಿನ್ನವಾದುದು, ವಿನೂತನವಾದುದು.

ದಶಕಗಳ ಕಾಲ ನಕ್ಸಲೀಯ ಚಳವಳಿಯಲ್ಲಿದ್ದುಕೊಂಡು, ಅಜ್ಞಾತವಾಸದಲ್ಲಿದ್ದ ಈ ನಾಯಕರು ಬಹಿರಂಗವಾಗಿ ಪ್ರಜಾತಾಂತ್ರಿಕ ಚಳವಳಿಗಳಲ್ಲಿ ಭಾಗವಹಿಸುವ ಇಚ್ಛೆಯಿಂದ ಮುಖ್ಯವಾಹಿನಿಗೆ ಬರುತ್ತಿರುವುದೇ ಇಂದಿನ ಪ್ರಕ್ರಿಯೆಯ ಭಿನ್ನತೆ. ಈ ಪ್ರಕ್ರಿಯೆಯ ದೂರಗಾಮಿ ರಾಜಕೀಯ ಪರಿಣಾಮಗಳನ್ನು ಮನಗಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸರ್ಕಾರ ಇಂಥಾ ಸಂವೇದನಾಶೀಲ ತೀರ್ಮಾನ ಕೈಗೊಂಡಿದೆ. ಸರ್ಕಾರ ಹಾಗೂ ನಕ್ಸಲ್ ನಾಯಕರ ನಡುವೆ ಸೇತುವೆಯಾಗಿ ಈ ಪ್ರಕ್ರಿಯೆಯನ್ನು ತಾರ್ಕಿಕ ಅಂತ್ಯದವರೆಗೂ ಕೊಂಡೊಯ್ದ ಖ್ಯಾತಿ ಶಾಂತಿಗಾಗಿ ನಾಗರಿಕರ ವೇದಿಕೆ **(Citizen's Initiative for Peace - CIP)**ಗೆ ಸಲ್ಲಬೇಕು.

ಕರ್ನಾಟಕದಲ್ಲಿ ಈ ಪ್ರಕ್ರಿಯೆ ಆರಂಭವಾಗಿದ್ದು ಒಂದೂವರೆ ವರ್ಷದ ಹಿಂದೆಯೇ. ಈಗಿನ ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಗೃಹಮಂತ್ರಿ ಕೆ.ಜೆ.ಜಾರ್ಜ್ "ನಕ್ಸಲರ ಜೊತೆ ಮಾತುಕತೆಗೆ ಸಿದ್ಧ" ಎಂದು ಹಲವು ಬಾರಿ ಹೇಳಿದ್ದರು. "ನಕ್ಸಲ್ ಚಳವಳಿಯ ಬೇರು ಸಾಮಾಜಿಕ ಅಸಮಾನತೆಯಲ್ಲಿದೆ" ಎಂದೂ, "ನಕ್ಸಲ್ ಹೋರಾಟಗಾರರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ ಹೋರಾಟ ನಡೆಸಲು ಮುಂದೆ ಬಂದಲ್ಲಿ ಸರ್ಕಾರ ಅದಕ್ಕೆ ಅವಕಾಶ ಮಾಡಿಕೊಡುತ್ತದೆ" ಎಂದೂ ಅವರು ಆಶಯವನ್ನು ವ್ಯಕ್ತಪಡಿಸಿದ್ದರು. ರಾಜಕಾರಣಿಗಳು ಸಂದರ್ಭಾನುಸಾರ ಇಂಥಾ ಹೇಳಿಕೆ ನೀಡುವುದು ವಾಡಿಕೆ. ಆಂಧ್ರದ ಮುಖ್ಯಮಂತ್ರಿಯಾಗಿದ್ದ ಎನ್.ಟಿ.ರಾಮರಾವ್ 'ನಕ್ಸಲೀಯರೇ ದೇಶಭಕ್ತರು' ಎಂದು ಬಹಿರಂಗ ವೇದಿಕೆಗಳಲ್ಲಿ ಘೋಷಿಸಿ, ನಂತರ ಪೊಲೀಸ್ ದಮನಕಾಂಡದ ಮೂಲಕ ನಕ್ಸಲೀಯರನ್ನು ನಿರ್ಮೂಲನೆ ಮಾಡಲು ಹೊರಟಿದ್ದು, ಪರಿಣಾಮವಾಗಿ ಎರಡೂ ಕಡೆಗಳಲ್ಲೂ ಸಾವಿರಾರು ಮಂದಿ ಪ್ರಾಣ



ಕಳೆದುಕೊಳ್ಳುವಂತಾಗಿದ್ದು ಈಗ ಇತಿಹಾಸ. ಅಷ್ಟೇ ಏಕೆ? ಈಗಿನ ಪ್ರಧಾನಿ ನರೇಂದ್ರ ಮೋದಿ ಕೂಡ ನಕ್ಸಲೀಯರು ಪ್ರಬಲವಾಗಿರುವ ಬಿಹಾರ, ಜಾರ್ಖಂಡ್ ರಾಜ್ಯಗಳಲ್ಲಿ ಚುನಾವಣಾ ಪ್ರಚಾರ ನಡೆಸಿದ ವೇಳೆಯಲ್ಲಿ 'ನಕ್ಸಲೀಯ ಸಮಸ್ಯೆ ಸಾಮಾಜಿಕ-ಆರ್ಥಿಕ ಸಮಸ್ಯೆ' ಎಂದು ಭಾಷಣ ಬಿಗಿದಿದ್ದಾರೆ. ಆ ಮಾತು ಬೇರೆ.

ಆದರೆ ಇಂದಿನ ಸಿದ್ದರಾಮಯ್ಯನವರ ಸರ್ಕಾರ ಈ ನಿಲುವನ್ನು ಕೇವಲ ಪ್ರಚಾರದ, ಬಾಯಿಮಾತಿನ ವಿಷಯವಾಗಿಸದೆ ಆ ನಿಲುವಿಗೆ ಬದ್ಧತೆ ತೋರುತ್ತಿರುವುದೇ ಈ ಸಂದರ್ಭದ ವಿಶೇಷ. ಸರ್ಕಾರದ ನಿಲುವನ್ನು ಸ್ವಾಗತಿಸಿದ ಹಿರಿಯ ಸ್ವಾ... ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವ... ನೇತೃತ್ವದ 'ಶಾಂತಿಗಾಗಿ ನಾಗರಿಕ ವೇದಿಕೆ' 20... ಜುಲೈನಲ್ಲಿ ಸರ್ಕಾರಕ್ಕೂ ಮತ್ತು ನಕ್ಸಲೀಯ ಹೋರಾಟಗಾರರಿಗೂ ಬಹಿರಂಗ ಮನವಿ ಮಾ... ಮುಖ್ಯಮಂತ್ರಿ ಮತ್ತು ಗೃಹಮಂತ್ರಿಗಳನ್ನು ಭೇಟಿ ಮಾಡಿ ಕಳೆದ 45 ವರ್ಷಗಳ ನಕ್ಸಲೀಯ ಚಳವಳಿಯಲ್ಲಿ ನಡೆದ ರಕ್ತಪಾತದ ಅಧ್ಯಾಯವನ್ನು ಮುಂದುವರೆಸದೆ, ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ ... ಹೋರಾಟ ಚಟುವಟಿಕೆಗಳನ್ನು ನಡೆಸಲು ಬಯ... ನಕ್ಸಲೀಯ ನಾಯಕರಿಗೆ ಸರ್ಕಾರ ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿತು.

ವೇದಿಕೆ ಹೊರಡಿಸಿದ ಮನವಿ ಪತ್ರ ಅದರ ನಿಲುವಿಗೆ ಸಾಕ್ಷಿಯಾಗಿದೆ. "ಒಂದೆಡೆ ಸರ್ಕಾರಗಳ... ನಕ್ಸಲ್ ಚಳವಳಿ ಹುಟ್ಟಲು ಮೂಲಕಾರಣಗಳಾ... ಬಡತನ ಮತ್ತು ಅಸಮಾನತೆಗಳನ್ನು ನಿವಾರಿಸಲು ವಿಫಲವಾಗಿರುವುದು ಮತ್ತು ಇನ್ನೊಂದೆಡೆ ಆ ಚಳವಳಿಯನ್ನು ಕೇವಲ ಕಾನೂನು ಸಮಸ್ಯೆಯಂ... ಪರಿಗಣಿಸುತ್ತಾ ಪೊಲೀಸ್ ಬಲದ ಮೂಲಕ ... ಪ್ರಯತ್ನಿಸುತ್ತಿರುವುದೇ ರಕ್ತಪಾತಕ್ಕೆ ಪ್ರಮುಖ ಕಾ... ಹಾಗೆಯೇ ನಕ್ಸಲ್ ಹೋರಾಟಗಾರರ ಸೈದ್ಧಾಂತಿ... ಮೊಂಡುತನ ಮತ್ತು ವಿನಾಕಾರಣ ಹಿಂಸೆಯಿಂದ ಸಮಾಜದ ಶಾಂತಿ ಮತ್ತು ಪ್ರಜಾತಂತ್ರಕ್ಕೆ ಧಕ್ಕೆ ಬಂದಿದೆ. ಈ ಸಿಕ್ಕು ಬಗೆಹರಿಸಿಕೊಳ್ಳಬೇಕೆಂದರೆ ಸರ್ಕಾರ ಮತ್ತು ನಕ್ಸಲ್ ಚಳವಳಿಗೆರಡೂ ಗಂಭೀರವಾದ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ" ಎಂದು ಮನವಿ ಮಾಡಿ...

ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ, ಹಿರಿಯ ವಕೀಲರಾ... ಎ.ಕೆ.ಸುಬ್ಬಯ್ಯನವರು, ನಮ್ಮ ಪತ್ರಿಕೆಯ ಸಂಪಾ... ಗೌರಿ ಲಂಕೇಶ್, ಹಿರಿಯ ಚಿಂತಕರಾದ ದೇವನ... ಮಹಾದೇವ, ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿ... ದಿವಂಗತ ಡಾ. ಯು.ಆರ್.ಅನಂತಮೂರ್ತಿ, ನಾ... ಪ್ರಮುಖ ಜನಪರ ಚಿಂತಕರೂ, ಸಾಹಿತಿಗಳೂ ಪ್ರೊ.ಬರಗೂರು ರಾಮಚಂದ್ರಪ್ಪ, ಡಾ. ಬಂಜಗೆ... ಜಯಪ್ರಕಾಶ್, ಡಾ. ರಹಮತ್ ತರಿಕೆರೆ, ಜಿ.ರಾಜಶೇಖರ್, ಡಾ.ಟಿ.ಆರ್.ಚಂದ್ರಶೇಖರ್, ಕೆ.ಫಣಿರಾಜ್, ಸಂವಾದ ಪತ್ರಿಕೆಯ ಸಂಪಾದಕರ... ಇಂದೂಧರ ಹೊನ್ನಾಪುರ, ಹೊಸತು ಪತ್ರಿಕೆಯ ಸಂಪಾದಕರೂ ಹಿರಿಯ ಚಿಂತಕರೂ ಆದ ಡಾ. ಜಿ.ರಾಮಕೃಷ್ಣ ಹಿರಿಯ ಪತ್ರಕರ್ತರಾದ ಪಾರ್ವ... ಸನತ್‌ಕುಮಾರ್ ಬೆಳಗಲಿ, ವಾರ್ತಾಭಾರತಿ ಪತ್ರಿ... ಸಂಪಾದಕರಾಗಿರುವ ಬಿ.ಎಂ.ಬಶೀರ್, ಸಾಹಿತಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಎಲ್.ಹನುಮಂತಯ್ಯ, ಮಾನವ ಹಕ್ಕು ಹೋರಾಟಗಾರರಾದ ಪ್ರೊ. ನಗರಿ ಬಾಬಯ್ಯ, ಪ್ರೊ.ನಗರಗೆರೆ ರಮೇಶ್ ಮೊದಲಾದ ಗಣ್ಯರು ಮನವಿ ಪತ್ರಕ್ಕೆ ಸಹಿ ಮಾಡಿದ್ದರು.

ಈ ನಾಡಿನಲ್ಲಿ ಶಾಂತಿ ಮತ್ತು ನೆಮ್ಮದಿಗಳ...

## ನೂರ್ ಶ್ರೀಧರ್ ಹೆಜ್ಜೆ ಜಾಡು

ತಂದೆ ತಾಯಿ ಇಟ್ಟ ಹೆಸರು ನೂರ್ ಜುಲ್ಫಿಕರ್. ಚಳವಳಿ ಕೊಟ್ಟ ಹೆಸರು ನೂರ್ ಶ್ರೀಧರ್. ಮೂಲತಃ ಚಿತ್ರದುರ್ಗ ಜಿಲ್ಲೆಯವರು. ಇವರದು ಜಾತಿ, ಮತಗಳ ಭೇದಭಾವವನ್ನು ವಿರೋಧಿಸುತ್ತಿದ್ದ, ಮುಲ್ಲಾಗಳ ಹಾಗೂ ಅರ್ಚಕರ ಟೊಳ್ಳು ಹಾಗೂ ಶಕ್ತತನವನ್ನು ಧಿಕ್ಕರಿಸುತ್ತಿದ್ದ, ಸನ್ನಡತೆಯೇ ಏಕೈಕ ಸನ್ಮಾರ್ಗ ಎಂಬುದನ್ನು ಬೋಧಿಸುತ್ತಿದ್ದ ಸೂಫಿ ಪಂಥಕ್ಕೆ ಸೇರಿದ ಕುಟುಂಬ. ತಾತ (ತಾಯಿಯ ತಂದೆ) ಸೂಫಿ ಗುರುಗಳು. ಅಜ್ಜ-ಅಜ್ಜಿ ಆ ಕಾಲದಲ್ಲೇ ಅಂತರ್ ಧರ್ಮೀಯ ವಿವಾಹವಾದವರು. ಅಜ್ಜ ಮುಸ್ಲಿಂ, ಅಜ್ಜಿ ರೆಡ್ಡಿ ಜಾತಿಯವರು.

ಚಳ್ಳಕೆರೆ ಬಳಿಯ ಚಿಕ್ಕಮ್ಮನಹಳ್ಳಿಯಲ್ಲಿ "ಹೊನ್ನೂರ ಸ್ವಾಮಿ" ಎಂದು ಹಿಂದೂಗಳಿಂದಲೂ, "ನೂರುಲ್ಲ ಚಿಷ್ತಿ" ಎಂದು ಮುಸ್ಲಿಮರಿಂದಲೂ ಕರೆಸಿಕೊಳ್ಳುವ ಇವರ ದರ್ಗಾ ಇದೆ. ನೂರ್ ಶ್ರೀಧರ್ ಬಾಲ್ಯವನ್ನು ತೀವ್ರ ಬಡತನದಲ್ಲೇ ಕಳೆದವರು; ಸೂಫಿಸಂನ ಉನ್ನತ ಮೌಲ್ಯಗಳಿಂದ ಪ್ರಭಾವಿತರಾದವರು.

ಭರಮಸಾಗರದಲ್ಲಿ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಕಾಲೇಜು ಶಿಕ್ಷಣಕ್ಕೆಂದು ಚಿತ್ರದುರ್ಗಕ್ಕೆ ಬಂದರು. ಚಿತ್ರದುರ್ಗದ ಜೆಎಂಐಟಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಕಲಿಯುತ್ತಿದ್ದಾಗ ಅದೇ ಕಾಲೇಜಿನಲ್ಲಿ ಓದಲು ಬಂದಿದ್ದ ಆಂಧ್ರ ಪ್ರದೇಶದ ವಿದ್ಯಾರ್ಥಿ ಮಿತ್ರರ ಮೂಲಕ ನಕ್ಸಲ್ ಚಳವಳಿಯ ಪರಿಚಯವಾಯಿತು.

ಅನ್ಯಾಯದ ವಿರುದ್ಧ ರ್‍ಯಾಡಿಕಲ್ ವಿದ್ಯಾರ್ಥಿಗಳ ಹೋರಾಟ, ಜನರ ಬಗೆಗಿನ ಅವರ ಕಾಳಜಿ, ತ್ಯಾಗ-ಬಲಿದಾನಗಳು, ಕ್ರಾಂತಿಯ ಮೂಲಕ ಸಮಸಮಾಜ ತರಬೇಕು ಎಂಬ ಅವರ ಆಶಯ ನೂರ್‌ರನ್ನು ಬಹಳವಾಗಿಯೇ ಪ್ರಭಾವಿಸಿದವು. ಅನ್ಯಾಯ, ಅಸಮಾನತೆಗಳ ವಿರುದ್ಧ ಹೋರಾಡಬೇಕು ಎಂಬ ಹಂಬಲ ಅವರನ್ನು ಚಳವಳಿಗೆ ಕರೆತಂದಿತು.

1986ರಲ್ಲಿ ಪ್ರಗತಿಪರ ವಿದ್ಯಾರ್ಥಿ ಕೇಂದ್ರ 'ಪಿವಿಕೆ' ದಡಿ ಚಿತ್ರದುರ್ಗದ ವಿದ್ಯಾರ್ಥಿಗಳ ನಡುವೆ ನಾನಾ ಹೋರಾಟ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. 1988ರಲ್ಲಿ ಕೈಗಾ ವಿರೋಧಿ ಹೋರಾಟವನ್ನು ಬಲಪಡಿಸುವ ಉದ್ದೇಶದಿಂದ ಇಂಜಿನಿಯರಿಂಗ್ ವಿದ್ಯಾಭ್ಯಾಸ ತೊರೆದು ಕಾರವಾರಕ್ಕೆ ಹೋದರು. ಸಂಘಟನೆಯ ತೀರ್ಮಾನದ ಮೇರೆಗೆ 1990ರಲ್ಲಿ ವಿದ್ಯಾರ್ಥಿ ಸಂಘಟನೆ ಕಟ್ಟಲು ಬೀದರ್ ಜಿಲ್ಲೆಗೆ ವರ್ಗಾವಣೆಗೊಂಡರು.

ಪ್ರಗತಿಪರ ಹಾಗು ಕ್ರಾಂತಿಕಾರಿ ಸಾಹಿತ್ಯದ ಅಭಾವವನ್ನು ಮನಗಂಡು ಹಲವು ಸಮಾನ ಮನಸ್ಕರೊಂದಿಗೆ ಸೇರಿ 1992ರಲ್ಲಿ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಸ್ಥಾಪಿಸಿದರು. ಬುಕ್ ಟ್ರಸ್ಟ್‌ನ ಕೆಲಸಗಳಿಗಾಗಿ ಬೆಂಗಳೂರಿಗೆ ಬಂದರು. 1993ರಿಂದ 2000ದ ತನಕ 'ವಿಮುಕ್ತಿ' ಎಂಬ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿದರು. ಜೊತೆಗೆ ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟದಲ್ಲೂ ಸಕ್ರಿಯರಾಗಿದ್ದರು.


1995ರಲ್ಲಿ ಪೀಪಲ್ಸ್ ವಾರ್ ಪಕ್ಷದ ರಾಜ... ಸದಸ್ಯರಾಗಿ ಆಯ್ಕೆಯಾದರು. ಪೀಪಲ್ಸ್ ವಾ... ಮಾವೊವಾದಿ ಪಕ್ಷವಾಗಿ ರೂಪಾಂತರಗೊಂಡ ನ... 2006ರ ತನಕ - ಅಂದರೆ ಮಾವೋವಾದಿ ... ತೊರೆಯುವವರೆಗೂ - ರಾಜ್ಯ ಸಮಿತಿ ಸದಸ್ಯರ...

2001ರಿಂದ 2006ರ ತನಕ ಮಾವೋ... ಪಕ್ಷದೊಳಗೆ ನಡೆದ ಗಾಢವಾದ ಸೈದ್ಧಾಂತಿಕ ಸ... ನೇತೃತ್ವ ನೀಡಿದವರಲ್ಲಿ ಪ್ರಮುಖರು. ಮಾವೋ... ಪಕ್ಷದಿಂದ ಹೊರಬಂದು ಆರ್‌ಸಿಪಿ ಹೆ... ಗುರುತಿಸಿಕೊಂಡರೂ ಪೊಲೀಸ್ ಕೇಸುಗಳ ಕಾ... ಅಜ್ಞಾತವಾಗುಳಿದು ತೆರೆಮರೆಯಲ್ಲೇ ತಮ್ಮ ಕೆಲ... ಮುಂದುವರೆಸಿಕೊಂಡು ಬಂದಿದ್ದಾರೆ. ಭಾರತ ಸ... ವಿಶ್ಲೇಷಣೆ, ಕಮ್ಯುನಿಸ್ಟ್ ಚಳವಳಿಯ ಅನುಭವ... ಕ್ರಾಂತಿಯ ವಸ್ತುನಿಷ್ಠ ಮಾರ್ಗದ ಅನ್ವೇಷಣೆಯಲ್ಲಿ ... ತೊಡಗಿಸಿಕೊಂಡಿದ್ದಾರೆ. ಅವರ ಅಧ್ಯಯನ ಗ್ರ... "ಮಾವೋವಾದ ಹಾಗೂ ಭಾರತದ ಮಾವ... ಚಳವಳಿ" ಕೃತಿ 2012ರಲ್ಲಿ ಬಿಡುಗಡೆಗೊಂಡಿ... ಪಕ್ಷಗಳ ಮತ್ತು ದೇಶದ ವಿವಿಧ ನಕ್ಸಲೀಯ ಗು... ನಡುವೆ ಈ ಕೃತಿ ಸಾಕಷ್ಟು ಚರ್ಚೆಯನ್ನು ಹುಟ್ಟು...

ಮುಖ್ಯವಾಹಿನಿಗೆ ಬಂದ ನಂತರ ಪ್ರಜಾ ಚ... ಇಂದು ಎದುರಿಸುತ್ತಿರುವ ಬಿಕ್ಕಟ್ಟಿಗೆ ಕಾರಣಗಳನ್ನು ಇಂದಿನ ಕಾಲಮಾನಕ್ಕೆ ಸೂಕ್ತವಾದ ಹೊಸ ಚಳವಳಿಗಳನ್ನು ರೂಪಿಸಬೇಕೆಂಬ ಶ್ರೀಧರ್ ಅವ... ಸ್ವಾಗತಾರ್ಹವಾದುದು.

# ಸಿರಿಮನೆಯ ದಾರಿಯಲ್ಲಿ...

ಸಿರಿಮನೆ ನಾಗರಾಜ್ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ...ಮನೆ ಎಂಬ ಕುಗ್ರಾಮದ ಒಂದು ಕೃಷಿಕ ಕುಟುಂಬದಿಂದ ಬಂದವರು. ...ಗರಾಜ್‌ರ ಬಾಲ್ಯದಲ್ಲಿ ಹಸಿವು ಇವರ ಬೆನ್ನು ಬಿಡಲಿಲ್ಲ. ಶೃಂಗೇರಿಯಲ್ಲಿ ...ಸ್ಕೂಲ್, ಉಡುಪಿಯಲ್ಲಿ ಪಿಯುಸಿ, ಮೈಸೂರಿನಲ್ಲಿ ಬಿ.ಎಸ್ಸಿ ಪದವಿ ...973). ಜೊತೆಗೆ ಹಿಂದಿಯಲ್ಲಿ 'ರಾಷ್ಟ್ರಭಾಷಾ ವಿಶಾರದ' ಪದವಿ ಕೂಡ. ...ಗ ನಕ್ಸಲೀಯ ನಾಯಕನಾಗಿರುವ ನಾಗರಾಜ್ ಈ ಹಿಂದೆ ಆರೆಸ್ಸೆಸ್‌ನ ...ಯ ಸದಸ್ಯರಾಗಿದ್ದರೆಂಬುದು ಬಹಳ ಮಂದಿಗೆ ಗೊತ್ತಿಲ್ಲ. ...ನೇ ತರಗತಿಯಲ್ಲಿದ್ದಾಗಲೇ ಆರೆಸ್ಸೆಸ್ ಸೇರಿ ಡಿಗ್ರಿಯವರೆಗೂ ...ದ್ದರು. ಸಂಘದ ಅಂತರ್ಯದಲ್ಲಿರುವ ಬ್ರಾಹ್ಮಣವಾದದ ... ಮುಸ್ಲಿಂ-ಕ್ರೈಸ್ತರ ಬಗೆಗಿನ ದ್ವೇಷದ ಬಗ್ಗೆ ಪ್ರಶ್ನೆಗಳನ್ನೆತ್ತಿದರು. ...ಸ್ಸಿಗರ ದೇಶಪ್ರೇಮ ಪೊಳ್ಳೆಂಬುದು ಇವರ ಮನಸ್ಸಿಗೆ ...ತ್ರಿಯಾಗುತ್ತಿದ್ದಂತೆ ಆರೆಸ್ಸೆಸ್ ಇವರಿಂದ ತನ್ನಿಂದ ತಾನೇ ...ರವಾಯಿತು.



1973ರಿಂದ 1979ರವರೆಗೆ ಮೈಸೂರಿನಲ್ಲಿ ಅಂಚೆ ...ಖೆ ಮತ್ತು ಟೆಲಿಫೋನ್ ಇಲಾಖೆಯಲ್ಲಿ ನೌಕರಿ. ಆಗಲೇ ...ರ್ಕ್ಸ್‌ವಾದಿ ಅಧ್ಯಯನ ತಂಡದ ಪರಿಚಯವಾಗಿದ್ದು. ...ಂದೆ ಇವರ ಬಾಳಸಂಗಾತಿಯಾದ ಹೇಮಲತಾ ಕೂಡ ತಂಡದಲ್ಲೊಬ್ಬರಾಗಿದ್ದವರು.

ಕರ್ನಾಟಕದಲ್ಲಿ 1970ರ ದಶಕ ಬಹಳಷ್ಟು ಚಳವಳಿ-ಹೋರಾಟಗಳ ...ಕಾಲ. ಈ ಅವಧಿಯಲ್ಲಿ ದಲಿತ, ರೈತ ಹೋರಾಟಗಳಲ್ಲಿ ಸಕ್ರಿಯವಾಗಿ ...ತೊಡಗಿಸಿಕೊಂಡಿದ್ದ ನಾಗರಾಜ್ ಕ್ರಮೇಣ ಪೀಪಲ್ಸ್ ವಾರ್ ಪಕ್ಷದ ಸಂಪರ್ಕಕ್ಕೆ ...ದರು. ಸಾಮಾಜಿಕ ಕಾರ್ಯಕರ್ತನಾಗಿ ಪೂರ್ಣಪ್ರಮಾಣದಲ್ಲಿ ...ತೊಡಗಿಸಿಕೊಳ್ಳಲು ತೀರ್ಮಾನಿಸಿ 1979ರಲ್ಲಿ ಉದ್ಯೋಗವನ್ನು ತೊರೆದರು. ...ಪತ್ನಿ ಹೇಮಲತಾ ಅವರ ಬ್ಯಾಂಕ್ ಉದ್ಯೋಗವನ್ನು ಚಿಕ್ಕಮಗಳೂರು ...ಯ ಕೊಪ್ಪಕ್ಕೆ ವರ್ಗ ಮಾಡಿಸಿಕೊಂಡು, ಅಲ್ಲಿಯೇ 1982ರಲ್ಲಿ ...ಕೆಯೊಂದನ್ನು ಆರಂಭಿಸಿದರು. 'ಮುಂಜಾವು' ಹೆಸರಿನ ಈ ಪತ್ರಿಕೆ ಶೃಂಗೇರಿ, ...ಪ್ಪ ನರಸಿಂಹರಾಜಪುರ ತಾಲೂಕುಗಳ ಎಲ್ಲ ಜನಪರ ವ್ಯಕ್ತಿಗಳ, ಸಂಘಟನೆಗಳಿಗೆ ...ಬಲವಾಗಿ ಹಾಗೂ ದಲಿತ ಚಳವಳಿ, ಪರಿಸರ ಚಳವಳಿ, ಮತ್ತಿತರ ...ವಳಿಗಳಿಗೆ ಚಾಲಕ ಶಕ್ತಿಯಾಗಿ ಕೆಲಸ ಮಾಡಿದ್ದನ್ನು ಇಂದಿಗೂ ಅನೇಕರು ನೆನಪಿಸಿಕೊಳ್ಳುತ್ತಾರೆ. 11 ವರ್ಷಗಳ ಕಾಲ ನಿರಂತರವಾಗಿ ಪ್ರಕಟಗೊಂಡ 'ಮುಂಜಾವು'ನಲ್ಲಿ ಬರೆಯುತ್ತ ಬೆಳೆದ ಹಲವರು ಇಂದು ರಾಜ್ಯ ಮಟ್ಟದ ವಿವಿಧ ಪತ್ರಿಕೆಗಳಲ್ಲಿ ಸೀನಿಯರ್‌ಗಳಾಗಿದ್ದಾರೆ.

ಪತ್ರಿಕೆಯ ದಿಟ್ಟ, ಸಮಾಜನಿಷ್ಠ ವರದಿಗಳಿಂದ ಸಿಟ್ಟಿಗೆದ್ದ ಸಮಾಜಘಾತುಕ ಪಟ್ಟಭದ್ರ ಶಕ್ತಿಗಳು ಪದೇಪದೇ ನಾಗರಾಜ್‌ರ ಮೇಲೆ ಹಲ್ಲೆ ನಡೆಸಿದವು. ಕೊಲೆ ಮಾಡಲು ಬಂದ ಸುಪಾರಿ ಹಂತಕರಿಂದ ತೀವ್ರ ಹಲ್ಲೆಗೊಳಗಾದರೂ ನಾಗರಾಜ್ ಎಂದೂ ತಮ್ಮ ಬದ್ಧತೆಯನ್ನು ಬಿಟ್ಟುಕೊಡಲಿಲ್ಲ.

1986ರಲ್ಲಿ ತಂಗಿ ಸುನಂದರನ್ನು ದಸಂಸ ಕಾರ್ಯಕರ್ತ ಎ.ಕೆ.ಮಂಜಪ್ಪ ಅವರ ತಮ್ಮ ಸಿದ್ದುಸ್ವಾಮಿಯೊಂದಿಗೆ ಸರಳ ಅಂತರ್ಜಾತಿ ಮದುವೆ ಮಾಡಿಸಿದ್ದು ನಾಗರಾಜ್‌ರ ಸಾಮಾಜಿಕ ಬದ್ಧತೆಗೆ ಸಾಕ್ಷಿ. ಹೇಗೋಮಾಡಿ ಸಂಪ್ರದಾಯಸ್ಥ ಬ್ರಾಹ್ಮಣ ತಂದೆತಾಯಿಗಳ ಮನವೊಲಿಸಿ, ದಸಂಸ ಅಧ್ಯಕ್ಷರಾಗಿದ್ದ ಬಿ.ಕೃಷ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ವಿವಾಹ ಕಾರ್ಯಕ್ರಮ ನೆರವೇರಿಸಿದ್ದರು.

ಈ ಮದುವೆಯಿಂದ ಬ್ರಾಹ್ಮಣ್ಯದ ವ್ಯವಸ್ಥೆಗೆ ತೀವ್ರ ಹೊಡೆತ ಬೀಳುತ್ತದೆಂದು ರೊಚ್ಚಿಗೆದ್ದ ಶೃಂಗೇರಿ ತಾಲೂಕು ಬ್ರಾಹ್ಮಣ ಸಂಘದವರು ಶಿವಳ್ಳಿ ಬ್ರಾಹ್ಮಣರ ಧರ್ಮಗುರುವಾದ ಹರಿಹರಪುರ ಮಠಾಧೀಶರಿಂದ ನಾಗರಾಜ್‌ರ ಕುಟುಂಬಕ್ಕೆ ಕಟ್ಟುನಿಟ್ಟಿನ ಬಹಿಷ್ಕಾರ ಹಾಕಿಸಿದರು. ಕುಟುಂಬ ವರ್ಗದವರಿಂದ ಹಾಗೂ ಸ್ವಜಾತಿಯವರಿಂದ ಎದುರಾದ ಕಷ್ಟಕೋಟಲೆಗಳನ್ನು ಲೆಕ್ಕಿಸದೆ ಇಂದಿಗೂ ತಮ್ಮ ಜಾತ್ಯತೀತವಾದಿ ನಿಲುವಿಗೆ ಬದ್ಧವಾಗಿ ನಡೆದುಕೊಂಡಿದ್ದಾರೆ.

1988ರಲ್ಲಿ ಕೊಪ್ಪದ ಬೆನ್ನಿಗಿರುವ ಗುಬ್ಬಗದ್ದೆ ಕಾಡಿನ ಮಾರಣಹೋಮ ತಪ್ಪಿಸುವ ಸಲುವಾಗಿ ಹಲವು ಗೆಳೆಯರೊಂದಿಗೆ ಕೂಡಿ ನಡೆಸಿದ ಯಶಸ್ವಿ ಚಳವಳಿ ಮತ್ತು ಕಾನೂನು ಹೋರಾಟಗಳ ನೆನಪು ಇಂದಿಗೂ ಆ ಭಾಗದ ಜನಮಾನಸದಲ್ಲಿ ಹಸಿರಾಗಿದೆ.

1990ರಲ್ಲಿ ಲಂಕೇಶ್ ಬಳಗ ಸ್ಥಾಪಿಸಿದ 'ಕರ್ನಾಟಕ ಪ್ರಗತಿ ರಂಗ'ದ ಪರವಾಗಿ ಕೊಪ್ಪ-ಶೃಂಗೇರಿ-ನ.ರಾ.ಪುರ ತಾಲೂಕುಗಳಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಆ ಭಾಗದ ಸಭೆಗಳಲ್ಲಿ ಲಂಕೇಶ್, ತೇಜಸ್ವಿ, ರಾಮದಾಸ್, ಎಚ್ಚೆಲ್ಲೆ ಹಲವು ಬಾರಿ ಭಾಗವಹಿಸಿದ್ದರು.

ಹೀಗಿದ್ದಾಗ 1990ರ ಕೊನೆಯಲ್ಲಿ ಕರ್ನಾಟಕ ವಿಮೋಚನಾ ರಂಗಕ್ಕೆ ನಾಗರಾಜ್ ಸೇರ್ಪಡೆಯಾದರು. ಬೀದರ್‌ನ ಕೊಳಾರ ಕೈಗಾರಿಕಾ ಪ್ರದೇಶದ ರಾಸಾಯನಿಕ ಮಾಲಿನ್ಯದ ಸಮಸ್ಯೆ ವಿರುದ್ಧ ಹೋರಾಟ ಸಂಘಟಿಸುವ ಸಲುವಾಗಿ 1992ರ ಡಿಸೆಂಬರ್‌ನಲ್ಲಿ ಮುಂಜಾವು ಪತ್ರಿಕೆ ನಿಲ್ಲಿಸಿ, ಮಡದಿ-ಮಗಳ ಸಹಿತ ಕಲ್ಬುರ್ಗಿಗೆ ಸ್ಥಳಾಂತರಗೊಂಡರು. ಪೊಲೀಸ್ ದೌರ್ಜನ್ಯ, ತೀವ್ರ ಲಾಠಿ ಚಾರ್ಜ್, ಹಲವು ಪೊಲೀಸ್ ಕೇಸ್‌ಗಳು, 2 ಬಾರಿ ಜೈಲುವಾಸ-ಹೀಗೆ ಮೂರೂವರೆ ವರ್ಷ ನಿರಂತರವಾಗಿ ನಡೆದ ಹೋರಾಟದ ಮುಂಚೂಣಿ ವ್ಯಕ್ತಿ ನಾಗರಾಜ್. ಬೀದರ್ ಹಾಗೂ ರಾಜ್ಯವ್ಯಾಪಿ ಬೆಂಬಲದಿಂದಾಗಿ ಅಲ್ಲಿನ ಮಾಲಿನ್ಯ ಸಮಸ್ಯೆಯಿಂದ ಸ್ಥಳೀಯರಿಗೆ ಮುಕ್ತಿ ಸಿಕ್ಕುವಂತಾಯ್ತು.


1997ರ ಜುಲೈಯಲ್ಲಿ ಸಂಘಟನೆಯ ಅಗತ್ಯಗಳಿಗನುಸಾರ ಬೆಂಗಳೂರಿಗೆ ನಾಗರಾಜ್ ಸ್ಥಳಾಂತರಗೊಂಡರು. 1998ರಲ್ಲಿ ಕರ್ನಾಟಕ ವಿಮೋಚನಾ ರಂಗದ ರಾಜ್ಯ ಅಧ್ಯಕ್ಷರಾಗಿಯೂ ಆಯ್ಕೆಯಾದರು. ಎಚ್.ಎಸ್.ದೊರೆಸ್ವಾಮಿಯವರ ಗೌರವಾಧ್ಯಕ್ಷತೆಯಲ್ಲಿ ನಡೆಯುತ್ತಿದ್ದ 'ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟ'ಕ್ಕೆ ಕಾರ್ಯದರ್ಶಿಯಾಗಿ, ಬೆಂಗಳೂರಿನ ಬಹಳಷ್ಟು ಸಕ್ರಿಯ ಕನ್ನಡ ಸಂಘಟನೆಗಳ ಜೊತೆಗೂಡಿ, ಕರ್ನಾಟಕದ ನೆಲ-ಜಲ-ಸಂಪನ್ಮೂಲಗಳ ಉಳಿವಿಗಾಗಿ ಹಲವು ರೀತಿಯ ಹೋರಾಟಗಳನ್ನು ಸಂಘಟಿಸಿದರು.

1998ರಿಂದ 2001ರವರೆಗೆ ಬಿಎಂಐಸಿ (ನೈಸ್) ವಿರುದ್ಧ ಅವರು ನಡೆಸಿದ ಹೋರಾಟ ಮತ್ತೊಂದು ಮೈಲಿಗಲ್ಲು. 2000-02 ಅವಧಿಯಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟ, ಕೋಲಾರ ಚಿನ್ನದ ಗಣಿ ಪುನಶ್ಚೇತನಕ್ಕಾಗಿ ಹೋರಾಟ - ಹೀಗೆ ಹತ್ತು ಹಲವು ಹೋರಾಟ ಚಟುವಟಿಕೆಗಳಲ್ಲಿದ್ದ ನಾಗರಾಜ್ 2001-02ರಲ್ಲಿ ಸಿಪಿಐ (ಮಾವೋವಾದಿ) ಪಕ್ಷದೊಳಗೆ ನೂರ್ ಶ್ರೀಧರ್ ಹಾಗೂ ಮತ್ತಿತರರು ನಡೆಸುತ್ತಿದ್ದ ಆಂತರಿಕ ಸಂಘರ್ಷದಲ್ಲಿ ಜೊತೆಯಾದರು. 2006ರಲ್ಲಿ ಆ ಪಕ್ಷದಿಂದ ಹೊರಕ್ಕೆ ಬಂದು ಆರ್‌ಸಿಪಿ ಪಕ್ಷ ನಿರ್ಮಾಣದ ಆಶಯದೊಂದಿಗೆ ಕೆಲಸ ಮಾಡುತ್ತಿದ್ದಾರೆ.


ಈ ನಡುವೆ 2004ರ ವೇಳೆಗೆ ರಾಷ್ಟ್ರೀಯ ಉದ್ಯಾನ ಪ್ರದೇಶ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಸಶಸ್ತ್ರ ಹೋರಾಟದೊಂದಿಗೆ ನಾಗರಾಜ್ ಅವರಿಗೆ ನಂಟು ಕಲ್ಪಿಸಿ, ಅಲ್ಲಿನ ಪೊಲೀಸರು ಕೇಸ್‌ಗಳಲ್ಲಿ ನಾಗರಾಜ್‌ರ ಹೆಸರನ್ನೂ ಸೇರಿಸಿದರು. ಅವರ ತಲೆಗೆ 'ಬೆಲೆ'ಯನ್ನೂ ಘೋಷಣೆ ಮಾಡಲಾಯಿತು. ನಾಗರಾಜ್ ಕೂಡ ಅದೇ ಪ್ರದೇಶದವರಾಗಿದ್ದುದು ಸಹ ಇದಕ್ಕೆ ಒಂದು ಕಾರಣವಿದ್ದಿರಬಹುದು. ಒಟ್ಟಿನಲ್ಲಿ ತೀವ್ರ ಅಪಾಯದ ಸಂಭವವಿದ್ದುದರಿಂದ ಅನಿವಾರ್ಯವಾಗಿ 2004ರಿಂದ ಅಜ್ಞಾತವಾಸದಲ್ಲಿದ್ದಾರೆ.

...ಮೂರಬೇಕೆಂಬ ಸದುದ್ದೇಶದ ವೇದಿಕೆಯ ...ನವಿಗೆ ಸ್ಪಂದಿಸಿದ ನಕ್ಸಲೀಯ ನಾಯಕರಾದ ನೂರ್ ...ಲ್ಫಿಕರ್ ಮತ್ತು ಸಿರಿಮನೆ ನಾಗರಾಜ್ ಕಳೆದ ...ಂಬರ್ 19 ರಂದು ಅಜ್ಞಾತ ಸ್ಥಳವೊಂದರಲ್ಲಿ ...ಕಾ ಗೋಷ್ಠಿ ನಡೆಸಿ ವೇದಿಕೆಯ ಮನವಿಗೆ ...ಕೊಟ್ಟು 'ಮುಖ್ಯವಾಹಿನಿಗೆ ಬರಲು ಸಿದ್ಧ' ಎಂದು ...ಕೃತವಾಗಿ ಘೋಷಿಸಿದ ಸುದ್ದಿ ಅಂದಿನ ಎಲ್ಲಾ ...ಮುಖ ಪತ್ರಿಕೆಗಳಲ್ಲಿ ಮತ್ತು ಸುದ್ದಿವಾಹಿನಿಗಳಲ್ಲಿ ...ರಗೊಂಡಿತ್ತು. ನೂರ್ ಜುಲ್ಫಿಕರ್ ಅಲಿಯಾಸ್ ...ರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್‌ರವರು ...ವೋವಾದಿ ಪಕ್ಷದೊಂದಿಗಿನ ಸೈದ್ಧಾಂತಿಕ ...ಭಿಪ್ರಾಯಗಳಿಂದಾಗಿ ಹಲವು ವರ್ಷಗಳ ...ದೆಯೇ ಆ ಪಕ್ಷದಿಂದ ಹೊರಬಂದು ಸ್ವತಂತ್ರವಾಗಿ ...ಂತಿಕಾರಿ ಕಮ್ಯುನಿಸ್ಟ್ ಪಕ್ಷ (RCP) ಎಂಬ ...ರಿನಲ್ಲಿ ಪ್ರಜಾ ಚಳವಳಿಯನ್ನು ನಿರ್ಮಿಸುವ ...ಯತ್ನದಲ್ಲಿದ್ದಾರೆಂಬ ಸಂಗತಿಯೂ ಈ ...ಕಾಗೋಷ್ಠಿಯಿಂದ ಹೊರಬಿತ್ತು.


...ಅವರು ನೀಡಿದ ಪತ್ರಿಕಾ ಪ್ರಕಟಣೆ ಈ ...ಷವನ್ನು ಅನುಮಾನಕ್ಕೆಡೆಯಿಲ್ಲದಂತೆ ಸ್ಪಷ್ಟಪಡಿಸಿದೆ: ...006ರಲ್ಲಿ ಕರ್ನಾಟಕದ ಸಿಪಿಐ (ಮಾವೋವಾದಿ) ...ವಿಭಜನೆಗೊಂಡು ನಮ್ಮ ಪಕ್ಷ (RCP) ಜನ್ಮ ...ಿದೆ. 2001ರಲ್ಲಿ ಮಲೆನಾಡಿನಲ್ಲಿ ಚಟುವಟಿಕೆಗಳು ...ರಂಭವಾದಾಗಿನಿಂದಲೂ ಮಾವೋವಾದಿ ...ದೊಳಗೆ ಗಹನವಾದ ರಾಜಕೀಯ ಸಂಘರ್ಷ ...ಯುತ್ತಾ ಬಂದಿದೆ. ಕರ್ನಾಟಕಕ್ಕೆ ಇಂದು ...ಶ್ಯವಿರುವುದು ದಿಟ್ಟ, ಬಲಿಷ್ಠ ಹಾಗೂ ಬಹಿರಂಗ ... ಚಳವಳಿಯೇ ಹೊರತು ಸಶಸ್ತ್ರ ಹೋರಾಟವಲ್ಲ ...ಮದು ಆರಂಭದಿಂದಲೂ ನಮ್ಮ ಸ್ಪಷ್ಟ ...ವಾಗಿತ್ತು. ಮಾವೋವಾದಿ ಪಕ್ಷದ ಬದ್ಧತೆ ಬಗ್ಗೆ, ...ರಿಹಿತ ನಿಲುವಿನ ಬಗ್ಗೆ ನಮಗೆ ಅಪಾರ ಗೌರವ, ...ಮಾನಗಳಿದ್ದರೂ ಅದು ಅಳವಡಿಸುತ್ತಿರುವ ...ಗ ವಾಸ್ತವಕ್ಕೆ ತಕ್ಕನಾಗಿಲ್ಲ, ಪ್ರಜಾ ಚಳವಳಿಯ ...ಣಕ್ಕೆ ಪೂರಕವಾಗಿಲ್ಲ ಎಂಬುದು ನಮ್ಮ ...ವಾಗಿತ್ತು. ಭಿನ್ನ ರಾಜಕೀಯ ದೃಷ್ಟಿಕೋನಗಳು ...ಗುವ ಸಾಧ್ಯತೆ ಗೋಚರಿಸದೇ ಹೋದದ್ದರಿಂದ ...ವೋವಾದಿ ಪಕ್ಷದಿಂದ ಹೊರಬಂದು ನಮ್ಮನ್ನು ...ಂತಿಕಾರಿ ಕಮ್ಯುನಿಸ್ಟ್ ಪಕ್ಷವಾಗಿ ...ಸಿಕೊಂಡಿದ್ದೇವೆ." ಮುಖ್ಯವಾಹಿನಿಗೆ ...ಬೇಕೆಂಬ ವೇದಿಕೆಯ ಮನವಿಯ ಬಗ್ಗೆ ...ವೋವಾದಿ ಪಕ್ಷದ ನಿಲುವು ಏನೆಂಬುದು ...ಗೆ ತಿಳಿಯದು, ಆದರೆ ಈ ಬಗ್ಗೆ ನಮ್ಮಲ್ಲಿ ...ವುದೇ ದ್ವಂದ್ವವಾಗಲಿ, ಗೊಂದಲವಾಗಲಿ ಇಲ್ಲ, ...ದು ಬಹಿರಂಗವಾಗಿ ಹಾಗೂ ರಹಸ್ಯವಾಗಿ ನಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದರೂ, ಇದು ನಮ್ಮ ಆಯ್ಕೆಯಾಗಿರದೆ ಸರ್ಕಾರ ಹೇರಿರುವ ಅನಿವಾರ್ಯತೆಯೇ ಆಗಿದೆ. ನಾವು ಯಾವುದೇ ರೀತಿಯ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸದೇ ಇದ್ದಾಗ್ಯೂ? ಸರ್ಕಾರ ನಮ್ಮ ಮೇಲೆ ಸುಳ್ಳು ಕೇಸುಗಳನ್ನು ಹಾಕುತ್ತಾ ಬಂದಿರುವುದು ಇದಕ್ಕೆ ಕಾರಣ" ಎಂಬ ತಮ್ಮ ನಿಲುವನ್ನು ಘಂಟಾಘೋಷವಾಗಿ ತಿಳಿಸಿದ್ದರು.




ಯು.ಆರ್.ಅನಂತಮೂರ್ತಿ




ಎಚ್.ಎಸ್.ದೊರೆಸ್ವಾಮಿ



ದೇವನೂರು ಮಹಾದೇವ್



ಎ.ಕೆ.ಸುಬ್ಬಯ್ಯ



ಇಂದೂಧರ ಹೊನ್ನಾಪುರ



ಗೌರಿ ಲಂಕೇಶ್

ಹೌದು, ಈ ಮಾತನ್ನು ನಂಬಲು ಕಾರಣಗಳಿವೆ. ಮಾವೋವಾದಿ ಪಕ್ಷ ಇಬ್ಭಾಗವಾಗಿ ನೂರ್ ಜುಲ್ಫಿಕರ್ ಬಣ ಹೊರಗೆ ಬಂದ ಸುದ್ದಿಗಳು 2006ರಲ್ಲೇ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು, ಹೀಗಿದ್ದರೂ ಆ ನಂತರದ ದಿನಗಳಲ್ಲೂ ಪೊಲೀಸರು ವಾಡಿಕೆಯಂತೆ ನೂರ್ ಅವರ ಮೇಲೂ ಕೇಸುಗಳನ್ನು ಜಡಿದಿದ್ದರು.

ಒಟ್ಟಾರೆ ಈ ಪ್ರಕ್ರಿಯೆಗೆ ಹಲವು ದಲಿತ, ರೈತ, ಮಹಿಳಾ ಸಂಘಟನೆಗಳು, ಮಾನವ ಹಕ್ಕು ಸಂಘಟನೆಗಳು ಪೂರಕವಾಗಿ ಪ್ರತಿಕ್ರಿಯಿಸಿದವು. ಬಿಜೆಪಿ ಹೊರತುಪಡಿಸಿ ವಿವಿಧ ರಾಜಕೀಯ ಪಕ್ಷಗಳೂ ಈ ಪ್ರಕ್ರಿಯೆಗೆ ಪೂರಕವಾಗಿ ಸ್ಪಂದಿಸಿವೆ. ನಕ್ಸಲೀಯರು ಸಾಮಾಜಿಕ ಹೋರಾಟಗಾರರಾ ಗಿರುವುದರಿಂದ ಅವರೊಂದಿಗೆ ಸರ್ಕಾರ ಘನತೆಯಿಂದ ವ್ಯವಹರಿಸಿ, ಆದ್ಯತೆಯ ಮೇರೆಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಅಂದಿನ ವಿರೋಧ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿಯವರೂ ಸರ್ಕಾರವನ್ನು ಆಗ್ರಹಿಸಿದ್ದರು.

ಸರ್ಕಾರ ಕೂಡ ತನ್ನ ಸಿದ್ಧತೆಯನ್ನು ತೋರ್ಪಡಿಸಿದ್ದರೂ ಈ ನಡುವೆ ಉಪ ಚುನಾವಣೆ, ನಂತರ ಲೋಕಸಭಾ ಚುನಾವಣೆ, ಜೊತೆಜೊತೆಯಲ್ಲೇ ಕಾಂಗ್ರೆಸ್ ಪಕ್ಷದ ಆಂತರಿಕ ಬಿಕ್ಕಟ್ಟುಗಳು ಇತ್ಯಾದಿ ಕಾರಣಗಳಿಂದ ಈ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗಿ ಈಗ ಅಂತಿಮ ರೂಪ ಪಡೆದುಕೊಂಡಿದೆ. ಸರ್ಕಾರದ ಅಧಿಕೃತ ನೀತಿಯಲ್ಲಿ 'ಶರಣಾಗತರಾಗಿ, ಪುನರ್ವಸತಿ ಬಯಸುವವರಿಗೆ ಅವಕಾಶ' ತರಹದ ಅಧಿಕಾರಿಶಾಹಿ ಪರಿಭಾಷೆ ಇತ್ತೇ ವಿನಃ ಪ್ರಜಾತಾಂತ್ರಿಕ ಚಳವಳಿಯ ಮಾರ್ಗವನ್ನು ಒಪ್ಪಿ ಬರುವ ನಕ್ಸಲೀಯರಿಗೆ ಅವಕಾಶ ಮಾಡಿಕೊಡುವ ರಾಜಕೀಯ ಅಂಶದ ಸುಳಿವೇ ಇರಲಿಲ್ಲ. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ; ಇಡೀ ದೇಶದಾದ್ಯಂತ ಇರುವ ಶರಣಾಗತಿ ನೀತಿಗಳ ಹಣೆಬರಹವೇ ಇಷ್ಟು!

26/11/2014ರಂದು ನಡೆದ ರಾಜ್ಯ ಸಮಿತಿ ಸಭೆಯಲ್ಲಿ ನಾಗರಿಕ ವೇದಿಕೆ ಈ ಅಂಶಗಳನ್ನು ಸೇರ್ಪಡೆ ಮಾಡಬೇಕೆಂಬ ಸಲಹೆ ಅಂಗೀಕರಿಸುವ ಮೂಲಕ ಸರ್ಕಾರ ರಾಜಕೀಯ ಮುತ್ಸದ್ದಿತನ ತೋರಿದೆ. ಮುಂದಿನ ವಾರದಲ್ಲಿ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಮುಂದಿನ ಕಾನೂನು ಪ್ರಕ್ರಿಯೆಗಾಗಿ ನಾಗರಿಕ ವೇದಿಕೆಯ ಮುಂದೆ ಬಹಿರಂಗವಾಗಿ ಹಾಜರಾಗಲಿದ್ದಾರೆ. ಅಲ್ಲಿಂದಾಚೆಗೆ ಕರ್ನಾಟಕದ ನಕ್ಸಲೀಯ ಇತಿಹಾಸದಲ್ಲಿ ಹೊಸ ಆಯಾಮವೊಂದು ಅನಾವರಣಗೊಳ್ಳಲಿದೆ.

ನಕ್ಸಲೀಯರನ್ನು ಪ್ರಜಾತಾಂತ್ರಿಕ ಮುಖ್ಯವಾಹಿನಿಗೆ ತರಲು ಇಂದಿನ ಇಡೀ ಸಾಮಾಜಿಕ, ರಾಜಕೀಯ ಸಂದರ್ಭ ಸಂಸಿದ್ಧವಾಗಿದೆ ಎಂಬ ವಾಸ್ತವವನ್ನು ಈ ಮೇಲಿನ ಅಂಶಗಳು ಸಾರಿ ಹೇಳುತ್ತವೆ. ಅದೇ ಸಂದರ್ಭದಲ್ಲಿ ನೂರ್ ಮತ್ತು ನಾಗರಾಜ್‌ರ ಹೇಳಿಕೆಯಲ್ಲಿನ ಒಂದು ಅಂಶ ವಿಶೇಷವಾಗಿದೆ. ಅವರ ಹೇಳಿಕೆ ಪ್ರಕಾರ "ಕರ್ನಾಟಕದಲ್ಲಿ ನಾನಾ ಸೈದ್ಧಾಂತಿಕ ಹಿನ್ನೆಲೆಗಳ ಜನ ಚಳವಳಿಗಳೂ ಇಂದು ಹಿನ್ನಡೆ ಅನುಭವಿಸಿವೆ. ಎಲ್ಲಾ ಜನಪರ ಸಂಘಟನೆಗಳು ಹಾಗೂ ವ್ಯಕ್ತಿಗಳು ತಮ್ಮನ್ನು ಆತ್ಮಾವಲೋಕನಕ್ಕೆ ಒಡ್ಡಿಕೊಳ್ಳುವ, ಆತ್ಮಸಾಕ್ಷಿಯನ್ನು ಮಾರಿಕೊಂಡಿಲ್ಲದ ಪ್ರಾಮಾಣಿಕ ಶಕ್ತಿಗಳು ಜನರ ಹಕ್ಕುಗಳಿಗಾಗಿ ದನಿಯೆತ್ತಲು ಒಗ್ಗೂಡಬೇಕಿರುವ ಕಾಲ ಇದು... ಈ ನಿಟ್ಟಿನಲ್ಲಿ ಕರ್ನಾಟಕದ ಸಮಾನ ಮನಸ್ಕ ಹೋರಾಟಗಾರರೆಲ್ಲರ ಜೊತೆಗೂಡಿ ಬಲಿಷ್ಠ ಪ್ರಜಾ ಚಳವಳಿಯನ್ನು ಕಟ್ಟಿ ಬೆಳೆಸುವುದೇ ನಮ್ಮ ಗುರಿ."

ಸಶಸ್ತ್ರ ಹೋರಾಟದ ಹಾದಿಯಿಂದ ಕರ್ನಾಟಕದಲ್ಲಿ ತಾವು ಸಾಧಿಸಿದ್ದೇನು ಎಂಬುದನ್ನು ಬಂದೂಕು ಹಿಡಿದು, ಅನಗತ್ಯ ತ್ಯಾಗ ಬಲಿದಾನಗಳ ಹಾದಿಯಲ್ಲಿರುವ ನಕ್ಸಲೀಯರು ಗಂಭೀರವಾಗಿ ಆತ್ಮಾವಲೋಕನ ಮಾಡಿಕೊಳ್ಳುತ್ತಾರೆಯೆ? ಒಂದು ಕಾಲದಲ್ಲಿ ಸ್ಫೂರ್ತಿಯ ಚಿಲುಮೆಯಾಗಿದ್ದ "ನಕ್ಸಲ್‌ಬಾರಿ ಏಕೀ ರಾಸ್ತಾ" ಘೋಷಣೆ ಈಗ ಸಂಕುಚಿತವಾದವಾಗಿ, ದುಸ್ಸಾಹಸವಾದವಾಗಿ ಪರಿಣಮಿಸಿರುವ ಚಾರಿತ್ರಿಕ ಸತ್ಯವನ್ನು ಅರಿತುಕೊಳ್ಳಲು ಇನ್ನೂ ಎಷ್ಟು ಕಾಲ ಬೇಕಾಗಬಹುದು?

• ಜಂಗಮ

# ಭಯಾನಕ ನೆಲಕಂಟಕ ಶಂಕರ್ ರೆಡ್ಡಿ


ಅಥೀನಾ ಟೌನ್‌ಶಿಪ್ ಜಾಗದಲ್ಲಿ ತಲೆ ಎತ್ತಿದ ಶಂಕರ್ ರೆಡ್ಡಿಯ ಅಪಾರ್ಟ್ ಮೆಂಟ್

ಒಂದು ಕೊಲೆ, ಮೂರೂವರೆ ಸಾವಿರ ಕೋಟಿಯ ಸೊತ್ತು ಮತ್ತು ಸರಿಸುಮಾರು 2000 ಮಂದಿ ಎನ್ನಾರೈಗಳ ಕಣ್ಣೀರು ಏನೆಲ್ಲಾ ಅನಾಹುತಕ್ಕೆ ಕಾರಣವಾಗಬಹುದು?

ಕೇರಳದ ಮುಖ್ಯಮಂತ್ರಿ ಉಮ್ಮನ್ ಚಾಂಡಿಯವರಿಗೂ ಜೈಲುಗಿರಾಕಿ ಗೋವರ್ಧನ ಮೂರ್ತಿ ಎಂಬ ರಿಯಲ್ ಎಸ್ಟೇಟ್ ಪುಢಾರಿಗೂ ಏನು ಸಂಬಂಧ? 2008 ರ ಅಕ್ಟೋಬರ್ 6 ರ ರಾತ್ರಿ ಹೆಣ್ಣೂರು-ಬಾಗಲೂರು ರಸ್ತೆಯ ಎಲ್‌ಜಿ ರೋಸ್ ಫಾರ್ಮ್ ಹೌಸಿನಲ್ಲಿ ಗುಂಡೇಟು ತಿಂದು ಹೆಣವಾದ ಚಿತ್ರನಟ ವಿನೋದ್ ಕುಮಾರ್ ಕೊಲೆ ಕೇಸಿನಿಂದ ಗೋವರ್ಧನ ಮೂರ್ತಿಯೇನೋ ಖುಲಾಸೆಯಾದ. ಹಾಗಾದರೆ ಕೊಂದವರು ಯಾರು? ಕೇರಳ ಮೂಲದ ಸರಿಸುಮಾರು 2000 ಮಂದಿ ಎನ್ನಾರೈಗಳ ನಿವೇಶನಗಳಿರುವ ದೊಡ್ಡಗುಬ್ಬಿಯ ಅಥೀನಾ ಟೌನ್‌ಶಿಪ್‌ಗೂ ನಟ ವಿನೋದ್‌ಕುಮಾರ್ ಹತ್ಯೆಗೂ ಮತ್ತು ಕಳೆದ ಹತ್ತು ವರ್ಷಗಳಿಂದ ಬೆಂಗಳೂರಿನ ಕೆಲ ಪೊಲೀಸ್ ಅಧಿಕಾರಿಗಳ ಬೆಂಗಾವಲಲ್ಲೇ ನಡೆದ ಭಯಾನಕ ಭೂದರೋಡೆಯೊಂದಕ್ಕೂ ಇರುವ ಸಂಬಂಧ ಕೆದಕ ಹೊರಟರೆ; 'ಕೇರಳದ ಮುಖ್ಯಮಂತ್ರಿ ಉಮ್ಮನ್ ಚಾಂಡಿ, ಮಾಜಿ ಕೇಂದ್ರ ಸಚಿವ ವಯಲಾರ್ ರವಿ, ರಿಯಲ್ ಎಸ್ಟೇಟ್ ಪುಢಾರಿ ಗೋವರ್ಧನ ಮೂರ್ತಿ, ಕೊಲೆಯಾದ ವಿನೋದ್‌ಕುಮಾರ್, ನೆಲಕಂಟಕ ಕುಪೇಂದ್ರ ರೆಡ್ಡಿ, ಮಾಜಿ ಪೊಲೀಸ್ ಅಧಿಕಾರಿಗಳು ಇತ್ಯಾದಿ ಹೆಸರುಗಳೆಲ್ಲ ತೂರಿಬರುತ್ತವೆ.

ಅದು ಬೆಂಗಳೂರು ಕಂಡ ಅತ್ಯಂತ ನಿರ್ಲಜ್ಜ ಮತ್ತು ಭಯಂಕರ ಭೂಡಕಾಯಿತಿ.

## 2000 ಮಂದಿ ಎನ್ನಾರೈಗಳು

ಇಲ್ಲಿಗೆ ಆರು ತಿಂಗಳ ಹಿಂದೆ, ಕೇರಳ ಮೂಲದ ಎನ್ನಾರೈಗಳೆಲ್ಲ ಅಲ್ಲಿನ ಮುಖ್ಯಮಂತ್ರಿ ಉಮ್ಮನ್ ಚಾಂಡಿಯವರನ್ನು ಕಂಡು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ತಮಗಾದ ಅನ್ಯಾಯದ ವಿರುದ್ಧ ನ್ಯಾಯ ಕೊಡಿಸಲು ಒತ್ತಡ ಹೇರುವಂತೆ ಮನವಿ ಸಲ್ಲಿಸಿದ್ದು ಮತ್ತು ಚಾಂಡಿ ಕರ್ನಾಟಕದ ಮುಖ್ಯಮಂತ್ರಿಗೆ ವಿಶೇಷ ಪತ್ರ ಬರೆದು ಬೆಂಗಳೂರಿನ ಭೂಗಳ್ಳರಿಂದ ಈ ಎನ್ನಾರೈಗಳಿಗೆ ನ್ಯಾಯ ಕೊಡಿಸುವಂತೆ ಒತ್ತಾಯಿಸಿದ ಸುದ್ದಿ ಕೆಲ ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು ಅದು ದುಬೈ ಮೂಲದ ನೂರಾರು ಮಲೆಯಾಳಿ ಎನ್ನಾರೈಗಳಿಗೆ ಬೆಂಗಳೂರಿನಲ್ಲಾದ ರಿಯಲ್ ಎಸ್ಟೇಟ್ ವಂಚನೆ ವಿರುದ್ಧ ಕೇರಳದ ಮುಖ್ಯಮಂತ್ರಿಗಳೇ ಮಧ್ಯ ಪ್ರವೇಶಗೈದ ವಿಶಿಷ್ಟ ಪ್ರಕರಣವಾಗಿತ್ತು, ಈ ಬಗ್ಗೆ ಕರ್ನಾಟಕದ ಯಾವುದೇ ಟೀವಿಗಳಾಗಲಿ, ಪತ್ರಿಕೆಗಳಾಗಲಿ ತಲೆ ಕೆಡಿಸಿಕೊಳ್ಳಲಿಲ್ಲ.

ಏಕೆಂದರೆ ವಿಷಯ ಕೆದಕುವಷ್ಟು ತಾಳ್ಮೆಯಾಗಲಿ ಆಸಕ್ತಿಯಾಗಲಿ ಇಲ್ಲಿನ ಮೀಡಿಯಾಗಳಿಗೆ ಬೇಕೂ ಇರಲಿಲ್ಲ. ಆದು ಶಂಕರ್ ರೆಡ್ಡಿ ಎಂಬ ಖತರ್‌ನಾಕ್ ಭೂಢಕಾಯಿತನ ತಾಕತ್ತು ಕೂಡ. ಕೇರಳ ಮುಖ್ಯಮಂತ್ರಿಯಷ್ಟೇ ಏಕೆ ಖುದ್ದು ಕರ್ನಾಟಕ ಮುಖ್ಯಮಂತ್ರಿಗಳಿಂದಲೂ ತನ್ನದೊಂದು ಕೂದಲನ್ನೂ ಕೊಂಕಿಸಲು ಅಸಾಧ್ಯವೆಂಬ ಆತನ ದೌಲತ್ತಿಗೂ ಕಾರಣವಿತ್ತು.


ಶಂಕರ್ ರೆಡ್ಡಿ ಗಾಂಧಿನಗರದ ರೊಕ್ಕಸ್ಥ ಸಿನಿಮಾ ನಿರ್ಮಾಪಕ. ರಾಜಕೀಯವಾಗಿ ಜೆಡಿಎಸ್, ಬಿಜೆಪಿ, ಕಾಂಗ್ರೆಸ್‌ನಂಥ ಮೂರೂ ಪಕ್ಷಗಳ ಪಾಲಿಗೆ ಅನ್ನದಾತ ಮತ್ತು ಅರ್ಧ ಬೆಂಗಳೂರಿನ ರೌಡಿಗಳ ಆಶ್ರಯದಾತ. ಎಲ್ಲಕ್ಕೂ ಮಿಗಿಲಾಗಿ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರ ಖಾಸಾ ಚಿಕ್ಕಪ್ಪನ ಮಗ. ಸ್ಥಾಲದ್ದಕ್ಕೆ ಯಲಹಂಕ, ಹೆಣ್ಣೂರು, ಬಾಣಸವಾಡಿ, ನಾಗವಾರ ಸುತ್ತಮುತ್ತಲ ಒಂದು ಡಜನ್ ಪೊಲೀಸ್ ಠಾಣೆಗಳ ಪೊಲೀಸರ ಪಾಲಿಗೆ ಕೊಡುಗೈ ದೊರೆ. ಹೀಗಾಗಿ ದುಬೈ ಮೂಲದ ಸರಿಸುಮಾರು 2000 ಮಂದಿ ಎನ್ನಾರೈಗಳ ಬದುಕಿಗೆ ಈತನೇ ಖಳನಾಯಕ!


ಗೋವರ್ಧನ ಮೂರ್ತಿ ಖುಲಾಸೆಗೊಂಡ ವಿನೋದ್‌ಕುಮಾರ್ ಹತ್ಯೆಯ ಕೇಸಿಗೆ ಸಂಬಂಧಪಟ್ಟಂತೆ ಈತನ ವಿರುದ್ಧ ಸಂಪಿಗೆ ಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದರೂ ಶಂಕರ್‌ರೆಡ್ಡಿಗದು ಲೆಕ್ಕಕ್ಕೇ ಇಲ್ಲ, ಆಂದರೆ ಗೋವರ್ಧನಮೂರ್ತಿ ಮೇಲಿದ್ದ ವಿನೋದ್‌ಕುಮಾರ್ ಕೊಲೆಯ ಆರೋಪವೀಗ ಶಂಕರ್‌ರೆಡ್ಡಿ ತಲೆಗೆ ಸುತ್ತಿಕೊಂಡಿದೆ. ಇದರರ್ಥ ದುಬೈ ಮೂಲದ 2000 ಮಂದಿ ಎನ್ನಾರೈಗಳಿಗಾದ ಭೂವಂಚನೆಗೂ ವಿನೋದ್‌ಕುಮಾರ್ ಹತ್ಯೆಗೂ ಸಂಬಂಧವಿದೆ!


## 600 ಕೋಟಿಯ ರಿಜಿಸ್ಟ್ರೇಷನ್


ವಿನೋದ್‌ಕುಮಾರ್ ಕೊಲೆಯಾಗಿದ್ದು 2008 ರ ಅಕ್ಟೋಬರ್ 6 ರ ರಾತ್ರಿ ಗೋವರ್ಧನಮೂರ್ತಿ ಒಡೆತನದ ಎಲ್‌ಜಿ ರೋಸ್ ಫಾರ್ಮ್ ಹೌಸಿನಲ್ಲಿ, ಆವತ್ತು ರಾತ್ರಿ ಕಂಠಮಟ್ಟ ಕುಡಿದು, ಚಿತ್ತಾಗಿದ್ದ ಗೋವರ್ಧನ್‌ಮೂರ್ತಿ ಇದ್ದಕ್ಕಿದ್ದಂತೆ ಕ್ಯಾತೆಗೆ ಬಿದ್ದು ಏಕಾಏಕಿ ವಿನೋದ್‌ಕುಮಾರ್ ಮೇಲೆ ಗುಂಡುಹಾರಿಸಿದನೆಂಬುದು ಪೊಲೀಸರ ಆರೋಪವಾಗಿತ್ತು, ಆವತ್ತು ವಿನೋದ್ ಮತ್ತು ಗೋವರ್ಧನಮೂರ್ತಿ ಜೊತೆಗಿದ್ದ ಮೂರನೇ ವ್ಯಕ್ತಿಯೇ ಪ್ರತಿಷ್ಠಿತ ಸಿಎಂಆರ್ ಗ್ರೂಪ್‌ನ ಪಾಲುದಾರನೂ ಕುಖ್ಯಾತ. ಸಿಟಿ ಸ್ಕೇಪ್ ಪ್ರಾಪರ್ಟೀಸ್‌ನ ಮಾಲೀಕನೂ ಆದ ಶಂಕರ್ ರೆಡ್ಡಿ!


ಗುಂಡೇಟು ತಿಂದು ಗಾಯಗೊಂಡಿದ್ದ ವಿನೋದ್ ಕುಮಾರ್‌ನನ್ನು ಇದೇ ಶಂಕರ್ ರೆಡ್ಡಿಯೇ ಆಸ್ಪತ್ರೆಗೆ ಸಾಗಿಸಿ ಮತ್ತು ಆತ ಸಾಯುವ ತನಕ ಕಾದು ತನ್ನ ಕಾರ ಕಾಲಹರಣ ಮಾಡಿದ್ದು!


ಭೂಡಕಾಯಿತ ಶಂಕರ್ ರೆಡ್ಡಿ


ಜಾರ್ಜ್ ವರ್ಗೀಸ್


ಜೆರ್ರಿ ಸೋಮನ್


ಜೇಕಬ್ ಥಾಮಸ್



ಲೂರ್ಡ್ ಕಾಲೇಜ್

ಮೇಲುನೋಟಕ್ಕಿದು ಗೋವರ್ಧನ್‌ಮೂರ್ತಿ ಎ ಪುಂಡ ರಿಯಲ್ ಎಸ್ಟೇಟ್ ಖದೀಮನ ಅಟ್ಟಹಾಸದ ಕಂಡರೂ ಇಡೀ ಪ್ರಕರಣಕ್ಕೆ ಇನ್ನೂ ಒಂದು ಆಯಾಮವಿ ಅದು ಅವತ್ತೇ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನಡೆದ ದೊಡ್ಡಗುಬ್ಬಿ ಸ ನಂಬರ್ 12 ರಲ್ಲಿದ್ದ 11.34 ಎಕರೆ ಸೊತ್ತಿನ ರಿಜಿಸ್ಟ್ರೇಷ ಬೆಂಗಳೂರಿನ ಕೆ.ಆರ್. ಪುರ ತಾಲ್ಲೂಕು ವ್ಯಾಪ್ತಿಯ ದೊಡ್ಡಗುಬ್ಬಿಯ ಭರೋಬ್ಬರಿ 600 ಕೋಟಿ ರೂಪಾ ಬೆಲೆಬಾಳುವ ಈ ಸೊತ್ತಿನ ರಿಜಿಸ್ಟ್ರೇಷನ್ ಅನ್ನು ಹೆಸರಿಗೆ ಮಾಡಿಕೊಂಡವನು ಶಂಕರ್ ರೆಡ್ಡಿಯ ಖಾ ತಮ್ಮ ಬಾಲಸುಂದರ ರೆಡ್ಡಿ. ಬೆಂಗಳೂರಿಗೆ ಹೊಂದಿಕೊಂ ಇದ್ದ ಈ ಸೊತ್ತನ್ನು ಯಾರ ಹೆಸರಿಗೆ ನೋಂದಾಯಿ ಬೇಕೆಂದರೂ ಆದು ಕೆ.ಆರ್. ಪುರದ ಸಬ್ ರಿಜಿಸ್ಟ್ರಾ ಕಚೇರಿಯಲ್ಲೇ ಯಲಹಂಕದ ಸಬ್ ರಿಜಿಸ್ಟ್ರಾ ಕಚೇರಿಯಲ್ಲೋ ಆಗಬೇಕಿತ್ತಲ್ಲವೆ?


ಆದರೆ ಇಲ್ಲಿಂದ 70 ಕಿ.ಮೀ. ದೂರದ ಗುಡಿಬಂ ಹೋಗಿ ಬೆಂಗಳೂರಿನ ಈ ಸೊತ್ತನ್ನು ತನ್ನ ತಮ ಹೆಸರಿಗೆ ನೋಂದಾಯಿಸುವ ದರ್ದಾದರೂ ಶಂಕ ರೆಡ್ಡಿಗೇಕಿತ್ತು?

## ಜೋಸೆಫ್ ಚಾಕೋ

ಅದು ಬೋಗಸ್ ದಾಖಲೆಗಳ ಆಧಾರ ಗೋಲ್‌ಮಾಲ್ ರಿಜಿಸ್ಟ್ರೇಷನ್ನು, ದೊಡ್ಡಗುಬ್ಬಿಯಲ್ಲಿ ಬಿ ಜೋಸೆಫ್ ಚಾಕೋ ಎಂಬಾತ ಯಾವುದೋ ಕಾ ರೈತರಿಂದ ಜಮೀನು ಖರೀದಿಸಿ ಅದನ್ನು ಎ ಪ್ಲಾಟುಗಳನ್ನಾಗಿ ವಿಂಗಡಿಸಿ ಎನ್ನಾರೈಗಳಿಗೆ ಮಾರಿದ್ದ

# ಶಂಕರ್ ರೆಡ್ಡಿಯ ಅಟ್ಟಹಾಸಕ್ಕೆ ಬಲಿಯಾದವರೆಷ್ಟು

ಕೆಮ್ಮನಹಳ್ಳಿ ಮತ್ತು ದೇವರಜೀವನಹಳ್ಳಿಗಳಿಗೆ ಹೊಂದಿಕೊಂಡಂತೆ ತಲೆ ಎತ್ತಿದ ಸಿಎಮ್ಮಾರ್ ಗ್ರೂಪ್‌ನ ಎಸ್ಟೇಟ್ ಸಾಮ್ರಾಜ್ಯದ ಅಟ್ಟಹಾಸದ ಪ್ರತೀಕವೇ ಶಂಕರ್ ರೆಡ್ಡಿ. ಈತ ಎಸ್ಸೆಲ್ಸಿಯನ್ನೂ ಪಾಸು ಮಾಡಿದವನಲ್ಲ, ಈತನ ತಂದೆ ಶ್ರೀನಿವಾಸ್ ರೆಡ್ಡಿಗೆ ನಿವೃತ್ತ ಐಪಿಎಸ್ ಧಣಿಯ ತಂದೆ ಚಿಕ್ಕಮುನಿಯಪ್ಪ ರೆಡ್ಡಿ ಖಾಸಾ ಅಣ್ಣ, ಶ್ರೀನಿವಾಸ್ ರೆಡ್ಡಿ ವಿರುದ್ಧ ಆ ಕಾಲಕ್ಕೇ ರೇಪ್ ಕೇಸಿತ್ತು, ದಲಿತರ ಆಸ್ತಿಪಾಸ್ತಿ ಮುಂಡಾಮೋಚಿಯೇ ನಟೋರಿಯಸ್ ಎನಿಸಿಕೊಂಡಿದ್ದ ಶ್ರೀನಿವಾಸ್ ರೆಡ್ಡಿ ತನ್ನ ಪಾಪಪ್ರಜ್ಞೆಯಿಂದ ಬಿಡುಗಡೆಗೊಳ್ಳಲೆಂದು ಯಾವುದೋ ಕ್ಷೇತ್ರಕ್ಕೊಂದು ತೀರ್ಥಯಾತ್ರೆಗೆ ಹೊರಟವನು ರೈಲಿನಲ್ಲಿ ಬಾತ್‌ರೂಮಿನ ಬಾಗಿಲೆಂದು ಹೊರಭಾಗದ ಬಾಗಿಲು ಎಳೆದು ಮುಗ್ಗರಿಸಿ ಬಿದ್ದವನು ರೈಲಿಗೆ ಸಿಲುಕಿಯೇ ತುಂಡುತುಂಡಾಗಿ ಬಿದ್ದಿದ್ದ!


ಕುಪೇಂದ್ರ ರೆಡ್ಡಿ

ಶುರುವಿನಲ್ಲಿ ದನಕರು ಮೇಯಿಸಿಕೊಂಡಿದ್ದು ಮನೆಮನೆಗೆ ಹಾಲು ಹಾಕುತ್ತಿದ್ದ ಶಂಕರ್ ರೆಡ್ಡಿ ಕಾಲಕ್ರಮೇಣ ಬೆಟ್ಟಕ್ಕೆ ಕನ್ನ ಹಾಕಿ ಜಲ್ಲಿ ಕದ್ದು ಮಾರತೊಡಗಿದ. ಕ್ರಮೇಣ ರಿಯಲ್ ಎಸ್ಟೇಟ್ ದಂಧೆಗೆ ನಿಂತವನು ಬಾಬುಸಾಬ್‌ಪಾಳ್ಯದಲ್ಲಿ ತನಗೆ ಪಿತ್ರಾರ್ಜಿತವಾಗಿ ಬಂದಿದ್ದ ಐದು ಎಕರೆಯನ್ನು ಸೈಟು ವಿಂಗಡಿಸಿ ಯಾರ್‍ಯಾರಿಗೋ ಮಾರಿ ತದನಂತರ ತನ್ನ ಐಪಿಎಸ್ ಚಿಕ್ಕಪ್ಪನ ಪ್ರಭಾವ ಬಳಸಿಕೊಂಡಿದ್ದೇ ಸೈಟು ಕೊಂಡವರನ್ನೆಲ್ಲ ಹೊಡೆದೋಡಿಸಿ ಬಿಟ್ಟ. ಹಾಗೇ ಮಾರಿದ ಜಮೀನಿಗೆ ಮತ್ತೆ ಗಂಟುಬಿದ್ದವನು ಅದರಲ್ಲಿ 100x100 ಅಳತೆಯ ನಿವೇಶನವೊಂದನ್ನು ರೆಜಿನಾ ಎಂಬ ಕ್ರೈಸ್ತ ಸನ್ಯಾಸಿನಿಗೆ ಕಾನ್ವೆಂಟು ಕಟ್ಟುವುದಕ್ಕೆಂದು ಮಾರಿ ಆನಂತರ ಆಕೆಯನ್ನೂ ಖಾಲಿ ಮಾಡಿಸಲು ಗೂಂಡಾಗಿರಿಗಿಳಿದ. ಆಕೆ ಇವತ್ತಿಗೂ ತನ್ನ ಲೂರ್ಡ್ ಇಂಗ್ಲಿಷ್ ಕಾನ್ವೆಂಟನ್ನು ಉಳಿಸಿಕೊಳ್ಳಲು ಹೋರಾಡುತ್ತಲೇ ಇದ್ದಾಳೆ.

ಪಕ್ಕದಲ್ಲೇ ಚರ್ಚ್ ಆಫ್ ಸೌತ್ ಇಂಡಿಯಾಕ್ಕೆಂದು ತನ್ನ ಕಜಿನ್ ಮೂಲಕ ಜಮೀನು ಮಾರಿ ತದನಂತರ ಕಟ್ಟಿದ ಕಟ್ಟಡವನ್ನೇ ನೆಲಸಮಗೊಳಿಸಿ ಅಲ್ಲಿ ಐಷಾರಾಮಿ ಅಪಾರ್ಟ್‌ಮೆಂಟ್ ಎಬ್ಬಿಸಿದ. ಜಮೀನು ಕಳಕೊಂಡವರು ಹೆಣ್ಣೂರು ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರೆ ದೂರೇ ದಾಖಲಾಗಲಿಲ್ಲ, ಬಾಬುಸಾಬ್‌ಪಾಳ್ಯ ಬಾಣಸವಾಡಿ, ಹೊರಮಾವು, ಅಗರ ಮುಂತಾದ ಗ್ರಾಮಗಳು ನಗರವಾಗುತ್ತಿದ್ದಂತೆಲ್ಲ ಅ ಕೃಷಿಭೂಮಿಗಳನ್ನು ಆಕ್ರಮಿಸಿದ ಸಿಎಂಆರ್ ಗ್ರೂಪ್ ಬಲಾಢ್ಯವಾಗುತ್ತಲೇ ಹೋಯಿ ಹೆಣ್ಣೂರು ಮೇನ್ ರಸ್ತೆಯಲ್ಲಿ ಮಧು ಎಂಬ ದುಬೈ ಮೂಲದ ಎನ್ನಾರೈ ತ ದುಡಿದ ದುಡ್ಡನ್ನೆಲ್ಲ ತಂದು ಜೋಸೆಫ್ ಚಾಕೋನಿಂದ 100x100 ಸೈಟು ಖರೀದಿ ಅದಕ್ಕೂ ವಕ್ಕರಿಸಿದ ಶಂಕರ್ ರೆಡ್ಡಿ ಅಲ್ಲಿದ್ದ ಬಿಲ್ಡಿಂಗ್ ನೆಲಸಮಗೊಳಿಸಿದ್ದೇ ಅದಕ್ಕೆ ಸಿಟಿ ಸ್ಕೇಪ್ ಪ್ರಾಪರ್ಟೀಸ್ ಬೋರ್ಡು ಹಾಕಿಸಿದ್ದ.

ಇದು ಶಂಕರ್ ರೆಡ್ಡಿಯ ಭೂದರೋಡೆಗೆ ಸ್ಯಾಂಪಲ್ಲುಗಳಷ್ಟೇ. ವಿಠ್ಠಲ್ ಮಲ್ಯ ರಸ್ತೆಯ ಪ್ರತಿಷ್ಠಿತ ಯುಬಿಸಿಟಿಯ ಎದುರಿಗೇ ಈತನದೊ ಭರ್ಜರಿ ಫ್ಲಾಟಿದೆ. ದಿನದ ಯಾವುದೇ ಗಳಿಗೆಯಲ್ಲಿ ಅಲ್ಲಿಗೆ ಹೋ ಬರೀ ಮಾಡೆಲ್ ಹುಡುಗಿಯರು ಡಿಕ್ಕೆಟ್ಟ ಸಿನಿಮಾ ನಟಿಯರು, ಪೊಲ ಅಧಿಕಾರಿಗಳು, ಬಿಬಿಎಂಪಿಯ ಕೌನ್ಸಿಲರ್‌ಗಳೇ ತುಂಬಿರುತ್ತಾರೆ. ಮಾ ಹುಡುಗಿಯರಿಗೂ ಶಂಕರ್ ರೆಡ್ಡಿ ಕರೆಸುವ ಪುಢಾರಿ-ಅಧಿಕಾರಿಗಳಿ ಇರುವ ಸಂಬಂಧ ಎಂಥವರಿಗೂ ಅರ್ಥವಾಗುವಂಥದ್ದೆ, ಇದು ಶಂ ರೆಡ್ಡಿಯ ಅಡ್ಡಕಸುಬಿನ ಒಂದು ಸ್ಯಾಂಪಲ್ಲಷ್ಟೇ. ಇದಕ್ಕೆ ಪೂರಕವೆಂಬಂತೆ ಶಂಕರ್ ರೆಡ್ಡಿ ಗಾಂಧಿನಗರಕ್ಕೂ ಎಂಟ್ರಿ ಕೊಟ್ಟು ತಾನೊಬ್ಬ ರೊ ಸಿನಿಮಾ ನಿರ್ಮಾಪಕನೆಂದೂ ಪೋಜು ಕೊಡುತ್ತಾನೆ. ಮೊದಲು ಲಿಫ್ಟ್ ಕೊಡ್ಲಾ ಎ ಮಾಂಸದ ದಂಧೆಗೆ ತಕ್ಕ ಹೆಸರಿನದ್ದೇ ಚಿತ್ರವೊಂದನ್ನು ನಿರ್ಮಿಸಿದ. ತನದಂತರ ಸೂ ಹಿಟ್ಟಾದ ಅದ್ದೂರಿ ಸಿನಿಮಾ ನಿರ್ಮಿಸಿ ದುಡ್ಡು ಬಾಚಿಕೊಂಡ. ಅಷ್ಟೆಲ್ಲಾ ದುಡ್ಡು ಬಂದ ಯಶಸ್ಸಿಗೆ ಕಾರಣನಾದ ಡೈರೆಕ್ಟರ್ ಅರ್ಜುನ್‌ಗೇ ಸಂಭಾವನೆ ವಂಚಿಸಿ ಮುಂಡಾಯಿ ತದನಂತರ ಮಾಲಾಶ್ರೀಯನ್ನು ಹಾಕಿಕೊಂಡು ಘರ್ಷಣೆ ಎಂಬ ಚಿತ್ರವನ್ನೂ ನಿರ್ಮಿ

ಈತನನ್ನು ಮುಂದಿಟ್ಟುಕೊಂಡು ಭೂಡಕಾಯಿತಿಗಿಳಿದ ನಿವೃತ್ತ ಐಪಿಎಸ್ ಸಾಹೇ ಜೊತೆಗೆ ದುಡ್ಡು ಹೂಡುವವನು ಮತ್ತೊಬ್ಬ ನೆಲಗಳ್ಳ ರಾಜಗೋಪಾಲ ರೆಡ್ಡಿ. ರಾಜಗೋಪಾಲರೆಡ್ಡಿಯ ಬೆನ್ನಿಗಿರುವವನು ಕುಪೇಂದ್ರ ರೆಡ್ಡಿ, ಪ್ರತಿಯೊಬ್ಬರೂ ಸಾವಿರ ಕೋಟಿಯ ಸಾಮ್ರಾಟರೆ. ಇಂಥದೊಂದು ಭಯಾನಕ ಜಾಲವನ್ನು ಜೈಲಿಗೆ ಹಾಕುವವರ

# ನಿಷ್ಠಾವಂತ ಪೊಲೀಸ್ ಅಧಿಕಾರಿಗೇ ಈ ಗತಿ!



ಅಧೀನಾ ಟೌನ್‌ಶಿಪ್ ನಿರಾಶ್ರಿತರ ಪೈಕಿ ನಿವೃತ್ತ ಡಿವೈಎಸ್‌ಪಿ ಮುನಿರೆಡ್ಡಿಯೂ ಪ್ರಮುಖರು. ಈ ಹಿಂದೆ ಕೋಲಾರ, ಚಿಕ್ಕಬಳ್ಳಾಪುರ ಭಾಗದಲ್ಲಿ ಪ್ರಾಮಾಣಿಕ ಮತ್ತು ದಿಟ್ಟ ಪೊಲೀಸ್ ಅಧಿಕಾರಿಯೆಂದೇ ಹೆಸರು ಪಡೆದಿದ್ದ ಮುನಿರೆಡ್ಡಿ ತಮ್ಮ ಜೀವಿತಾವಧಿಯ ಗಳಿಕೆಯನ್ನೆಲ್ಲ ತಂದು ದೊಡ್ಡಗುಬ್ಬಿಯಲ್ಲಿ 6000 ಅಡಿಗಳ ಸೈಟು ಖರೀದಿಸಿದ್ದರು. ಕಾಂಪೌಂಡ್ ಯಾವುದೋ ಕಾಲಕ್ಕೆ ಎಬ್ಬಿಸಿದ್ದರು. ಇನ್ನೇನು ನಿವೃತ್ತಿಯಾಗುತ್ತಿದ್ದಂತೆಯೇ ಮನೆ ಕಟ್ಟುವ ಅವರ ಕನಸೆಲ್ಲ ಶಂಕರ್ ರೆಡ್ಡಿಯಿಂದಾಗಿ ನುಚ್ಚುನೂರಾಯಿತು.


ಮುನಿರೆಡ್ಡಿಯವರ ಸೈಟೇ ಮಾಯವಾಗಿತ್ತು, ಸೈಟಿದ್ದ ಜಾಗ ಹುಡುಕಿ ಮತ್ತೆ ಕಾಂಪೌಂಡು ಹಾಕಲು ಹೋದರೆ ಗೂಂಡಾದಾಳಿ ಮತ್ತು ಬುಲ್ಡೋಜರ್‌ನ ಹಾವಳಿ. ಈ ಬಗ್ಗೆ ಹೆಣ್ಣೂರು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟರೆ ಮುನಿರೆಡ್ಡಿ ಓರ್ವ ಪೊಲೀಸ್ ಅಧಿಕಾರಿಯಾಗಿದ್ದವರು ಎಂಬುದನ್ನೂ ಲೆಕ್ಕಿಸದೇ ಅವರು ಕೊಟ್ಟ ದೂರನ್ನೂ ಪೊಲೀಸರು ಮುಟ್ಟಲಿಲ್ಲ. ಶುರುವಿನಲ್ಲಿ ಇದೆಲ್ಲ ಚಾಕೋನ ದುರ್ಬುದ್ಧಿ ಎಂದು ಭಾವಿಸಿದ್ದ ಮುನಿರೆಡ್ಡಿಗೆ ಕ್ರಮೇಣ ಗೊತ್ತಾಗಿದ್ದು ಇದು ಶಂಕರ್ ರೆಡ್ಡಿ ಮತ್ತು ಆತನ ಐಪಿಎಸ್ ಚಿಕ್ಕಪ್ಪನ ಕೃತ್ಯವೆಂದು. ಈ ಬಗ್ಗೆ ರಾಜ್ಯಪಾಲರಿಗೆ ದೂರು ಕೊಟ್ಟರು. ಗೃಹ ಸಚಿವರನ್ನು ಕಂಡು ಕಣ್ಣೀರಿಟ್ಟರು. ತಮ್ಮಂತೆ ವಂಚನೆಗೊಳಗಾದ ಇತರೇ ನಿವೇಶನದಾರರನ್ನು ಸಂಘಟಿಸಿ ಪತ್ರಿಕಾಗೋಷ್ಠಿ ಕರೆದರು. ನಯಾಪೈಸೆಯ ಪ್ರಯೋಜನವಾಗಿಲ್ಲ.

ವಿಪರ್ಯಾಸವೆಂದರೆ ಶಂಕರ್ ರೆಡ್ಡಿಯ ಐಪಿಎಸ್ ಚಿಕ್ಕಪ್ಪನಿಂದ ಮುನಿರೆಡ್ಡಿಯವರಿಗೇ ಮಾನಹಾನಿಯ ದಾವೆ ಹೂಡುವುದಾಗಿ ನೋಟಿಸ್ ಜಾರಿಯಾಗಿತ್ತು. ಓರ್ವ ಪೊಲೀಸ್ ಅಧಿಕಾರಿಯಾಗಿ ಇಷ್ಟೆಲ್ಲ ಸೇವೆ ಸಲ್ಲಿಸಿದ್ದೇನೆ. ಇವತ್ತು ನನ್ನ ಪ್ರಾಣಕ್ಕೇ ಈ ನೆಲಗಳ್ಳರು ಕುತ್ತು ತಂದಿದ್ದಾರೆ. ಇನ್ನು ಜನಸಾಮಾನ್ಯರ ಪಾಡೇನು? ರಾಜ್ಯದಲ್ಲಿ ಕಾನೂನೆಂಬುದು ಇದೆಯೇ.... ಎಂದು ಪ್ರಶ್ನಿಸುತ್ತಿದ್ದಾರೆ ಮುನಿರೆಡ್ಡಿ.


...ರ್ಮಾಯಿಂದ ನಕಲಿ ದಾಖಲೆ ಸೃಷ್ಟಿಸಿ ತನ್ನ ತಮ್ಮನ ...ರಿಗೆ ಶಂಕರ್ ರೆಡ್ಡಿ ಮಾಡಿಕೊಂಡಿದ್ದ. ಸದರಿ ಮೋಸದ ...ಂದಾವಣೆಗೆ ಆತ ಸಾಕ್ಷಿದಾರನನ್ನಾಗಿ ಹಾಕಿಕೊಂಡಿದ್ದು ...ನೋದ್‌ಕುಮಾರ್‌ನನ್ನು ಮತ್ತು ರಿಜಿಸ್ಟ್ರೇಷನ್ ನಡೆದಿದ್ದ ...ರಾತ್ರಿಯೇ ವಿನೋದ್‌ಕುಮಾರ್ ಕೊಲೆಯಾಗಿದ್ದ. ...ರಜಗತ್ತಿಗೆ ಇದು ಗೋವರ್ಧನ ಮೂರ್ತಿ ಎಂಬ ...ಕ್ಕೂಬ್ಬ ಶೋಕಿಲಾಲನ ಸೊಕ್ಕಿನಂತೆ ಕಾಡಿದ ...ಪ್ರಾಸದಂತೆ ಪ್ರತಿಬಿಂಬಿಸಿತ್ತಾದರೂ ಅದರ ಮರ್ಮ ...ತ್ರ ಬೇರೆಯದೇ ಇತ್ತು.

...ಅದು ಬೆಂಗಳೂರು ಮತ್ತು ದೇವನಹಳ್ಳಿ ...ಪೋರ್ಟ್ ನಡುವಿದ್ದ ಮೂರೂವರೆ ಸಾವಿರ ಕೋಟಿಯ ...ಸ್ಟರ್ ಸೊತ್ತಿನ ಹಗಲುದರೋಡೆಯ ಕತೆ. ಕ್ರೌನ್ ...ಟರ್‌ನ್ಯಾಷನಲ್ ಹೋಟೆಲ್, ಅಧೀನಾ ರೆಸಾರ್ಟ್ಸ್ ...ವಿ ಅನೇಕ ಹೋಟೆಲ್ಸ್ ಮತ್ತು ಕಂಪನಿಗಳ ಮಾಲೀಕ ...ಸೆಫ್ ಚಾಕೋ ಆ ಕಾಲಕ್ಕೇ ಬೆಂಗಳೂರಿನ ಪ್ರಮುಖ ...ಡ್ ಡೆವಲಪರ್ ಎನಿಸಿಕೊಂಡಿದ್ದ. 1994 ರಲ್ಲಿ ಆತ ...ಷಾದಪುರ ತಾಲ್ಲೂಕಿನ ದೊಡ್ಡಗುಬ್ಬಿಯಲ್ಲಿ ನೂರಕ್ಕೂ ...ಕ ಎಕರೆಗಳಷ್ಟು ಜಮೀನು ಖರೀದಿಸಿ ಅಧೀನಾ ...ನ್‌ಶಿಪ್ ಹೆಸರಲ್ಲಿ ಎಲ್ಲಾ ಪ್ಲಾಟುಗಳನ್ನು ವಿಂಗಡಿಸಿದ್ದ. ...ಈ ಟೌನ್‌ಶಿಪ್‌ನ ಬಹುತೇಕ ಗ್ರಾಹಕರೆಲ್ಲ ದುಬೈ, ...ಸ್, ಮಸ್ಕತ್‌ನಲ್ಲಿ ಉದ್ಯೋಗದಲ್ಲಿದ್ದ ಕೇರಳ ಮೂಲದ ...ನ್ನಾರೈಗಳು.

...ಕೇವಲ ದೊಡ್ಡಗುಬ್ಬಿಯಲ್ಲಷ್ಟೇ ಅಲ್ಲದೆ ಇದೇ ಕೆ.ಆರ್. ...ಪ ತಾಲ್ಲೂಕಿನ ಬಿಳಿಶಿವಾಲೆ, ಭೈರತಿ ಹೊಸಕೋಟೆ ...ಲ್ಲೂಕಿನ ಬೆಂಡಿಗಾನಹಳ್ಳಿ, ಯರ್ರಪ್ಪನಹಳ್ಳಿ, ದೊಡ್ಡನಲ್ಲೂರು



ಕೊಲೆಯಾದ ವಿನೋದ್ ಕುಮಾರ್




ಗೋವರ್ಧನ ಮೂರ್ತಿ

...ಗಳೆಲ್ಲೂ ಚಾಕೋ ಲೇಔಟುಗಳನ್ನು ನಿರ್ಮಿಸಿದ್ದ. ...ಡ್ಡಗುಬ್ಬಿಯೇ ಅಧೀನಾ ಟೌನ್‌ಶಿಪ್‌ನ 1,2 ಹಾಗೂ ... ಹಂತಗಳು, ಭೈರತಿಯಲ್ಲಿ ಎಲಿಶಿಯನ್ ಟೌನ್‌ಶಿಪ್, ...ನಾ ಹೆವೆನ್ಸ್ ಮತ್ತು ವೆಸ್ಟ ಅವೆನ್ಯೂ ಫೀಲ್ಡ್ಸ್ ...ಡ್ಡನಲ್ಲೂರು ಹಳ್ಳಿಯಲ್ಲಿ ಪ್ಲಾನೆಟ್ ರಿಜೆನ್ಸಿ, ...ಸಕೋಟೆಯಲ್ಲಿ ಗ್ರೀಫಿಯಾ ಗ್ರೀನ್ಸ್, ಆಶಿಯಾನಾ-ಹೀಗೆ ...ಕೋನ ಲೇಔಟು, ಸೈಟುಗಳು ಕೇವಲ ಎನ್ನಾರೈಗಳಿಗೆಂದೇ ...ಟಿದ್ದ ಭವಿಷ್ಯದ ಬಡಾವಣೆಗಳಂತಿತ್ತು. 60x40, ...80 ಅಳತೆಯ ಸುಮಾರು 1800 ನಿವೇಶನಗಳನ್ನು ...ಟಿ ಅದಕ್ಕೆ ಡಾಂಬರು ರಸ್ತೆ, ವಿದ್ಯುತ್, ನೀರು, ಪಾರ್ಕು ವ್ಯವಸ್ಥೆಯನ್ನೂ ಚಾಕೋ ಮಾಡಿಟ್ಟಿದ್ದ.

## ವರ್ಗೀಸ್ ಎಂಟ್ರಿ

...ವಿಶಾಲ ಕಾಂಪೌಂಡು, ಪ್ರಶಾಂತ ಪರಿಸರ, ಪ್ರಮುಖ ...ಗಳ ಸಂಪರ್ಕವಿದ್ದ ಇಂಥ ಲೇಔಟುಗಳಿಗೆ ...ದಿಕೊಂಡಂತೆ ಚಾಕೋ ತನ್ನ ಸ್ವಂತಕ್ಕೆಂದು ಒಂದಷ್ಟು ...ಮೀನನ್ನೂ ಖರೀದಿಸಿಟ್ಟಿದ್ದ. ಒಟ್ಟು 280 ಎಕರೆಗಳ ...ಜಮೀನಿನ ಸದ್ಯದ ಮಾರುಕಟ್ಟೆ ರೇಟು ಕಮ್ಮಿಯೆಂದರೂ ...ರೂವರೆ ಸಾವಿರ ಕೋಟಿ. ಯಾವುದೋ ಕಾಲಕ್ಕೆ ...ಟು ರೂಪುಗೊಂಡು ಅದರ ನಿವೇಶನಗಳನ್ನು ಒಳ್ಳೇ ...ಗೇ ಖರೀದಿಸಿದ್ದ ಮಲೆಯಾಳಿ ಎನ್ನಾರೈಗಳ ಪೈಕಿ ...ಕರು ಮನೆಗಳನ್ನು ಕಟ್ಟಿಸಿದ್ದರು. ಇನ್ನೂ ಕೆಲವರು ...ವು, ಕಾಂಪೌಂಡುಗಳನ್ನು ಹಾಕಿಬಿಟ್ಟರು. 2004 ರ ...ತ್ತಿಗೆ ಚಾಕೋನ ಈ ಆಕರ್ಷಕ ರಿಯಲ್ ಎಸ್ಟೇಟ್ ...ಮ್ರಾಜ್ಯದ ಮೇಲೆ ಸುತ್ತಮುತ್ತಲ ಅನೇಕ ಭೂಕಂಟಕರ ...ಬಿತ್ತು, ಚಾಕೋ ಹೇಳಿಕೇಳಿ ಮಲೆಯಾಳಿ. ಆತನಿಂದ



ಚಾಕೋ

ಸೈಟು ಖರೀದಿಸಿದವರ ಪೈಕಿ ಬಹುತೇಕರು ಕೇರಳ ಮೂಲದ ದುಬೈ ನಿವಾಸಿಗಳು ಮತ್ತು ಸ್ಥಳೀಯವಾಗಿ ಬಡಿದಾಡಲು ಸಾಧ್ಯವಿಲ್ಲದವರು. ಹಾಗಂತ ಮೂರೂವರೆ ಸಾವಿರ ಕೋಟಿಯ ಈ ಸಾಮ್ರಾಜ್ಯವನ್ನು ಅಷ್ಟು ಸುಲಭಕ್ಕೆ ...ಬೇಕಾಗದು. ಅದಕ್ಕೆ ಸರ್ಕಾರಿ ಮಟ್ಟದ ದೊಡ್ಡ ಕೈಯೇ ...ು. ಇಂಥ ಎಲ್ಲಾ ತಾಕತ್ತು, ಸಾಮರ್ಥ್ಯ ...ಕೂಡಿದ್ದದ್ದು ಸಿಎಂಆರ್ ಶಂಕರ್ ರೆಡ್ಡಿಗೆ!

...ಕೆಂದರೆ ಈತನ ಚಿಕ್ಕಪ್ಪ ಪ್ರಭಾವಿ ಐಪಿಎಸ್ ಅಧಿಕಾರಿ ... ಆ ಹೊತ್ತಿಗೆ ಬೆಂಗಳೂರು ನಗರ ಪೊಲೀಸ್ ...ಯಲ್ಲಿ ಪ್ರಮುಖ ಹುದ್ದೆಯನ್ನಲಂಕರಿಸಿದ್ದ. ಆದರೆ ... ಲಪಟಾಯಿಸಲೆಂದೇ ಶಂಕರ್ ರೆಡ್ಡಿ ವಿಶಿಷ್ಟ

ತಂತ್ರವೊಂದನ್ನು ಪ್ರಯೋಗಿಸಿದ್ದ. ಅದು ಜಾರ್ಜ್ ವರ್ಗೀಸ್ ಎಂಬ ದುಬೈ ರಿಟರ್ನ್ಡ್ ಖದೀಮನ ಎಂಟ್ರಿ. ನಿರಾತಂಕವಾಗಿ ನಡೆಯುತ್ತಿದ್ದ ಜೋಸೆಫ್ ಚಾಕೋನ ಲೇಔಟು ನಿರ್ಮಾಣ ಕಾರ್ಯಕ್ಕೆ 2004 ರ ಹೊತ್ತಿಗೆ ಕಾಲಿಟ್ಟ ಜಾರ್ಜ್ ವರ್ಗೀಸ್ ಮೂಲತಃ ಕೇರಳದ ಮಲೆಯಾಳಿಯೇ. ತನಗೆ ಗಲ್ಫ್‌ನಲ್ಲಿ ಸಿಕ್ಕಾಪಟ್ಟೆ ಮಲೆಯಾಳಿಗಳ ಸಂಪರ್ಕವಿದೆ, ನಿಮ್ಮ ಸೈಟುಗಳನ್ನು ನಾನು ಆಕರ್ಷಕ ಬೆಲೆಗೆ ಮಾರಿಸಿಕೊಡುತ್ತೇನೆ ಎಂದೇ ಚಾಕೋನನ್ನು ನಂಬಿಸಿದ್ದ ಜಾರ್ಜ್ ವರ್ಗೀಸ್ ಇದಕ್ಕೆಂದು ಚಾಕೋಗೆ ಆಪ್ತರಾಗಿದ್ದ ಕಮೀಷನ್ ಏಜೆಂಟ್ ಜೇಕರ್ ಥಾಮಸ್ ಮತ್ತು ಕೆ.ಟಿ. ಯೋಶ್ವಾ ಎಂಬಿಬ್ಬರು ಮಲೆಯಾಳಿಗಳ ಮೂಲಕವೇ ಪರಿಚಯಿಸಿಕೊಂಡಿದ್ದ.

## ಬುಲ್ಡೋಜರ್ ನುಗ್ಗಿಸಿದ್ದು

ಈ ಹಿಂದೆ ಕುವೈತ್‌ನ ಅಲ್ಯೂಮಿನಿಯಂ ಫ್ಯಾಬ್ರಿಕೇಷನ್ ಕಂಪೆನಿಯೊಂದರ ಸೇಲ್ಸ್ ಎಕ್ಸ್‌ಕ್ಯೂಟೀವ್ ಆಗಿದ್ದ ಜಾರ್ಜ್ ವರ್ಗೀಸ್ ಕೆಲಸ ಕೊಟ್ಟ ಕಂಪೆನಿಯನ್ನೇ ವಂಚಿಸಿ ಕುವೈತ್ ಸರ್ಕಾರದಿಂದ ಗಡಿಪಾರು ಶಿಕ್ಷೆಗೀಡಾಗಿದ್ದ. ಡೆವಲಪರ್ ಚಾಕೋಚ್ ಅರಿವಿಲ್ಲದಂತೆಯೇ ಆತನ ಪ್ಲಾಟ್ ಮಾಲೀಕರ ಡಾಟಾ ಬೇಸುಗಳನ್ನು ನೀಡು ವಂತೆ ಪದೇಪದೇ ಜಾರ್ಜ್ ವರ್ಗೀಸ್ ಪೀಡಿಸಲಾರಂಭಿಸಿದ್ದ. ಹೊಸ ಗ್ರಾಹಕರನ್ನು ಹಿಡಿಯುವ ಬದಲು ಹಳೇ ನಿವೇಶನದಾರರ ವೈಯಕ್ತಿಕ ಮಾಹಿತಿಗಾಗಿ ತಲೆಕೆಡಿಸಿಕೊಂಡಿದ್ದ ಜಾರ್ಜ್ ಬಗ್ಗೆ ಏನೋ ಅನುಮಾನ ಬಂದು ಚಾಕೋ ಆತನ ಮೇಲೊಂದು ಕಣ್ಣಿಟ್ಟಿದ್ದ. ಆಗ ಗೊತ್ತಾಗಿದ್ದು ಈ ಜಾರ್ಜ್ ವರ್ಗೀಸ್ ಬೇರೆ ಯಾರೂ ಅಲ್ಲ ಖುದ್ದು ಶಂಕರ್ ರೆಡ್ಡಿಯ ಏಜೆಂಟ್!

ಈ ಮಧ್ಯೆ ಚಾಕೋ ವಿದೇಶ ಪ್ರವಾಸಕ್ಕೆ ಹೋಗಿದ್ದನ್ನೇ ಕಾದು ಜಾರ್ಜ್ ವರ್ಗೀಸ್ ನಿವೇಶನದಾರರ ಡಾಟಾಬೇಸ್ ಗಳನ್ನೆಲ್ಲ ಕದ್ದು 'ನೀವು ಖರೀದಿಸಿದ ಸೈಟುಗಳನ್ನು ನಾವು ಜೋಪಾನವಾಗಿ ನೋಡಿಕೊಂಡಿರಬೇಕೆಂದರೆ ನೀವೆಲ್ಲರೂ ನಿವೇಶನದಾರರ ವೆಲ್‌ಫೇರ್ ಸೊಸೈಟಿಗೆ ಸದಸ್ಯರಾಗಬೇಕು ಎಂದು ಮೇಲ್ ಕಳಿಸಿದ್ದ. ಅರ್ಧಕ್ಕರ್ಧ ಸೈಟುದಾರರು ನಂಬಿ ಸದಸ್ಯರಾಗುವ ಮೂಲಕ ಬೇಕಾಬಿಟ್ಟಿ ದುಡ್ಡು ಕೊಟ್ಟರೆ ಅದನ್ನು ವರ್ಗೀಸ್ ಇಡೀ ಲೇಔಟನ್ನೇ ಲಪಟಾಯಿಸಿ ಸದಸ್ಯರಾದವರನ್ನೇ ಶಾಶ್ವತವಾಗಿ ಬೀದಿಪಾಲು ಮಾಡುವ ಖತರ್‌ನಾಕ್ ಕುತಂತ್ರಕ್ಕೆಂದು ವ್ಯಯಿಸಲಾರಂಭಿಸಿದ್ದ!

2007 ರಲ್ಲಿ ಸದ್ದಿಲ್ಲದೆ ಶುರುವಾದ ಅಧೀನಾ ಟೌನ್‌ಶಿಪ್ ವೆಲ್‌ಫೇರ್ ಸೊಸೈಟಿಯ ಮೂಲಕ ಅದರ ಎನ್ನಾರೈ ನಿವೇಶನದಾರರು, ಅದರ ಹಿನ್ನೆಲೆ, ಸಾಮರ್ಥ್ಯ ಇತ್ಯಾದಿ ವಿವರಗಳೆಲ್ಲ ಜಾರ್ಜ್ ವರ್ಗೀಸ್‌ನ ಮೂಲಕ ಶಂಕರ್ ರೆಡ್ಡಿಯ ಕೈ ಸೇರಿತ್ತು. ಅದೇ ಹೊತ್ತಿಗೆ ಕುಖ್ಯಾತ ನೆಲಕಂಟಕ ಕುಪೇಂದ್ರ ರೆಡ್ಡಿ, ಐಪಿಎಸ್ ಅಧಿಕಾರಿಯ ಸಹೋದರ ಸಂಬಂಧಿ ಮತ್ತು ಆಂಧ್ರದ ಮಾಜಿ ಗೃಹಮಂತ್ರಿ ಬ್ರಹ್ಮಾನಂದ ರೆಡ್ಡಿಯ ಸಾಕುಮಗ ಕೆ.ಸಿ. ರಾಜಗೋಪಲ ರೆಡ್ಡಿ (ಈತ ಕುಪೇಂದ್ರ ರೆಡ್ಡಿಯ ರಿಯಲ್ ಎಸ್ಟೇಟ್ ಪಾಲುದಾರ) ಸಿಎಮ್ಮಾರ್ ಗ್ರೂಪಿನ ಧಣಿ ಮತ್ತು ಐಪಿಎಸ್ ಅಧಿಕಾರಿಯ ಪುತ್ರ ಜೈದೀಪ್; ಇತ್ಯಾದಿ ರೆಡ್ಡಿ ನೆಲಗಳ್ಳರೆಲ್ಲ ಒಂದಾಗಿ ಶಂಕರ್ ರೆಡ್ಡಿಯನ್ನು ಮುಂದಿಟ್ಟುಕೊಂಡು ಭಯಾನಕ ದಾಳಿಯೊಂದಕ್ಕೆ ಕೈಯಿಟ್ಟರು.

## ಬೀದಿಪಾಲಾದ ಸೈಟುದಾರರು

ಅದು 2007 ರ ಜನವರಿ ತಿಂಗಳು. ಡಿಜೆ ಹಳ್ಳಿ ಪೊಲೀಸ್ ಠಾಣಾ ರೌಡಿ ಶೀಟರ್ ಜಯಶೀಲನ್ ಜೊತೆ ಸೇರಿಕೊಂಡು ಶಂಕರ್ ರೆಡ್ಡಿ ತನ್ನ ನೂರಾರು ಮಂದಿ ರೌಡಿಗಳು ಬುಲ್ಡೋಜರ್‌ಗಳನ್ನು ಅಧೀನಾ ಟೌನ್‌ಶಿಪ್ಪಿಗೆ ನುಗ್ಗಿಸಿದ್ದೇ ಕಟ್ಟಿಸಿದ್ದ ಮನೆಗಳು, ಹಾಕಿದ್ದ ಶೆಡ್ಡು, ಕಾಂಪೌಂಡುಗಳು, ಪಾಯ ಯಾವುದನ್ನು ಬಿಡದೆ ಇಡೀ ಲೇಔಟನ್ನೇ ನೆಲಸಮಗೊಳಿಸಲಾಯಿತು. ಅಂದರೆ ಹಿಂದೆ ರೈತರು ವ್ಯವಸಾಯ ಮಾಡುತ್ತಿದ್ದಾಗ ಹೇಗಿತ್ತೋ ಹಾಗೆಯೇ ಇಡೀ ಲೇಔಟನ್ನು ಮಟ್ಟಸವಾಗಿ ಮಾಡಿದ ಶಂಕರ್ ರೆಡ್ಡಿ ತನ್ನ ರಿವಾಲ್ವರ್ ಎತ್ತಿದ್ದೇ ಆಕಾಶಕ್ಕೇ ಫೈರು ಮಾಡುತ್ತಿದ್ದ.

ದೂರದ ಗಲ್ಫ್ ದೇಶಗಳಲ್ಲಿ ಕೆಲಸ ಮಾಡಿಕೊಂಡಿದ್ದ ಸೈಟುದಾರರು ಬಂದು ಹೇಗೆ ತಾನೇ ಬಡಿದಾಡಲು ಸಾಧ್ಯ.

ಒಮ್ಮೆ ನೆಲಸಮಗೊಂಡಿತೆಂದರೆ ಕತೆ ಮುಗಿದ ಹಾಗೆಯೇ. ಎನ್ನಾರೈಗಳ ಸೇಲ್‌ಡೀಡುಗಳಲ್ಲಿ ನಿವೇಶನದ ಸಂಖ್ಯೆಯಿರುತ್ತದೆಯೇ ಹೊರತು ಸರ್ವೇ ನಂಬರ್ ದಾಖಲಾಗಿರುವುದಿಲ್ಲ. ಯಾವುದೋ ಕಾಲಕ್ಕೆ ಜಮೀನು ಮಾರಿದ್ದ ರೈತರ ಪೈಕಿ ಅನೇಕರು ಸತ್ತೇ ಹೋಗಿದ್ದರು. ಅವರು ಮಕ್ಕಳು, ಸಂಬಂಧಿಗಳನ್ನು ಹಿಡಿದು ನಾವು ಯಾರಿಗೂ ಜಮೀನನ್ನು ಮಾರೇ ಇಲ್ಲ ಎಂದು ಕತೆ ಹೆಣೆದ ಶಂಕರ್ ರೆಡ್ಡಿ ಇಡೀ ಅಧೀನಾ ಟೌನ್‌ಶಿಪ್‌ನ ಜಮೀನನ್ನು ತನ್ನ ತಮ್ಮ ಬಾಲಸುಂದರ್ ರೆಡ್ಡಿಯ ಹೆಸರಿಗೆ ಮಾಡಿಸಿಕೊಂಡ. ಅದು ಗುಡಿಬಂಡೆಯ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ!

ಆ ಹೊತ್ತಿಗೆ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿಗೆ ಎನ್ನಾರೈಗಳ ಬೊಬ್ಬೆ ತಟ್ಟಲಿಲ್ಲ, ನೆಲಸಮಗೊಂಡ ಅಧೀನಾ ಟೌನ್‌ಶಿಪ್‌ನ ಖಾಲಿ ಬಿದ್ದ ಜಮೀನಿನಲ್ಲಿ ಶಂಕರ್ ರೆಡ್ಡಿ ತನ್ನ ಸಿಟಿ ಸ್ಕೇಪ್ ಪ್ರಾಪರ್ಟೀಸ್ ಎಂಬ ಬೋರ್ಡು ನೆಟ್ಟಿ ಅದರಲ್ಲಿ ತನ್ನದೇ ಮೊಬೈಲ್ ನಂಬರನ್ನು ಬರೆಸಿದ್ದ. ಇನ್ನೂ ಒಂದು ತಂತ್ರ ಮಾಡಿ ಎನ್ನಾರೈಗಳ್ಯಾರೂ ಡೆವಲಪರ್ ಚಾಕೋನನ್ನು ನಂಬಲೇಬಾರದು ಮತ್ತು ಚಾಕೋಗೆ ಮಾತ್ರವೇ ಗೊತ್ತಿದ್ದದ್ದು ತಾನು ಯಾರ್ಯಾರಿಗೆ ಎಲ್ಲೆಲ್ಲಿ ನಿವೇಶನ ಹಂಚಿದ್ದೇನೆ ಎಂಬುದು. ಆತ ಸ್ಥಳಕ್ಕೆ ಬರಲೇಬಾರದು. ಅದಕ್ಕೆ ಈ ಹಿಂದೆ ಚಾಕೋ ವಿರುದ್ಧ ತಾನೇ ಛೂಬಿಟ್ಟಿದ್ದ ಜೇಕರ್ ಥಾಮಸ್, ಜಾರ್ಜ್ ವರ್ಗೀಸ್, ರಾಜು. ಸಿ. ನಯನನ್, ಜೆರ್ರಿ ಸೋಮನ್, ಕೆ.ಟಿ. ಯೋಶ್ವಾ, ಸನ್ನಿ ಕೊಲ್ಲಾಥಕಲ್ ಮುಂತಾದ ಲೋಕಲ್ ಮಲೆಯಾಳಿ ಸೈಟು ಬ್ರೋಕರ್‌ಗಳನ್ನು ರೆಡಿ ಮಾಡಿದ್ದ.


ಜಾರ್ಜ್ ವರ್ಗೀಸ್ ನೇತೃತ್ವದ ಈ ಲೋಕಲ್ ಮಲೆಯಾಳಿ ಸೈಟು ಬ್ರೋಕರ್‌ಗಳಿಗೆ ಈ ಹೊತ್ತಿಗಾಗಲೇ ಭರಪೂರ ಆಮಿಷ ಸಿಕ್ಕಿಹೋಗಿತ್ತು, ಕೇಳಿದಷ್ಟು ಕಾಸು, ಬೇಕಾದ ಸೈಟು, ಪ್ರತಿನಿತ್ಯ ಪಾರ್ಟಿ ಜೊತೆಗೆ ಹೆಂಗಸರ ಸಂಗ- ಎಲ್ಲವನ್ನೂ ಒದಗಿಸಿದ್ದ ಶಂಕರ್ ರೆಡ್ಡಿ ಇವರ ಮೂಲಕ ಎನ್ನಾರೈಗಳ ತಲೆಗೆ ಸುಳ್ಳೊಂದನ್ನು ತುರುಕಿದ್ದ. ಯಾವ ಚಾಕೋನಿಂದ ನೀವೆಲ್ಲ ಸೈಟು ಖರೀದಿಸಿದ್ದಿರೋ ಅದೇ ಚಾಕೋ ನಿಮಗೆಲ್ಲ ಮೋಸ ಮಾಡಿ ಜಮೀನನ್ನು ಸಿಟಿಸ್ಕೇಪ್ ಧಣಿಗೆ ಮಾರಿಹಾಕಿದ್ದಾನೆ. ಈಗ ನಿಮ್ಮ ನಿವೇಶನಗಳನ್ನು ಉಳಿಸಬೇಕು ಅಂದರೆ ಜಮೀನು ದಾಖಲೆಗಳನ್ನೆಲ್ಲ ಜಾರ್ಜ್ ವರ್ಗೀಸ್ ಹೆಸರಿಗೆ ವರ್ಗಾಯಿಸಬೇಕು. ಅದಕ್ಕೆ ಸಿಕ್ಕಾಪಟ್ಟೆ ಖರ್ಚಿದೆ. ನೀವೆಲ್ಲ ದುಡ್ಡು ಹಾಕಬೇಕು ಎಂದು ಎರಡನೇ ಸುತ್ತಿನ ವಸೂಲಿ ಮಾಡಿಕೊಂಡರು. ಒಂದೆಡೆ ಎನ್ನಾರೈಗಳಿಗೆ ಚಾಕೋನನ್ನು ನಂಬದ ಹಾಗೆ ಮಾಡಿ ಮತ್ತೊಂದೆಡೆ ಪೊಲೀಸರನ್ನು ಛೂಬಿಟ್ಟು ಚಾಕೋ ವಿರುದ್ಧ ಒಂದರ ಮೇಲೊಂದು ಸುಳ್ಳು ಕೇಸನ್ನು ಹಾಕಿಸಿ ಆತ ತಲೆಮರೆಸಿಕೊಂಡಿರುವಂತೆ ನೋಡಿಕೊಂಡರು. ನಂಬಿದ ಎನ್ನಾರೈಗಳೆಲ್ಲ ತಮ್ಮ ನಿವೇಶನದ ಮೂಲ ದಾಖಲೆಗಳನ್ನು ವಂಚಕ ವರ್ಗೀಸ್ ಕೈಗಿತ್ತರೆ ಅದನ್ನೆಲ್ಲ ಆತ ಶಂಕರ್ ರೆಡ್ಡಿ ಗ್ಯಾಂಗೆ ಮಾರಿಕೊಂಡಿದ್ದ.

## ಬೀದಿಗಿಳಿದ ಎನ್ನಾರೈಗಳು


ಇತ್ತ ಕತಾರ್‌ನ ಕೆಲ ಎನ್ನಾರೈಗಳು ಜಾರ್ಜ್ ವರ್ಗೀಸ್‌ನ ಮಾತನ್ನು ನಂಬಿ ಚಾಕೋ ತಮ್ಮನ್ನು ವಂಚಿಸಿದ್ದಾನೆ. ಆತನ ಮೇಲೆ ಕ್ರಮ ಕೈಗೊಳ್ಳಿ ಎಂದು ಅಲ್ಲಿನ ಭಾರತೀಯ ರಾಯಭಾರಿಯಿಂದ ಕರ್ನಾಟಕದ ಮುಖ್ಯಮಂತ್ರಿಗಳಿಗೆ ಪತ್ರ ಬರೆಸಿದ್ದರು.

▶▶| 09

# ಅಧೀನಾ ಟೌನ್‌ಶಿಪ್ ನಿರಾಶ್ರಿತರ ನಾಯಿಪಾಡು







ಡಿ. ಮ್ಯಾನುಯಲ್ ಫಾದರ್ ಸತೀಶ್ ಬಾಬು ಸ್ಟೀಫನ್ ವರ್ಗೀಸ್

ಬೆಂಗಳೂರಿನಲ್ಲಿ ಮನೆ ಕಟ್ಟುವ ಕನಸು ಕಟ್ಟಿಕೊಂಡು ಜೀವಮಾನದ ಗಳಿಕೆಯನ್ನೆಲ್ಲ ತಂದು ಚಾಕೋನ ಲೇಔಟುಗಳಿಗೆ ಸುರಿದು ಬೀದಿಪಾಲಾದ ಎನ್ನಾರೈಗಳ ದುರಂತಗಳು ಒಂದಲ್ಲ, ಎರಡಲ್ಲ.

ಸ್ಟೀಫನ್ ವರ್ಗೀಸ್ ಎಂಬ 45 ವರ್ಷದ ಕೇರಳ ಮೂಲದ ದುಬೈ ಎನ್ನಾರೈ ಜೀವಮಾನವಿಡೀ ಗಳಿಸಿದ್ದನ್ನು ತಂದು 1994 ರಲ್ಲಿ 4 ಪ್ಲಾಟು ಖರೀದಿಸಿದ್ದರು. ಕಟ್ಟಿದ ಮನೆ ಸಮೇತ ಇಡೀ ಸೈಟನ್ನೇ ನೆಲಸಮಗೊಳಿಸಿದ ನೆಲಗಳ್ಳರ ವಿರುದ್ಧ ಸ್ಟೀಫನ್ ವರ್ಗೀಸ್ ಹೆಣ್ಣೂರು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟರು. ಆದರೆ ಪೊಲೀಸ್ ಠಾಣೆಗೇ ನುಗ್ಗಿದ ಶಂಕರ್ ರೆಡ್ಡಿ ಮತ್ತು ಜಾರ್ಜ್ ವರ್ಗೀಸ್ ಪೊಲೀಸರೆದುರು ಸ್ಟೀಫನ್‌ರನ್ನು ಹಿಡಿದು ಹೊಡೆದರು, ಖಾಲಿ ಛಾಪಾ ಕಾಗದದ ಮೇಲೆ ಸಹಿ ಮಾಡಿಕೊಡುವಂತೆ ಧಮಕಿ ಹಾಕಿದರು! ಡಿ. ಮ್ಯಾನುಯಲ್ ಎಂಬ ಮತ್ತೊಬ್ಬ ದುಬೈ ಎನ್ನಾರೈ ತನ್ನ ಸೈಟನ್ನು ಆಕ್ರಮಿಸಿದ್ದಾರೆಂದು ಹೆಣ್ಣೂರು ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರೆ ಶಂಕರ್ ರೆಡ್ಡಿ ಆತನ ವಿರುದ್ಧವೇ ಪೊಲೀಸರನ್ನು ಛೂಬಿಟ್ಟು ತನ್ನ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿ ಗೂಂಡಾಗಿರಿ ನಡೆಸಿದ್ದಾನೆಂದು ಪ್ರತಿದೂರು ನೀಡಿ ಮ್ಯಾನುಯಲ್‌ನನ್ನು ಎರಡು ದಿನಗಳ ಮಟ್ಟಿಗೆ ಜೈಲಿಗೆ ಹಾಕಿಸಿದ.


ಮನೆ ಕಟ್ಟಿಕೊಂಡರೂ ತಮ್ಮ ಮನೆಯೊಳಕ್ಕೆ ಕಾಲಿಡುವಂತಿಲ್ಲ. ಬಾಣಸವಾಡಿ, ಹೆಣ್ಣೂರು, ಕೊತ್ತನೂರು, ಬಾಗಲೂರು, ಸಂಪಿಗೆಹಳ್ಳಿ ಇತ್ಯಾದಿ ಯಾವುದೇ ಪೊಲೀಸ್ ಠಾಣೆಯಲ್ಲಿ ಸೈಟುದಾರರ ದೂರುಗಳು ದಾಖಲಾಗುವುದಿಲ್ಲ. ಇನ್ನೂ ಕೆಲ ಎನ್ನಾರೈಗಳು ಗೂಂಡಾಗಿರಿಗೆ ಹೆದರಿ ಬೆಂಗಳೂರಿಗೆ ಕಾಲಿಡುವ ಧೈರ್ಯವನ್ನೇ ಮಾಡಲಿಲ್ಲ. ಆ ಮಟ್ಟಿಗೆ ಶಂಕರ್ ರೆಡ್ಡಿ ಗ್ಯಾಂಗ್ ಎನ್ನಾರೈಗಳನ್ನು ಟೆರ್‌ರೈಸ್ ಮಾಡಿದೆ. ಈ ಹಂತದಲ್ಲಿ ನಿವೇಶನದಾರರ ಪರ ಹೋರಾಟಕ್ಕೆ ನಿಂತದ್ದು ಫಾದರ್ ಸತೀಶ್ ಬಾಬು. ಎನ್ನಾರೈಗಳನ್ನು ಸಂಘಟಿಸಿ ಎಮ್ಮೆಲ್ಸಿ ಗಣೇಶ್ ಕಾರ್ಣಿಕ್‌ರನ್ನು ಜೊತೆ ಹಾಕಿಕೊಂಡು ಸಿಐಡಿ ತನಿಖೆಗೂ ಕಾರಣರಾದ ಫಾದರ್ ಸತೀಶ್ ಬಾಬು ವಿನೋದ್ ಕುಮಾರ್ ಹತ್ಯೆಗೂ ಶಂಕರ್ ರೆಡ್ಡಿಗೂ ಇರುವ ರಿಯಲ್ ಎಸ್ಟೇಟ್ ಸಂಬಂಧವನ್ನು ಪತ್ತೆ ಹಚ್ಚಿದ್ದಾರೆ. ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ವಿನೋದ್ ಕುಮಾರ್ ಕೊಲೆಗೆ ಶಂಕರ್ ರೆಡ್ಡಿಯೇ ಕಾರಣ ಎಂದು ದೂರು ದಾಖಲಿಸಿದ್ದಾರೆ.

ಪೊಲೀಸರು ಎಫ್‌ಐಆರ್ ದಾಖಲಿಸುತ್ತಾರಾದರೂ ಶಂಕರ್ ರೆಡ್ಡಿಯನ್ನು ಬಂಧಿಸುವುದಿಲ್ಲ. ಇತ್ತ ಸಿಐಡಿ ಪೊಲೀಸರೂ ಶಂಕರ್ ರೆಡ್ಡಿಯನ್ನು ಕೇಸಿಗೆ ಸಿಲುಕಿಸದೇ ಅನ್ಯಾಯವೆಸಗುತ್ತಿರುವುದು ಬಯಲಾಗುತ್ತದೆ. ಮತ್ತೊಂದೆಡೆ ವಂಚಕ ಬ್ರೋಕರ್‌ಗಳಾದ ಜಾರ್ಜ್ ವರ್ಗೀಸ್, ಕೆ.ಟಿ. ಯೋಶ್ವಾ, ಬಿಜು ಪರೈಲ್, ಜಿಪಲ್ ಥಾಮಸ್, ಸತೀಶ್ ಕುಮಾರ್ ಮುಂತಾದ ಲೋಕಲ್ ಮಲೆಯಾಳಿ ಬ್ರೋಕರ್‌ಗಳ ಗ್ಯಾಂಗು ಶಂಕರ್ ರೆಡ್ಡಿಯ ಬೆಂಬಲಕ್ಕೆ ನಿಂತು ಎನ್ನಾರೈಗಳ ವಿರುದ್ಧವೇ ಅಪಪ್ರಚಾರಕ್ಕಿಳಿದಿದೆ. ಕತ್ತಿ ಮಸೆಯುತ್ತಿದೆ. ಬ್ಲ್ಯಾಕ್ ಮಾರ್ಕೆಟ್ ಮಾಫಿಯಾದ ಕೈ ಎಷ್ಟು ಉದ್ದ ಮತ್ತು ಆಳ?

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

# ಮೂರು ಸಾವಿರ ಮಠದಲ್ಲಿ ಬ್ಲ್ಯಾಕ್‌ಮೇಲ್






ಗುರುಸಿದ್ಧ ರಾಜಯೋಗೀಂದ್ರ

ಮೂರುಸಾವಿರ ಮಠದ ಮಾನ ಮೂರು ಕಾಸಿಗೆ ಹರಾಜಾಗುತ್ತಿದೆ. ಹಾಲಿ ಪೀಠಾಧಿಪತಿ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ತಲಾಖ್ ಹೇಳಿದಷ್ಟೆ ಸಲೀಸಾಗಿ 'ಪೀಠತ್ಯಾಗ' ಎಂದೇಳಿ ರಾತ್ರೋರಾತ್ರಿ ಎಸ್ಕೇಪ್ ಆಗುವ ಮೂಲಕ ಕಳೆದ ಆರು ತಿಂಗಳಿನಿಂದ ನಡೆಯುತ್ತಿದ್ದ ಹೈಡ್ರಾಮಾಕ್ಕೆ ಹೊಸ ಟ್ವಿಸ್ಟ್ ನೀಡಿದ್ದಾನೆ. ಅಸಲಿಗೆ ಸ್ವಾಮಿಯ ಎಡವಟ್ಟುಗಳು, ದುಂದುಗಾರಿಕೆಗಳೇ ಮಠದ ಈ ದುಸ್ಥಿತಿಗೆ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. 'ಉತ್ತರಾಧಿಕಾರಿ ಗೋಜಿಗೇ ಹೋಗಲ್ಲ' ಎಂಬರ್ಥದ ವಿರಕ್ತ ಡೈಲಾಗ್ ಹೊಡೆದು ಹಾನಗಲ್ ಮಠ ಸೇರಿಕೊಂಡಿರುವ ಮೂಜಗು-ಸ್ವಾಮಿ ಟಿವಿ ಕ್ಯಾಮೆರಾಗಳ ಮುಂದೆ ಕಾಣಿಸಿಕೊಳ್ಳುತ್ತಿರುವಷ್ಟು, ತೋರಿಸಿಕೊಳ್ಳುತ್ತಿರುವಷ್ಟು ಪ್ರಾಮಾಣಿಕನೂ ಅಲ್ಲ, ಮುಗ್ಧನೂ ಅಲ್ಲ. ತನ್ನೆಲ್ಲಾ ಭಾನ್ಗಡಿಗಳು ಬಂದು ಕುತ್ತಿಗೆಗೆ ಸುತ್ತಿಕೊಳ್ಳುವುದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರವೇ ಪೀಠದಿಂದ ಎದ್ದು ಹೋಗಿ 'ನಾ ಸೇಫಾದೆ' ಅಂತ ನಿಟ್ಟುಸಿರುಗೈಯ್ಯುತ್ತಿದ್ದಾನೆ.

ಅಂದಹಾಗೆ, ಈತ ಮಠಕ್ಕೆ ಉತ್ತರಾಧಿಕಾರಿ ಆಗುವಾಗಲೂ ಇಂತದೇ ವಿವಾದವನ್ನು ಮಠಕ್ಕೆ ನೇತು ಹಾಕಿದ್ದ. ಈಗಿನ ತುಮಕೂರು ಷಡಕ್ಷರಿ ಮಠದ ರುದ್ರಮುನಿ ಸ್ವಾಮಿಯೊಂದಿಗೆ ಪೀಠಕ್ಕಾಗಿ ಕ್ಯಾತೆ ತೆಗೆದಿದ್ದ ರಾಜಯೋಗೀಂದ್ರ ಕೇಸನ್ನು ದೆಹಲಿಯ ಸುಪ್ರೀಂ ಕೋರ್ಟ್ ಮೆಟ್ಟಿಲವರೆಗೆ ಬೆಳೆಸಿದ್ದ. ಕೊನೆಗೆ ಸ್ಥಳೀಯ ಮಟ್ಟದಲ್ಲಿ ಡೀಲ್ ಕುದುರಿ ವಿವಾದ ಬಗೆಹರಿಯಬೇಕಾಯ್ತು. ಆ ಡೀಲೇನು ಸಣ್ಣ ಮಟ್ಟದ್ದಾಗಿರಲಿಲ್ಲ. ಹಲವರ ಜೇಬುಗಳನ್ನು ಭರ್ಜರಿಯಾಗಿ ತುಂಬಿಸಿದ ಡೀಲು ಅದಾಗಿತ್ತು. ಅಷ್ಟೊಂದು ಗಂಟನ್ನಾದರು ಬೈರಾಗಿಯಾದ ರಾಜಯೋಗೀಂದ್ರ ಎಲ್ಲಿಂದ ತರಬೇಕು. ತನಗೆ ಒಲಿದು ಬರಲಿದ್ದ ಕೋಟ್ಯಂತರ ಆಸ್ತಿಯ ಮಠದ ವಾರಸುದಾರಿಕೆಯ ಧೈರ್ಯದಲ್ಲೇ ಸಾಲ ಮಾಡಿ ಡೀಲಿನ ಮೊತ್ತವನ್ನು ತುಂಬಿಕೊಟ್ಟಿದ್ದ. ಅದಾದ ಮೇಲಾದರು ಸ್ವಾಮಿ ಕೊಂಚ ಎಚ್ಚೆತ್ತುಕೊಳ್ಳಬಹುದಿತ್ತು, ಆದರೆ ಪೀಠ ದಕ್ಕಿದ್ದೇ ಅಡವಿಡುವುದಕ್ಕೆ ಅಂದುಕೊಂಡವನಂತೆ ತನ್ನೆಲ್ಲಾ ಸಾಲ, ತೀಟೆಗಳನ್ನು ತೀರಿಸಿಕೊಳ್ಳಲು ಹಾಗೂ ತನ್ನ ರಕ್ಷಣೆಗೆಂದು ಸಾಕಿದ್ದ ಚೇಲಾಗಳಿಗೆ ಮಾಡುವ ತಿಂಗಳ ಪೇಮೆಂಟಿಗೆಂದು ಮಠದ ಒಂದೊಂದೆ ಸ್ವತ್ತನ್ನೂ ಅಡವಿಡುತ್ತಾ ಬಂದಿದ್ದ. ಹೀಗೆ ಆತ ಮಾಡಿದ ಸಾಲದ ಹೊರೆಯೇ 10 ಕೋಟಿಗೂ ಹೆಚ್ಚಿದೆ. ಮೂಜಗು ಮಠದ ಸುಮಾರು 282 ಕೆ.ಜಿ. ಬಂಗಾರವನ್ನು ಹುಬ್ಬಳ್ಳಿ, ಬೆಳಗಾವಿ, ತುಮಕೂರಿನಲ್ಲಿ ಅಡವಿಟ್ಟಿದ್ದಾನೆ. ಧಾರವಾಡದ ಜಿ.ಪಂ. ಸದಸ್ಯೆ ಗೌಡತಿಗೆ ಒಂದು ಕೋಟಿ ರೂಪಾಯಿ ನೀಡಿದ್ದಾನಂತೆ. ಇಂಥಾ ರಾದ್ಧಾಂತಗಳಿಂದಲೇ ಭಕ್ತರ ವಲಯದಲ್ಲಿ ಆತನ ಮೇಲಿನ ಗೌರವ ಕುಸಿಯುತ್ತಲೇ ಬಂದಿತ್ತು.

## ದಿಂಗಾಲೇಶನ ಬ್ಲ್ಯಾಕ್‌ಮೇಲ್


ಮೂಜಗು ಸ್ವಾಮಿಗೆ ಸಾಲ ಮಾಡುವ ಚಟ ಇರೋದನ್ನು ಚೆನ್ನಾಗಿ ಎನ್‌ಕ್ಯಾಶ್ ಮಾಡಿಕೊಂಡದ್ದು ಬಾಲೆಹೊಸೂರಿನ ದಿಂಗಾಲೇಶ್ವರ ಸ್ವಾಮಿ. ಖೋಟಾನೋಟಿನ ಕಾವಿ ಕಿಂಗ್ ಅಂತೆಲ್ಲಾ ಅಪಖ್ಯಾತಿಗಳನ್ನು ಮೈಗಂಟಿಸಿಕೊಂಡಿರುವ ದಿಂಗಾಲೇಶ್ವರ ಮೂರು ಸಾವಿರ ಮಠದ ಪೀಠಾಧಿಕಾರಿ ಆಗಬೇಕೆಂದು ಕಣ್ಣಿಟ್ಟಿದ್ದ. ಹಾಗಾಗಿ ತನ್ನಲ್ಲಿದ್ದ ಹಡಬೆ ದುಡ್ಡನ್ನು ಮೂಜಗು ಸ್ವಾಮಿಗೆ ಎಣಿಸಿ ಎಣಿಸಿ ಸಾಲವಾಗಿ ಕೊಡುತ್ತಲೇ ಬಂದ. 'ನೀವು ಎಷ್ಟಾದರು ಸಾಲ ತಗೊಳ್ಳಿ ಬುದ್ದಿ, ಅದಕ್ಕೆ ಬಡ್ಡಿಯನ್ನೇನು ಕೊಡುವ ಅವಶ್ಯಕತೆ ಇಲ್ಲ' ಎನ್ನುತ್ತಿದ್ದ ದಿಂಗಾಲೇಶ್ವರನ ಅಸಲಿ ಹಕೀಕತ್ತೇ ಮೂಜಗುಗೆ ಅರ್ಥವಾಗಲಿಲ್ಲ. ಬೆಟ್ಟದಷ್ಟು ಸಾಲ ಮಾಡಿಕೊಂಡು ಅಡಕತ್ತರಿಗೆ ತಗುಲಿಕೊಂಡಿದ್ದ ಆ ಸಾಲವನ್ನೇ




ದಿಂಗಾಲೇಶ್ವರ ಸ್ವಾ...

ದಿಂಗಾಲನ ಜೋಳಿಗೆಗೆ ಹಾಕಲು ಮಠದ ಹೈ... ಕಮಿಟಿಯಾಗಲಿ, ಭಕ್ತ ಸಮೂಹವಾಗಲಿ ಒಪ್ಪು... ಎನ್ನುವುದು ಮೂಜಗುಗೆ ಚೆನ್ನಾಗೇ ತಿಳಿದಿತ್ತು. ಹಾ... ಸುಮ್ಮನೇ ಕೂರಲು ದಿಂಗಾಲ ಬಿಡಲಿಲ್ಲ. ಸಾಲ ... ವಿಕ್ನೆಸ್ಸುಗಳನ್ನು ನೆಪವಾಗಿಟ್ಟುಕೊಂಡು ಬ್ಲ್ಯಾಕ್‌ಮೆ... ಮಾಡುತ್ತಲೇ ಇದ್ದ.

ಆಗಿದ್ದಾಗಲಿ ಅಂತ ಉತ್ತರಾಧಿಕಾರಿ ನೇಮಕ ಮಾ... ವಿಚಾರವನ್ನು ಮೂಜಗು ಪ್ರಸ್ತಾಪಿಸಿಯೇ ಬಿಟ್ಟ. ಅ... ಶುರುವಾದದ್ದು ಈ ಹೈಡ್ರಾಮಾ. ಮಠದೊ... ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ...




ಬಸವರಾಜ ಬೊಮ್ಮಾಯಿ




ವಿಜಯ್ ಸಂಕೇಶ್ವರ




ಮೋಹನ್ ಲಿಂಬಿಕಾಯಿ



ಶಂಕ್ರಣ್ಣ ಮುನವಳ್ಳಿ



ಜಗದೀಶ್ ಶೆಟ್ಟರ್



ಬಸವರಾಜ ಹೊರಟ್ಟಿ

## ರಾಜಕೀಯ ನೆಲೆಗಾಗಿ ಮಠ ಬಳಕೆ

ರಾಜಕೀಯ ನೆಲೆ ಕಳೆದುಕೊಂಡಿರುವ ಹುಬ್ಬಳ್ಳಿ ಧಾರವಾಡದ ಅನೇಕ ಮುಖಂಡರು ಮೂರುಸಾವಿರ ಮಠದ ವಿವಾದವನ್ನು ಬಳಸಿಕೊಂಡು ಮಠದ ಅಂಗಳದಿಂದ ತಮ್ಮ ರಾಜಕೀಯ ನೆಲೆ ಕಂಡುಕೊಳ್ಳುವ ಇರಾದೆಗಿಳಿದಿದ್ದಾರೆ. ಅಂತಹವರಲ್ಲಿ ಮಾಜಿ ಎಂಎಲ್‌ಸಿ ಮೋಹನ ಲಿಂಬಿಕಾಯಿ ಹಾಗೂ ಅಕ್ಕಿವ್ಯಾಪಾರಿ ಶಂಕ್ರಣ್ಣ ಮುನವಳ್ಳಿ ಕೂಡ ಪ್ರಮುಖರಾಗಿದ್ದಾರೆ.

ಇಬ್ಬರೂ ಬಿಜೆಪಿಯವರೇ ಆದರೂ ಶೆಟ್ಟರ್ ಪ್ರಭೆಯಲ್ಲಿ ಅವರಿಗೆ ಅಸ್ತಿತ್ವ ಇಲ್ಲದಂತಾಗಿಹೋಗಿದೆ. ಶೆಟ್ಟರ್ ವಿರುದ್ಧ ಸೇಡು ತೀರಿಸಿಕೊಳ್ಳಲು ಮಠದ ಜಗಳವನ್ನು ಇವರು ಬಳಸಿಕೊಳ್ಳುತ್ತಿದ್ದಾರೆ. ದಿಂಗಾಲಿಯ ಹಿನ್ನೆಲೆ ಸರಿ ಇಲ್ಲ ಎನ್ನುವ ಕಾರಣಕ್ಕೆ ಇವರ್‍ಯಾರು ಆತನನ್ನು ವಿರೋಧಿಸುತ್ತಿಲ್ಲ. ಬದಲಾಗಿ ಆತ ಶೆಟ್ಟರ್ ಕ್ಯಾಂಡಿಡೇಟು ಎನ್ನುವುದಷ್ಟೇ ಅವರ ಕಣ್ಣುರಿ. ದಿಂಗಾಲಿಯನ್ನು ಮಠದಿಂದ ಹೊರಗಟ್ಟುವ ಮೂಲಕ ಶೆಟ್ಟರ್‌ಗೆ ಟಾಂಗ್ ಕೊಡುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಮೂಲತಃ ವಕೀಲನಾಗಿದ್ದ ಮೋಹನ ಲಿಂಬಿಕಾಯಿ ಮಾಜಿ ಸಿ.ಎಂ. ಯಡ್ಡಿಯ ಖಾಸಾ ಚೇಲಾ. ಅಲ್ಲದೆ, ಅವನ ಕಾನೂನು ಸಲಹೆಗಾರ ಎಂತಲೂ ಕರೆಯುತ್ತಾರೆ. ಅದಕ್ಕೋಸ್ಕರವೇ ಹಿಂದೆ ಹೆಚ್.ಕೆ.ಪಾಟೀಲರ ವಿರೋಧಿ ಅಲೆಯನ್ನು ಬಳಸಿಕೊಂಡು ಯಡ್ಡಿ ಈತನನ್ನು ಎಂಎಲ್‌ಸಿಯನ್ನಾಗಿ ಮಾಡಿದ್ದ. ಮುಂದೆ ಅವನೊಂದಿಗೆ ಕೆಜೆಪಿಗೆ ಹೋಗಿ ಚಡ್ಡಿಗಳಿಗೆ ಹಿಗ್ಗಾಮುಗ್ಗಾ ಬೈದ. ಅದರ ಪನಿಶ್‌ಮೆಂಟು ಎಂಬಂತೆ ಮೊನ್ನೆಯ ಎಂಎಲ್‌ಸಿ ಚುನಾವಣೆಯಲ್ಲಿ ಬಿಜೆಪಿಯವರು ಈತನಿಗೆ ಟಿಕೆಟ್ ಕೊಡಲಿಲ್ಲ. ಜಗದೀಶ್ ಶೆಟ್ಟರ್‌ನೇ ಟಿಕೆಟ್ ತಪ್ಪಿಸಿದ್ರು ಎಂಬ ಸಿಟ್ಟು ಇಂದಿಗೂ ಇವನಲ್ಲಿದೆ.

ಇತ್ತೀಚೆಗಷ್ಟೇ ಬಿಲ್ಡರ್ ದಂಧೆ ಶುರು ಮಾಡಿರುವ ಈತನ ಕಂಪನಿಯಲ್ಲಿ ಕೆಎಲ್‌ಇ ನಿರ್ದೇಶಕ ಬತ್ತಿ ಶಂಕ್ರಣ್ಣ ಮುನವಳ್ಳಿ ಕೂಡ ಪಾಲುದಾರ. ಈತ ಕೂಡ ಬಿಜೆಪಿಯಲ್ಲಿ ಏನಾದರು ಗತಿ ಮುಟ್ಟಬೇಕೆಂದರೆ ಶೆಟ್ಟರನ್ನು ಸೈಡ್ ಹಚ್ಚಬೇಕು ಎಂಬ ಸಿದ್ಧಾಂತದವ. ಹೀಗಾಗಿ ಮೂಜಗುವನ್ನು ಮಠ ಬಿಡಿಸಿ ಹಾನಗಲ್ ಸೇರುವಂತೆ ಮಾಡಿದರು. ಈಗ ಹಾನಗಲ್‌ಗೆ ಹೋಗಿ ಸ್ವಾಮಿಗಳೇ ಮತ್ತೆ ಮಠಕ್ಕೆ ಬನ್ನಿ ಎಲ್ಲಾ ಸರಿ ಮಾಡಿಟ್ಟು ಬೇಕಾದರೆ ಮತ್ತೆ ಹೋಗಿ ಎಂದು ಹೇಳಿ ಮಠದಲ್ಲಿ ಬಿರುಗಾಳಿ ಎಬ್ಬಿಸಿದ್ದಾರೆ.

ಇನ್ನು ಉಳಿದಂತೆ ಹೈಪವರ್ ಕಮಿಟಿಯಲ್ಲಿನ ಸದಸ್ಯರಲ್ಲಿ ಬಸವರಾಜ ಬೊಮ್ಮಾಯಿ 'ಮಠದ ರಗಳೆ ನಮಗ್ಯಾಕೆ ಏನಾದರೂ ಮಾಡಿಕೊಳ್ಳಲಿ' ಎಂದು ದೂರವುಳಿದಿದ್ದರೆ, ವಿಜಯ ಸಂಕೇಶ್ವರ ಊರು ಸುಟ್ಟರೂ ಹನುಮಪ್ಪ ಹೊರಗೆ ಎಂಬಂತೆ ಎಲ್ಲದರಲ್ಲೂ ತಮ್ಮ ಬಾಲ ಅಲ್ಲಾಡಿಸುತ್ತಿದ್ದರೂ ಇಲ್ಲದಂತೆ ಕಾಣಿಸಿಕೊಳ್ಳುತ್ತಾರೆ. ವೀರಣ್ಣ ಮತ್ತಿಕಟ್ಟಿ ಅನಾರೋಗ್ಯ ಎಂದು ಮಠದ ಉಸಾಬರಿಗೆ ಬಂದಿಲ್ಲ. ಮಾಜಿ ಮಂತ್ರಿ ಹೊರಟ್ಟಿ ಆಗೊಮ್ಮೆ ಈಗೊಮ್ಮೆ ಮಠಕ್ಕೆ ಟ್ರಸ್ಟ್ ಮಾಡೋದೆ ಸೂಕ್ತ ಎನ್ನುವ ಬಾಂಬ್ ಹಾಕುತ್ತಿದ್ದಾರಷ್ಟೆ.

ಒಟ್ಟಿನಲ್ಲಿ ಕಾವಿಗಳು ಪೀಠಕ್ಕಾಗಿ, ಖಾದಿಗಳು ಅಸ್ತಿತ್ವಕ್ಕಾಗಿ ಮೂರು ಸಾವಿರ ಮಠವನ್ನು ಬೀದಿಯಲ್ಲಿ ಎಳೆದಾಡುತ್ತಿದ್ದಾರೆ. ಕೊನೆಗೆ ಎಲ್ಲಿಗೆ ಬಂದು ಮುಟ್ಟುತ್ತೋ ಖುದ್ದು ಮೂಜಗುಗೇ ಬಲ್ಲ!


ಬಂಡವಾಳವಾಗಿಟ್ಟುಕೊಂಡು ಈಗ ದಿಂಗಾಲೇಶ್ವರ ಮೂಜಗುವನ್ನು ಬುಗುರಿಯಂತೆ ಆಡಿಸುತ್ತಿದ್ದಾನೆ.

ತನ್ನನ್ನು ಮೂರು ಸಾವಿರ ಮಠದ ಪೀಠಾಧಿಕಾರಿಯಾಗಿ ಘೋಷಿಸಬೇಕು ಎಂದು ದಿಂಗಾಲ ಫರ್ಮಾನು ಹೊರಡಿಸಿ ಮಠ ಹೊಕ್ಕಾಗಲೇ ಮೂಜಗುಗೆ ತಾನೆಂಥ ಖೆಡ್ಡಾಕ್ಕೆ ಬಿದ್ದಿದ್ದೇನೆನ್ನುವುದು ಗೊತ್ತಾಗಿರೋದು. ಕ್ರಿಮಿನಲ್ ಕಾವಿಷ್ಠನಾದ ದಿಂಗಾಲೇಶ್ವರನನ್ನು ಉತ್ತರಾಧಿಕಾರಿಯಾಗಿ ಘೋಷಿಸೋದು ಅಷ್ಟು ಸುಲಭದ ಕಾಯಕವಾಗಿರಲಿಲ್ಲ. ಕೋಟ್ಯಂತರ ಮೌಲ್ಯದ ಆಸ್ತಿ ಹೊಂದಿರುವ, ಅದಕ್ಕಿಂತಲೂ ಹೆಚ್ಚಾಗಿ ಪ್ರತಿಷ್ಠಿತ ಪರಂಪರೆ ಹೊಂದಿರುವ ಮಠವನ್ನು ಮತ್ತು ಹೈಪವರ್ ಕಮಿಟಿ ಸದಸ್ಯರು ದಿಂಗಾಲಿ... ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡುವುದೇ ... ಬೇಕಿದ್ದರೆ ಮಠದ ಹಿಂದಿನ ಜಗದ್ಗುರು ಗಂಗಾಧರ ಸ್ವಾ... ವಿಲ್ ಪ್ರಕಾರ ಘಟಪ್ರಭಾದ ಬೂಬ್ಬಲ್ ಗ... ಕೆಂಪಯ್ಯಸ್ವಾಮಿ ಮಠದ ಮಲ್ಲಿಕಾರ್ಜುನ ದೇ... ಉತ್ತರಾಧಿಕಾರಿಯನ್ನಾಗಿ ನೇಮಿಸುವುದು ಸೂಕ್ತ ... ವರಾತ ತೆಗೆದಿದ್ದರು.

## ಪೀಠತ್ಯಾಗದ ಅಸಲಿಯತ್ತು

ತನ್ನ ನೇಮಕಕ್ಕೆ ವಿರೋಧ ವ್ಯಕ್ತವಾಗಿದ್ದನ್ನು ... ಚುರುಕಾದ ದಿಂಗಾಲೇಶ, ಮೂಜಗು ಸ್ವಾಮಿ ...

## ಸೂತ್ರಧಾರ ಈ ಸಾಹುಕಾರ




ಮೂರು ಸಾವಿರ ಮಠಕ್ಕೆ ಉತ್ತರಾಧಿಕಾರಿಯಾಗಿ ಆಯ್ಕೆಯಾಗುವ ... ದಿಂಗಾಲೇಶ್ವರನಿಗೆ ಇರುವುದಕ್ಕಿಂತ ಹೆಚ್ಚು ಕಾತುರ ಆತನ ಪರಮ ... ಮಲ್ಲಿಕಾರ್ಜುನ ಸಾಹುಕಾರನಿಗೆ ಇದ್ದಂತಿದೆ. ಮಠ ದಿಂಗಾಲನ ಕಬ್ಜಾಕ್ಕೆ ... ಮಠದ ವಿದ್ಯಾವರ್ಧಕ ಸಂಘಕ್ಕೆ ತಾನೇ ಅಧ್ಯಕ್ಷನಾಗಿಬಿಡಬಹುದೆನ್ನುವ ಅ... ಆತನದು. ಹಾಗಾಗಿ ಈ ಎಲ್ಲ ತಯಾರಿಗಳನ್ನ ತಾನೇ ಮುಂದು... ಮಾಡಿಸಿದ್ದ. ಒಂದು ಕಾಲದಲ್ಲಿ ಖಾಲಿ ಚೀಲದ ವ್ಯಾಪಾರ ಮಾಡಿ... ಸುತ್ತುತ್ತಿದ್ದ ಎನ್ನುವುದು ಎಷ್ಟು ಸತ್ಯವೋ ಈಗ ಶೆಟ್ಟರ್‌ನ ಸದ್ಯದ ರೈಟ್... ಅನ್ನುವುದೂ ಅಷ್ಟೇ ಸತ್ಯ. ಈ ಹಿಂದೆ ಹುಬ್ಬಳ್ಳಿಯ ನೆಹರು ಕ್ರೀಡಾಂ... ಜೀವನದರ್ಶನ ಎಂಬ ಹೆಸರಿನ ದಿಂಗಾಲೇಶ್ವರನ ತಿಂಗಳ ಪ್ರವಚನ ... ಅದರಲ್ಲಿಯೂ 35 ಲಕ್ಷ ಪೀಕಿದ್ದ. ದಿಂಗಾಲಿಯ ಆಶೀರ್ವಾ... ಎನ್‌ಡಬ್ಲೂಆರ್‌ಟಿಸಿ (ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಯ) ಅಧ್ಯಕ್ಷನಾಗಿ ಅದನ್ನೂ ಸಂಪೂರ್ಣ ದಿವಾಳಿಗೆ ಹ... ಸಾಹುಕಾರ ಅದರಲ್ಲಿಯೂ ಫುಲ್ ಸಾಹುಕಾರನಾದ. ಸಧ್ಯ ಶೆಟ್ಟರ್‌ನ ಹೆಸರು ಮುಂದಿಟ್ಟುಕೊಂಡು ಮೂರುಸಾವಿರ... ಮೂಜಗುವನ್ನು ಹೊರಹಾಕಿ ದಿಂಗಾಲಿಯನ್ನು ತಂದು ಕೂರಿಸುವುದೊಂದೇ ಈತನ ಕಾಯಕ. ಹೀಗಾಗಿ ದಿಂ... ಬಡ್ಡಿಮುದ್ದಿನಲ್ಲಿ ಮೂಜಗು ಮಠಕ್ಕೆ ವಾಪಾಸ್ ಬರಲಿ ಉತ್ತರಾಧಿಕಾರಿ ಘೋಷಣೆ ಮಾಡಲಿ ಎಂದು ಕೆಲ ... ಭಕ್ತರನ್ನ ಜಮಾಯಿಸಿಕೊಂಡು ಮಠದ ಮುಂದೆ ಪ್ರತಿಭಟನೆ ನಡೆಸುತ್ತಿದ್ದಾನೆ. ಪ್ರತಿ ಸ್ಟ್ರೈಕಿಗೆ ದಿನಕ್ಕೆ 5 ಲಕ್ಷ ಪೇ... ಇದೆಯಂತೆ. ಹೀಗಾಗಿ ಕೌನ್ಸಿಲರ್ ಶಿವಾನಂದ ಮುತ್ತಣ್ಣವರ ಅಂತವರು ತಾವು ಏನು ಮಾಡುತ್ತಿದ್ದೇವೆ... ಅರಿವಿಲ್ಲದೆ ಗಂಟಲು ಹರಿದುಕೊಳ್ಳುತ್ತಿದ್ದಾರೆ.

# ...ಉತ್ತರಾಧಿಕಾರಿಯ ನೇಮಕ ಹೀಗಿರಬೇಕು


...ಮಠದ ಪರಂಪರೆಯಂತೆ ಉತ್ತರಾಧಿಕಾರಿಯ ನೇಮಕ ಹೀಗೇ ಇರಬೇಕೆನ್ನುವ ನಿಯಮವಿದೆ. ಅದರಂತೆ ಭಕ್ತರ ...ಯಲ್ಲಿ ಚುನಾಯಿಸಲಾದ ಸ್ವಾಮಿಯ ಹೆಸರನ್ನು ಪೀಠಾಧಿಪತಿ ಅಂತಿಮಗೊಳಿಸಬೇಕು. ನಂತರ ಮಠದ ಪರವಾಗಿ ...ಗೆ ಭಿನ್ನಹ ಕೊಟ್ಟು ಹುಬ್ಬಳ್ಳಿಯ ಬಂಕಾಪುರ ಚೌಕ್‌ನಿಂದ ನೀಲಿಜಿನ್ ರಸ್ತೆಯಲ್ಲಿರುವ ಚಿಕ್ಕವೀರಯ್ಯ ಅವರ ...ಯಲ್ಲಿ ಪೂಜೆ ಸಲ್ಲಿಸಬೇಕು. ಆಮೇಲೆ ಪೂರ್ಣ ಕುಂಭ ಮೆರವಣಿಗೆಯೊಂದಿಗೆ ಮೂರುಸಾವಿರ ಮಠಕ್ಕೆ ...ದು ಧಾರ್ಮಿಕ ವಿಧಾನದಂತೆ ಗದ್ದುಗೆಗೆ ಪೂಜೆ ಸಲ್ಲಿಸಿ ಭಕ್ತರ ಸಮ್ಮುಖದಲ್ಲಿ ಉತ್ತರಾಧಿಕಾರಿ ಘೋಷಣೆಯಾಗಬೇಕು. ...ರೆ, ಮೂಜಗು ಘೋಷಣೆ ಮಾಡಲು ಹೊರಟಿದ್ದ ದಿಂಗಾಲೇಶ್ವರ ಸ್ವಾಮಿ ಪಟ್ಟಕ್ಕಾಗಿ ಕಳೆದ 20 ದಿನದಿಂದ ...ದಲ್ಲೇ ಠಿಕಾಣಿ ಹೂಡಿದ್ದ. ನಾಲ್ಕು ವರ್ಷದಿಂದ ಆಗಾಗ ಪೇಮೆಂಟ್ ಮಾಡಿ ಪೀಠಕ್ಕೆ ಹತ್ತಿರವಾದೆ ಎಂದುಕೊಂಡಿದ್ದ ...ಗಾಲ ಕಳೆದ ಮೂರು ತಿಂಗಳಿಂದಂತೂ ತನ್ನ ಬಾಲೆಹೊಸೂರು ಮಠ ಮರೆತು ಮೂರುಸಾವಿರ ಮಠದಲ್ಲೇ ತನ್ನ ...ಣೆಯನ್ನ ಫಿಕ್ಸ್ ಮಾಡಿಕೊಂಡುಬಿಟ್ಟಿದ್ದ. ಇಂತಹ ಡೀಲ್ ಸ್ವಾಮಿ ಐತಿಹಾಸಿಕ ಹಿನ್ನೆಲೆಯುಳ್ಳ ಭಾವೈಕ್ಯತೆಯ ...ವೊಂದಕ್ಕೆ ಉತ್ತರಾಧಿಕಾರಿಯಾಗಿ ನೇಮಕವಾಗಿದ್ದೇ ಆದಲ್ಲಿ ಮೂರುಸಾವಿರ ಮಠವನ್ನು ಸಾವಿರದಂತೆ ಮೂರು ...ಗ ಮಾಡಿ ಸಾವಿರ ಮಠ ಎಂದು ಹೆಸರಿಡುವುದರಲ್ಲಿ ಸಂದೇಹವಿರಲಿಲ್ಲ.

...ಪಟ್ಟನ್ನು ಮತ್ತಷ್ಟೂ ಬಿಗಿ ಮಾಡಿದ್ದ. ...ಮಾಡಿ ಶೂಲಕ್ಕೆ ತಗುಲಿಕೊಂಡಿದ್ದ ...ಜಗು ನವೆಂಬರ್ 23 ರಂದು ...ರು ಸಾವಿರ ಭಕ್ತರ ಸಭೆ ಕರೆದಿದ್ದ. ...ಯಲ್ಲಿ ತನ್ನ ಉತ್ತರಾಧಿಕಾರಿಯನ್ನು ...ಷಣೆ ಮಾಡುವುದು ಬಹುಪಾಲು ...ಯಾಗಿತ್ತು, ಅರ್ಥಾತ್ ಆ ಸಭೆಯ ...ರ ಬಾಲೆಹೊಸೂರಿನ ದಿಂಗಾಲಿ ...ಮ ಉತ್ತರಾಧಿಕಾರಿ ಪಟ್ಟ ...ವಂತವಾಗಿ ಕಿತ್ತುಕೊಳ್ಳುವುದು ...ಯಾಗಿತ್ತು, ದಿಂಗಾಲನಂತೂ ತಾನು ...ಆಗೇಬಿಟ್ಟೆ ಎಂಬ ಭರಾಟೆಯಲ್ಲಿ ...ಮಾಣವಚನ ಸ್ವೀಕಾರ ...ರಂಭದಂತೆ ಒಂದು ಅದ್ದೂರಿ ಕಾರ್ಯಕ್ರಮಕ್ಕೆ ತಯಾರಿ ...ಟ್ಟುಕೊಂಡಿದ್ದ. ದೊಡ್ಡ ಶಾಮಿಯಾನ ಹಾಕಿಸಿ ಅದರಲ್ಲಿ ...ಸಾವಿರ ಚೇರ್ ಹಾಕಿಸಿದ್ದ. ಭಕ್ತರಿಗೆ ಪ್ರಸಾದ ಎಂದು ...ಕ್ವಿಂಟಲ್ ಬೂಂದಿ ಮಾಡಿಸಿದ್ದ. ಅಲ್ಲದೆ, 5 ಲಕ್ಷದ ...ಕಿ ತರಿಸಿ ಸಂಭ್ರಮಾಚರಣೆಯ ಎಲ್ಲ ಸಿದ್ಧತೆಗಳನ್ನು ...ರ್ಣಗೊಳಿಸಿದ್ದ. ಒಂದುವೇಳೆ, ಸಭೆಯಲ್ಲಿ ಗೊಂದಲ ...ವೇರ್ಪಟ್ಟು ತನ್ನನ್ನು ಆಯ್ಕೆ ಮಾಡದಿದ್ದರೆ ಹುಬ್ಬಳ್ಳಿ ಶಹರಿನಲ್ಲಿ ಪ್ರತಿಭಟನೆಯ ನೆಪವಿಟ್ಟುಕೊಂಡು ದೊಂಬಿ ಹುಟ್ಟುಹಾಕುವುದಕ್ಕೂ ದಿಂಗಾಲಿ ಶಸ್ತ್ರ ಸನ್ನದ್ಧನಾಗಿದ್ದ.



ಡಿಸಿಪಿ ಹನುಮಂತರಾಯ

ಈ ಅನಾಹುತದ ಸುಳುವಿಡಿದ ಹೈಪವರ್ ಕಮಿಟಿಯ ಮೋಹನ್ ಲಿಂಬಿಕಾಯಿ, ಡಿಸಿಪಿ ಹನುಮಂತರಾಯ ನೊಂದಿಗೆ ಹಿಂದಿನ ದಿನ ಸಾಯಂಕಾಲವೇ ಮಠಕ್ಕೆ ದಾಳಿಯಿಟ್ಟು ಮಠದ ಉಸಾಬರಿ ಬಿಟ್ಟು ಜಾಗ ಖಾಲಿ ಮಾಡುವಂತೆ ಧಮಕಿ ಹಾಕಿದ್ದ. ದಿಂಗಾಲಿ ಅಷ್ಟು ಮಾತ್ರಕ್ಕೆ ಬಗ್ಗುವ ಆಸಾಮಿಯಲ್ಲ. ಅಲ್ಲೂ ತನ್ನ ನಖರಾ ತೆಗೆದಿದ್ದಾನೆ. ಆಗ ಜೊತೆಯಲ್ಲಿದ್ದ ಡಿಸಿಪಿ ಕೋರ್ಟ್‌ನ ತೀರ್ಪನ್ನು ಮುಂದಿಟ್ಟುಕೊಂಡು ಮುಂದೆ ಏನೇನಾಗಬಹುದೆನ್ನುವ ತಮ್ಮ ಪೊಲೀಸ್ ಸ್ಟೋರಿ ಹೇಳುತ್ತಿದ್ದಂತೆಯೇ ಕೊಂಚ ಬೆಂಡಾದ ದಿಂಗಾಲಿ ತನ್ನ ಚೇಲಾಗಳೊಂದಿಗೆ ಎಸ್ಕೇಪ್ ಆಗಿದ್ದ.



ರುದ್ರಮುನಿಸ್ವಾಮಿ

ಸಭೆಗೂ ಕೆಲವೇ ಗಂಟೆಗಳ ಮುನ್ನ ಮಠದ ಆವರಣದಲ್ಲಿ ನಡೆದ ಈ ನಾಟಕೀಯ ಬೆಳವಣಿಗೆಗಳಿಂದ ಬೆವರಿಳಿಸಿಕೊಂಡ ಮೂಜಗುಗೆ ಪೆಟ್ಟು ತಿಂದು ಹುಲಿಯಂತಾಗಿರುವ ದಿಂಗಾಲಿ ತನ್ನನ್ನು ಸುಮ್ಮನೇ ಬಿಡೋದಿಲ್ಲ ಎಂಬುದು ಖಾತ್ರಿಯಾಗಿತ್ತು. ಹೀಗಾಗೇ ಪೀಠತ್ಯಾಗದ ಘೋಷಣೆಯನ್ನು ಮಾಧ್ಯಮದ ಮುಂದೆ ಹೇಳಿದವನೇ ಕಾರು ಹತ್ತಿ ಪೊಲೀಸ್ ಸೆಕ್ಯುರಿಟಿಯಲ್ಲಿ ಹಾನಗಲ್ ಮಠ ಸೇರಿಕೊಂಡಿದ್ದಾನೆ. ಒಟ್ಟಿನಲ್ಲಿ ಅವನ ವರ್ತನೆ ಹೇಗಿತ್ತೆಂದರೆ ತಾನು ಮಾಡಿದ ಸಾಲಕ್ಕೆ ತನ್ನ ಪೀಠವನ್ನೇ ಅಡವಿಟ್ಟು ಓಡಿಹೋದ ಅಪ್ಪಟ ಹೇಡಿಯಂತಿತ್ತು. ಒಂದು ಕಡೆ ದಿಂಗಾಲಿಯ ಭಯ, ಇನ್ನೊಂದೆಡೆ ಹೈಪವರ್ ಕಮಿಟಿ ಸದಸ್ಯರ ಒತ್ತಡಕ್ಕೆ ಸಿಲುಕಿದ್ದ ಮೂಜಗು ಸ್ವಾಮಿಗೆ ಇಂತಹ ರಣಹೇಡಿ ಆಯ್ಕೆಯಲ್ಲದೆ ಮತ್ತೇನು ಉಳಿದೀತು? ಇವರೆಲ್ಲರ ಹೈಡ್ರಾಮಾದಿಂದ ಐತಿಹಾಸಿಕ ಮೂರುಸಾವಿರ ಮಠ ಸ್ವಾಮಿಯೇ ಇಲ್ಲದಂತೆ ದಿನದೂಡಬೇಕಾಗಿ ಬಂದದ್ದು ವಿಪರ್ಯಾಸ.

● ಹುವಿ

# ...ಲಕಂಟಕ ಶಂಕರ್ ರೆಡ್ಡಿ

...7 ⏮ ಇದನ್ನು ನಂಬಿದ ಆಗಿನ ಗೃಹಮಂತ್ರಿ ಆಚಾರ್ಯ ಮತ್ತು ಸಿಎಂ ...ರಸ್ವಾಮಿ ಚಾಕೋ ವಿರುದ್ಧ ಪೊಲೀಸರನ್ನು ...ಟ್ಟರು. ಚಾಕೋನ ಬೆಂಗಳೂರಿನ ಆಸ್ತಿಗಳು, ...ಟೆಲ್, ರೆಸಾರ್ಟ್‌ಗಳು, ಮನೆ, ಆತನ ಕೇರಳದ ...ಸ್ತಿಗಳ ಮೇಲೆಲ್ಲ ಪೊಲೀಸ್ ದಾಳಿಗಳಾದವು. ಹೀಗೆ ...ಮಾಡಿದಾಗಲೂ ಪೊಲೀಸರು ಚಾಕೋನನ್ನು ...ಕಿದ್ದು ಜಮೀನಿನ ಮೂಲ ದಾಖಲೆಗಳಿಗಾಗಿ. ...ಲ್ಲಿಗೆ ಇಡೀ ಪೊಲೀಸ್ ವ್ಯವಸ್ಥೆಯೇ ನೆಲಗಳ್ಳರ ...ಹಿಡಿಯೆಂಬುದು ಚಾಕೋಗೆ ನಿಕ್ಕಿಯಾಗಿತ್ತು. ಆದರೆ ...ರ್ಜಿ ವಿಷಯದ ಮರ್ಮ ಅರಿತು 2008 ರ ...ಬರ್ 3 ರಂದು ಬೆಂಗಳೂರು ಪೊಲೀಸರು ಹಾಕಿದ್ದ ... ಜೊತ್ತೆ ಕೇಸುಗಳ ಎಫ್‌ಐಆರ್‌ಗಳನ್ನೆಲ್ಲ ...ಗೊಳಿಸಿತ್ತು. ನಿರಾಳಗೊಂಡ ಚಾಕೋ ಲೇಟೆಸ್ಟ್ ...ದ್ದ ಪಕ್ಕ 20 ಕೋಟಿಯ ಸೊತ್ತಿಗೂ ಶಂಕರ್ ರೆಡ್ಡಿ ... ನಕಲಿ ದಾಖಲೆ ಸೃಷ್ಟಿಸಿದ್ದು ಗೊತ್ತಾಗಿ ಅದರ ...ದಣಿ ತಡೆಯುವಂತೆ ಕೆ.ಆರ್. ಪುರಂ ಸಬ್ ...ರ್‌ಗೆ ದೂರು ಕೊಟ್ಟ. ಆದರೆ ಖದೀಮ ಶಂಕರ್ ...ರೂರಿನ ಗುಡಿಬಂಡೆಯಲ್ಲಿ ಸದ್ದಿಲ್ಲದೆ ಆ ಸೊತ್ತನ್ನು ...ತಮ್ಮನ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿಬಿಟ್ಟ. ...ರ ಈ ಸೊತ್ತಿಗಾಗಿ ಕೊಲೆಯಾದ ವಿನೋದ್ ... ಮತ್ತು ಜೈಲು ಸೇರಿದ್ದ ಗೋವರ್ಧನ ...ಹೆಂಡತಿಯೂ ದುಡ್ಡು ಹಾಕಿಸಿದ್ದ, ಸಾಕ್ಷಿಗಳಾಗಿ 10 ...ದಾರ್‌ಗಳಿಗೆ ಇವರಿಬ್ಬರ ಸಹಿಯನ್ನೂ ಪಡೆದಿದ್ದ ... ರಾತ್ರಿ ಕುಡಿದು ಚಿತ್ತಾಗಿದ್ದ ಗೋವರ್ಧನ ಮೂರ್ತಿಯನ್ನು ಕೊಲೆ ಕೇಸಿಗೆ ಸಿಲುಕಿಸಿ ತಾನು ಉಪಾಯವಾಗಿ ವಿನೋದ್‌ಕುಮಾರ್‌ನನ್ನು ಮಲಗಿಸಿಬಿಟ್ಟ. ಒಂದೇ ಕಲ್ಲಿಗೆ ಎರಡು ಹಕ್ಕಿ ಮತ್ತು 600 ಕೋಟಿ ರೂಪಾಯಿಯ ಸೊತ್ತು! ಈಗ ವಾಸ್ತವ ಎನ್ನಾರೈಗಳಿಗೆ ಅರ್ಥವಾಗಿದೆ. ಸರಿಸುಮಾರು 2000 ಮಂದಿ ಎನ್ನಾರೈಗಳು ದೂರದ ಗಲ್ಫ್‌ನಲ್ಲಿ ಅಹೋರಾತ್ರಿ ದುಡಿದು ಗಳಿಸಿದ್ದ ತಂದು ನಿವೇಶನ ಖರೀದಿಸಿ ಕಂಡ ಮನೆಯ ಕನಸಿಗೆ ಬೆಂಕಿಬಿದ್ದಿದೆ. ತಮ್ಮ ಮೂರೂವರೆ ಸಾವಿರ ಕೋಟಿ ರೂಪಾಯಿಗಳ ನಿವೇಶನಗಳನ್ನೆಲ್ಲ ಕಬಳಿಸಿದ್ದು ಸಿಎಮ್ಮಾರ್ ಧಣಿಯಾದ ಅದೇ ನಿವೃತ್ತ ಐಪಿಎಸ್ ಅಧಿಕಾರಿಯೆಂದೂ ಆತ ತನ್ನ ಸಂಬಂಧಿ ಶಂಕರ್ ರೆಡ್ಡಿಯನ್ನು ಮುಂದಿಟ್ಟುಕೊಂಡೇ ಪೊಲೀಸರು ಮತ್ತು ರೌಡಿಗಳನ್ನು ಬಳಸಿ ತಮ್ಮನ್ನು ಬೀದಿಪಾಲು ಮಾಡಿದ್ದಾನೆಂಬ ವಾಸ್ತವವೂ ಅರಿವಾಗಿದೆ. ಆದರೇನಂತೆ ಸೊತ್ತಿನ ಮೊತ್ತವೇ ಮೂರೂವರೆ ಸಾವಿರ ಕೋಟಿ. ಕೇರಳದ ಮುಖ್ಯಮಂತ್ರಿಯೇ ಬರಲಿ, ಕತಾರ್‌ನ ರಾಯಭಾರಿಯೇ ಇರಲಿ ಅವರನ್ನು ಮಣಿಸುವುದು ದುಸ್ಸಾಧ್ಯ. ಉಳಿದ ಏಕೈಕ ಭರವಸೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಪ್ರಕರಣವನ್ನು ಸಿಬಿಐಗೆ ವಹಿಸಿದರಷ್ಟೇ ನ್ಯಾಯ ಸಿಗಬಹುದೇನೋ ಎಂಬ ಭರವಸೆಯಲ್ಲಿ ಎನ್ನಾರೈಗಳೆಲ್ಲ ಸೇರಿ ದೆಹಲಿಯ ಪಾರ್ಲಿಮೆಂಟ್ ಎದುರು ಮುಂದಿನವಾರದ ಹೊತ್ತಿಗೆ ಪ್ರತಿಭಟಿಸಲಿದ್ದಾರಂತೆ.

ಕೋರ್ಟು, ಕಾನೂನು, ಸರ್ಕಾರಗಳು ಯಾವುದಕ್ಕೂ ಜಗ್ಗದ ಸಿಎಮ್ಮಾರ್ ಲ್ಯಾಂಡ್ ಮಾಫಿಯಾಕ್ಕೆ 2000 ಮಂದಿ ಎನ್ನಾರೈಗಳ ಆಕ್ರಂದನ ಯಾವ ಲೆಕ್ಕ?

● ರಾ. ಸೋಮನಾಥ್

# ನಿಗಮ ಮಂಡಳಿ ತಟ್ಟೆ ವಿಷಯದಲ್ಲಿ ಜಗಳವಂತಲ್ಲ

## ಥೂತ್ತೇರಿ

▸ ಯಾಹೂ

ನಿಗಮ ಮಂಡಳಿ ಎಂಬ ತಾತ್ಕಾಲಿಕ ತಟ್ಟೆ ಲೋಟಗಳ ಹಂಚಿಕೆಯ ವಿಷಯದಲ್ಲಿ ತಟ್ಟೆ ಲೋಟ ಸಿಗದ ಮಹಿಳಾ ಮಣಿಗಳು ಕಾಂಗ್ರೆ ಕಚೇರಿ ಎದುರಿಗೆ ಕೂಗುಮಾರಿಯನ್ನೇ ನಾಚಿಸುವಂತೆ ಕೂಗಿದರಂತಲ್ಲಾ, ಅದೇ ಸಮಯದಲ್ಲಿ ರೆಬೆಲ್ ಸ್ಟಾರ್ ವಸತಿ ಸಚಿವ ಅಂಬರೀಶ್ ಕೂಡ ಏದುಸಿರು ಬಿಡುತ್ತಾ ಗುಟುರು ಹಾಕಿದರಂತಲ್ಲಾ, ಗುಟುರಿಗೆ ತುಂಬ ನವ್ಯ ಭಾಷೆ ಬಳಸಿರುವ ಅಂಬಿ "ನಾನು ಮೂರು ಬಾರಿ ಎಂ.ಪಿ. ಆಗಿದ್ದೆ, ಒಮ್ಮೆ ಕೇಂದ್ರದಲ್ಲೂ ಮಂತ್ರಿಯಾಗಿದ್ದೆ, ಈಗ ಮಂಡ್ಯದ ಶಾಸಕನಾಗಿ ಮತ್ತೆ ಮಂತ್ರಿಯಾಗಿದ್ದೇನೆ" ಎಂದರಂತಲ್ಲಾ, ಈ ಸಾಧನೆಯ ಒಳಾರ್ಥವೇನೆಂದು ಪಿಂಜರಾಪೋಲು ಪತ್ರಕರ್ತರು ಕೇಳಲಾಗಿ "ನನ್ನ ಮಾತನ್ನು ಮುಖ್ಯಮಂತ್ರಿ ಕೇಳಬೇಕು" ಎಂದು ಅಂಬಿ ಬುಸುಗುಟ್ಟಿದರಂತಲ್ಲಾ.

ಸದರಿ ಪಿಂಜರಾಪೋಲು ಪತ್ರಕರ್ತರು ಅಂಬಿಯ ಸಾಧನೆಯನ್ನು ಅಳೆದು ಸುರಿದು ನೋಡಿದರಂತಲ್ಲಾ, ಅಂಬಿ ಸಂಸದನಾಗಿ ಮಾಡಿದ ಸಾಧನೆಯೆಂದರೆ ಕೇಳಿದವರಿಗೆಲ್ಲಾ ಸಂಸದರ ನಿಧಿ ಹಂಚಿ ಹಾಳುಮಾಡಿದ್ದು; ಸಂಸದನ ಅವಧಿಯಲ್ಲಿ ರೇಸು, ಜೂಜು, ಕುಡಿತ, ಮೋಜು ಇದನ್ನು ಚಾಚೂತಪ್ಪದೆ ನಡೆಸಿಕೊಂಡು ನಾಬರ ದೊರೆಗಳಂತೆ ಬದುಕಿದ್ದು; ಕೇಂದ್ರದಲ್ಲಿ ಮಂತ್ರಿಯಾಗಿ ಮಾಡಿದ ಸಾಧನೆ



ಎಂದರೆ, ಸರಕಾರ ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸದೆ, ಸಚಿವನಿಗೆ ಹಂಚಿದ ಖಾತೆಯ ವಿಷಯವನ್ನು ತಿಳಿದುಕೊಳ್ಳದೆ, ರಾಜೀನಾಮೆ ಬಿಸಾಡಿ ಊರಿಗೆ ಬಂದಿದ್ದು. ಇನ್ನು ರಮ್ಯ ಎಂಬ ತಬ್ಬಲಿ ಮಗು ಚುನಾವಣೆಗೆ ನಿಂತಿದ್ದಾಗ ಅದು ಸೋಲುವಂತೆ ಅಡ್ಡಗೋಡೆ ಮೇಲಿನ ದೀಪದಂತೆ ವರ್ತಿಸಿದ್ದು. ಇವೆಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದ ಬಡವರು 'ಅಂಬಿ ನಮಗೆಲ್ಲಾ ಮನೆ ಕಟ್ಟಿಕೊಡುತ್ತಾನೆ' ಎಂದು ಕಾಯುತ್ತಿದ್ದರೂ ಈ ಆಸಾಮಿ ಸದರಿ ಇಲಾಖೆಯ ಪ್ರಗತಿಯ ಕಡೆಗೆ ಗಮನಕೊಡದೆ ಎಂದಿನ ಉಡಾಫೆಯಲ್ಲೇ ಕಾಲ ಕಳೆಯುತ್ತಿರುವುದು. "ಈ ಎಲ್ಲಾ ಕಾರಣಗಳಿಗಾಗಿ ಯಾವ ಬಡವರಿಗೂ ಮನೆ ಸಿಗುವ ಸಂಭವವಿಲ್ಲ, ಇಂಥವನ ಶಿಫಾರಸ್ಸಿನ ತಟ್ಟೆಗಳನ್ನು ಸಿದ್ದು ನೆಗ್ಲೆಕ್ಟ್ ಮಾಡಿರುವುದು ಸರಿಯಾಗಿಯೇ ಇದೆ" ಎಂದು ಪತ್ರಕರ್ತರು ಮಾತನಾಡಿಕೊಂಡು ಹೊರಟವಂರಲ್ಲಾ, ಥೂತ್ತೇರಿ!

****

ನಿಗಮ ಮಂಡಳಿ ಎಂದರೆ ಅದರ ಅಧ್ಯಕ್ಷನಿಗೊಂದು ಗೂಟದ ಕಾರಿರುತ್ತದೆ. ಸರಕಾರಿ ಇಲಾಖೆಯ ಕರ್ಮಚಾರಿಗಳ ಒಂದು ಸಣ್ಣ ತುಕಡಿ ಸಿಗುತ್ತದೆ. ಅವುಗಳ ಎದುರು ಫೈಲುಗಳಿರುತ್ತವೆ. ಮಂಡಳಿ ಅಧ್ಯಕ್ಷ ಬಂದಾಗ ಫೈಲುಗಳು ಅಲ್ಲಿ ಇಲ್ಲಿ - ಅಂದರೆ ಟೇಬಲ್ಲಿನಿಂದ ಟೇಬಲ್ಲಿಗೆ - ಓಡಾಡುತ್ತವೆ. ಆಮೇಲೆ ಯಾವುದಕ್ಕೂ ಫಂಡ್ ಬಂದಿಲ್ಲ ಎಂಬ ಟಿಪ್ಪಣಿಯೊಂದಿಗೆ ಅಲ್ಲೇ ಕೂರುತ್ತವೆ. ಬಂದ ಫಂಡಿನಿಂದ ನಿಗಮ ಮಂಡಳಿ ಅಧ್ಯಕ್ಷನ ಮನೆ ಬಾಡಿಗೆ, ವಾಹನ ಭತ್ಯೆ, ಊಟ ಇತ್ಯಾದಿ ಸಾಂಗವಾಗಿ ನಡೆಯುತ್ತವೆ. ಈ ನಡುವೆ ಸದರಿ ಫಂಡಿನ ವೆಚ್ಚದಲ್ಲೇ ಬೋಗಸ್ ಬಿಲ್ಲುಗಳು ತಯಾರಾಗಿ ಮಂಡಳಿಗಳ ಅಧ್ಯಕ್ಷರು ಒಂದಷ್ಟು ಕಾಸು ಮಾಡಿಕೊಳ್ಳುತ್ತಾರೆ. ಈ ಘನ ಕೈಂಕರ್ಯದಲ್ಲೇ ತಮ್ಮ ಸಾರ್ವಜನಿಕ ಸೇವೆಗಾಗಿ ಹಾತೊರೆಯುವ ಜನರನ್ನು ನೋಡಿದ ಸಿದ್ದು ಇಂತವೆಲ್ಲಾ ಆದಷ್ಟು ನಿಧಾನವಾಗಿ ನಡೆದರೆ ಸರಕಾರದ ಖಜಾನೆಗೂ ಒಳ್ಳೆಯದೆಂದು ಯೋಚಿಸಿ ಸುಮ್ಮನಿದ್ದರಂತಲ್ಲಾ. ಆದರೆ ಜನ ಸೇವಕರಾಗಲು ಹಾತೊರೆಯುತ್ತಿದ್ದವರ ಒತ್ತಡ ಜಾಸ್ತಿಯಾಗಿದ್ದರಿಂದ ಕೊನೆಗೂ ನಲವತ್ತು ಜನರು ಹದಿನೆಂಟು ತಿಂಗಳ ಭೋಜನ ವ್ಯವಸ್ಥೆ ಪಡೆದರಂತಲ್ಲಾ.

ಈ ಸಮಯದಲ್ಲೇ ಒಂದು ಪ್ರಕರಣವನ್ನು ನಮ್ಮ ಓದುಗರಿಗೆ ತಿಳಿಸುವುದು ಒಳ್ಳೆಯದಲ್ಲವೆ. ಅದೇನೆಂದರೆ ಜೆ.ಎಚ್.ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ಅವರ ಬಳಿಗೆ ಬಂದ ಬೆಂಬಲಿಗನೊಬ್ಬ "ಪಟೇಲ್ರೆ, ನಾನು ತೊಂದ್ರ್ಯಾಗದಿನಿ. ನನಗೆ ಯಾವುದಾರ ನಿಗಮ ಮಂಡಳಿ ಕೊಡಿ" ಎಂದು ಅವರ ಮುಖ ನೋಡಿದನಂತಲ್ಲ, ಆಗ ಪಟೇಲರು ಮುಗುಳ್ನಕ್ಕು "ನೀನು ತೊಂದ್ರ್ಯಾಗಿದ್ರೆ ಆ ನಿಗಮದ ಕತೆಯೇನಯ್ಯ?" ಎಂದು ಪ್ರಶ್ನಿಸಿದರಂತಲ್ಲಾ, ಥೂತ್ತೇರಿ!!

****

ನಮ್ಮ ಘನತೆವೆತ್ತ ಹೈಕೋರ್ಟಿನ ಸೂಚನೆ ಮೇರೆಗೆ ಕರ್ನಾಟಕದ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಡೆಸ್ನಾನ ಬಿರುಸಿನಿಂದ ನಡೆಯಿತಂತಲ್ಲಾ, ಈ ಹೇಸಿಗೆ ಆಚರಣೆಯ ವಿರುದ್ಧ ಪ್ರಜ್ಞಾವಂತರು ಪ್ರತಿಭಟಿಸಿದ್ದರಿಂದ ಬ್ರಾಹ್ಮಣರು ಸಿಟ್ಟುಗೊಂಡರಂತಲ್ಲಾ, ಪರಿಣಾಮವಾಗಿ ಬ್ರಾಹ್ಮಣರು ಅನೇಕ ಭಕ್ಷಭೋಜನಗಳ ಭಾರಿ ಭೋಜನವನ್ನು ಅರ್ಧಂಬರ್ಧ ಉಂಡು ತೇಗುತ್ತಾ ಹೊಟ್ಟೆ ಸವರಿಕೊಂಡು ಹೊರ ನಡೆದರಂತಲ್ಲಾ, ಕೂಡಲೆ ಉರುಳು ಸೇವೆಯ ಜಂತುಗಳು ಅನಾಮತ್ತು ಬ್ರಾಹ್ಮಣರು ಬಿಟ್ಟು ಹೋಗಿದ್ದ ಊಟದೆಲೆಯ ಮೇಲೆ ನುಗ್ಗಿ ಮುಖಮುಂದಾಗಿ ಮಡೆಯ ಮೇಲೆ ಬಿದ್ದು ಹೊರಳತೊಡಗಿದವಂತಲ್ಲಾ. ಹುಳಿಯಿಂದ ಕಲಸಿದ ಅನ್ನ, ಕೀರು, ಚಟ್ನಿ, ಪಲ್ಯಗಳೆಲ್ಲಾ ತರತರಹ ಅಮೇಧ್ಯಗಳಂತೆ ಬೆರೆತುಕೊಂಡು ಭಕ್ತಾದಿಗಳ ಮೈಗೆಲ್ಲಾ ಅಂಟಿಕೊಂಡು ನೋಡುಗರಿಗೆ ಅದೊಂದು ಅಮೇಧ್ಯದ ಕೋಟೆಯಂತೆ ಕಾಣುತ್ತಿತ್ತಂತಲ್ಲಾ, ಇದನ್ನು ಕಂಡು ವಾಕರಿಕೆ ಬಂದ ವಟುವೊಂದು "ಈ ಹೇಸಿಗೆ ಕೆಲಸದಿಂದಾದ ಪರಿಣಾಮವೇನು?" ಎಂದು ಕುಕ್ಕೇಶ್ರೀ ಬ್ರಾಹ್ಮಣನನ್ನು ಕೇಳಿದನಂತಲ್ಲಾ, ಅದಕ್ಕೆ ಆತ "ನೋಡಪ್ಪಾ, ಮಡೆ ಸ್ನಾನಕ್ಕಾಗಿ ಬಂದ ಭಕ್ತನ ಮೈಯೊಳಗಿನ ರಂಧ್ರ ಭಕ್ತಿಯ ಕಾರಣಕ್ಕೆ ಅರಳಿಕೊಳ್ಳುತ್ತೆ, ಆಗ ಆ ರಂಧ್ರದೊಳಕ್ಕೆ ಇಲ್ಲಿನ ಹುಳಿ, ಸಾರು, ಮಜ್ಜಿಗೆ, ಮೊಸರು, ಉಪ್ಪಿನಕಾಯಿ, ಹುಣಸೇತೊಕ್ಕಿನ ರಸವೆಲ್ಲಾ ಸೇರಿದ ಪರಿಣಾಮ ಚರ್ಮರೋಗವೆಲ್ಲಾ ವಾಸಿಯಾಗುತ್ತದೆ" ಎಂದನಂತಲ್ಲಾ, ಆಗ ಕುಕ್ಕೆಶ್ರೀ ವಟು ಮುಗ್ಧವಾಗಿ "ಹಾಗಾದರೆ ರಾಜ್ಯದಲ್ಲಿರುವ ಚರ್ಮರೋಗದ ಆಸ್ಪತ್ರೆಗಳನ್ನೆಲ್ಲ ಮುಚ್ಚಿಸಿ ಚರ್ಮರೋಗಿಗಳನ್ನೆಲ್ಲಾ ಇಲ್ಲಿಗೆ ಕರೆದು ಉರುಳುಸೇವೆ ಮಾಡಿಸಿದರೆ ಹೇಗೆ?" ಎಂದನಂತಲ್ಲಾ, ಥೂತ್ತೇರಿ!!

****

ನಮ್ಮ ಹೊಸನಗರದ ರಾಘಣ್ಣ ಹಿಂದೊಮ್ಮೆ ತಮ್ಮ ಕ್ಷೇತ್ರದಲ್ಲಿ ಯಜ್ಞ, ಹೋಮ ನಡೆಸಿದ ಫಲವಾಗಿ ಆ ಪ್ರಾಂತ್ಯದಲ್ಲಿ ಆಮ್ಲಜನಕ ಜಾಸ್ತಿಯಾಗಿ ಇಂಗಾಲ ಕಡಿಮೆಯಾಗಿ ವಾತಾವರಣವೆಲ್ಲಾ ಏರುಪೇರಾಗಿತ್ತಲ್ಲಾ, ಇದೇ ಕಾರಣವಾಗಿ ಸ್ವಾಮಿ ನಿದ್ರೆಯಲ್ಲೂ ಎದ್ದು ಕುಳಿತುಕೊಳ್ಳುವಂತಾಗಿತ್ತಂತೆ. ಈ ಸಮಸ್ಯೆ ಹೀಗೆ ಮುಂದುವರೆದು ದಿಕ್ಕು ಕಾಣದಂತಾದ ಜಗದ್ಗುರುಗಳು "ಈ ಒತ್ತಡದಿಂದ ಪಾರಾಗಬೇಕಾದರೆ ನಾನೇ ರಾಮಾವತಾರವೆಂದು ಹೇಳಬೇಕು. ಭಕ್ತರನ್ನು ಅಂತರ್ಗೃಹಪುರಕ್ಕೆ ಆಹ್ವಾನಿಸಿ ರಾಮ ಸೀತೆಯ ಸಮಾಗಮವನ್ನು ಸಂಸ್ಕೃತದಲ್ಲಿ ವರ್ಣಿಸಿ ಅವರನ್ನು ವಶೀಕರಣಗೊಳಿಸಬೇಕು. ಹೀಗೆ ನನ್ನ ದೇಹದ ಕಾವು ಇಳಿಸದಿದ್ದರೆ ಜಗದ್ಗುರುವಾಗಿರಲೂ ಯೋಗ್ಯನಲ್ಲ" ಎಂದು ತೀರ್ಮಾನಿಸಿದನಂತೆ.

ಅದರಂತೆ ಮುಗ್ಧ ಗೃಹಿಣಿಯನ್ನು ಕರೆದು, ಆಕೆಯನ್ನು ಅಂಗಾತ ಮಲಗಿಸಿ ಪೂಜಾಕಾರ್ಯ ನೆರವೇರಿಸಿದನಂತೆ. ಆದರೆ ಆತ ಅನನುಭವಿ. ಸರಿಯಾಗಿ ತೀರ್ಥಕೊಡಲು ಬಾರದೆ ಬಟ್ಟೆ ಮೇಲೆಲ್ಲಾ ಚೆಲ್ಲಿಕೊಂಡು ಈಗ ಸಿಕ್ಕಿಬಿದ್ದಿದ್ದಾನಂತೆ. ನಿರೀಕ್ಷೆಯಂತೆ ಜಗದ್ಗುರುವಿನ ಸೈತಾನಪಡೆ "ಅದು ನಮ್ಮ ಗುರುಗಳದ್ದಲ್ಲ, ಇನ್ನು ಯಾರದ್ದೋ ಇರಬೇಕು. ಸರಿಯಾಗಿ ಪರೀಕ್ಷಿಸಿ" ಎಂದಕೂಡಲೇ ಮಠದ ಆವರಣದೊಳಗಣ ತೈದರು ಹೆದರಿ ಹೋದರಂತಲ್ಲಾ. ಹಾಗೆ ನೋಡಿದರೆ ಶಿವಮೊಗ್ಗ ಜಿಲ್ಲೆ ಮಟ್ಟಿಗೆ ಇದು ಎರಡನೇ ಪ್ರಕರಣ. ಮೊದಲನೆಯದು ಪದ್ಮಾವತಿ ಹಾಲಪ್ಪನ ಗೆಳತಿಯ ಪ್ರಕರಣ. ಎರಡನೆ ಪ್ರಕರಣ ರಾಘಣ್ಣನ ಆವೇಶಕ್ಕೆ ತುತ್ತಾದ ನತದೃಷ್ಟ ಭಕ್ತೆಯದು. ಎಂತಹ ನುರಿತ ಅಪರಾಧಿಯೇ ಆಗಲಿ ಕೃತ್ಯವೆಸಗಿದ ಜಾಗದಲ್ಲಿ ಒಂದಿಷ್ಟಾದರೂ ಸಾಕ್ಷಿ ಉಳಿಸಿಹೋಗಿರುತ್ತಾನೆಂಬುದಕ್ಕೆ ನಮ್ಮ ಕಾಮುಕಪ್ರಾ ನಾಯಕನೇ ಸಾಕ್ಷಿಯಾಗಿದ್ದಾನಂತಲ್ಲಾ, ಥೂತ್ತೇರಿ!! ●






# ಲಿಂಗಾ ಎಂಬ ಸುನಾಮಿ

ಇನ್ನೆರಡು ವಾರಗಳಷ್ಟೇ ಬಾಕಿ. ರಜನಿ ಭಕ್ತರ ಪಾಲಿಗೆ ಡಿಸೆಂಬರ್ 12 ಬಂತೆಂದರೆ ಅದೇ ದೀಪಾವಳಿ, ಅದೇ ಕ್ರಿಸ್ಮಸ್ ಮತ್ತು ಅದೇ ನ್ಯೂ ಇಯರ್!


'ಲಿಂಗಾ' ಎಂಬುದು ಕೇವಲ ರಜನಿಯ ಸಿನಿಮಾದ ಹೆಸರಷ್ಟೇ ಅಲ್ಲ, ಅದೊಂದು ಸುನಾಮಿ. ಕೊಚ್ಚಡಿಯಾನ್ ಬಗೆಗಿದ್ದ ಅಭಿಮಾನಿಗಳ ನಿರೀಕ್ಷೆಗಳೆಲ್ಲ ನೆಲಕಚ್ಚಿದ ಮೇಲೆ, ಅದಕ್ಕೂ ಹಿಂದಿನ 'ಯಂದಿರನ್' ಅಸಲು ರಜನಿಗಿಂತಲೂ ರೋಬೋಟುಮಯವಾಗಿದ್ದ ಮೇಲೆ ರುಚಿ ಕೆಟ್ಟಂತಾಗಿದ್ದ ಅಭಿಮಾನಿಗಳ ಪಾಲಿಗೆ ಪಕ್ಕಾ ರಜನಿ ಸ್ಟೈಲಿನ ಸವಿ ಬಡಿಸಲೆಂದೇ ಸೃಷ್ಟಿಯಾದ ಕತೆ!

ಹಾಗೆಂದು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ತನ್ನದೇ ಶೈಲಿಯಲ್ಲಿ ಕೊಟ್ಟ ಹೇಳಿಕೆಗೆ 'ಲಿಂಗಾ' ಚಿತ್ರದ ಪೋಸ್ಟರುಗಳು, ಟ್ರೈಲರ್, ಜಾಹೀರಾತುಗಳೆಲ್ಲವೂ ಪುರಾವೆ ಕಲ್ಪಿಸಬಹುದು. ಆದರೆ ಯಾರಿಗೂ ಅರ್ಥವಾಗದ ಒಂದು ಸಂಗತಿಯೆಂದರೆ ಇದ್ದಕ್ಕಿದ್ದಂತೆ ರಜನಿಕಾಂತ್ 'ದೇವರು ಇಚ್ಛಿಸಿದಲ್ಲಿ ತಾನು ರಾಜಕೀಯಕ್ಕೆ ಕಾಲಿಡುತ್ತೇನೆ. ಎಲ್ಲವೂ ದೈವೇಚ್ಛೆ, ದೇವರ ಕೃಪೆಯಾದರೆ ತನ್ನನ್ನು ರಾಜಕೀಯಕ್ಕೆ ಬರದಂತೆ ಯಾವ ಶಕ್ತಿಯೂ ತಡೆಯಲಾರದು' ಎಂದೆಲ್ಲ ಡೈಲಾಗು ಹೊಡೆಯಲು ಕಾರಣವೇನು?

'ಲಿಂಗಾ' ರಜನಿ ರಾಜಕೀಯದ ಆರಂಗೇಟ್ರಮ್ಮಾ? ತಮಿಳುನಾಡಿನ ಪ್ರಜಾಸತ್ತೆಗೆ ಧುಮುಕಲೆಂದೇ 'ಲಿಂಗಾ'ದ ಕತೆ ರೂಪುಗೊಂಡಿದೆಯಾ? ಯಾವತ್ತೂ ಇಲ್ಲದೇ 'ಲಿಂಗಾ' ಬಿಡುಗಡೆಯ ಮುಹೂರ್ತವನ್ನೇ ಕಾದು ರಜನಿ ತನ್ನ ಪಾಲಿಟಿಕ್ಸ್ ಎಂಟ್ರಿಯನ್ನು ಪ್ರಸ್ತಾಪಿಸಿದ್ದೇಕೆ? ರಜನಿ ತಮಿಳುನಾಡಿನಲ್ಲಿ ಕೇಸರಿ ಬಾವುಟ ಹಾರಿಸುತ್ತಾರಾ? ಪಕ್ಕಾ ದ್ರಾವಿಡ ರಾಜಕೀಯದ ತಮಿಳುಕೂಟಗಳಾದ ಡಿಎಂಕೆ ಮತ್ತು ಅಣ್ಣಾ ಡಿಎಂಕೆಗಳಿಗೆ ಇದಿರಾಗಿ ರಜನಿ ಬಿಜೆಪಿ ಶಕೆಯನ್ನು ಆರಂಭಿಸುವುದು ನಿಜವಾ? ರಜನಿಯ ಮೋದಿ ದೋಸ್ತಿಗೂ, 'ಲಿಂಗಾ' ಎಂಬ ಚಿತ್ರಕ್ಕೂ, ರಾಜಕಾರಣಕ್ಕೆ ತನ್ನ ಪ್ರವೇಶದ ಕುರಿತಂತೆ ತೀರ ಅನಿರೀಕ್ಷಿತವಾಗಿ ರಜನಿ ಬಾಯಿಂದ ಹೊರಬಿದ್ದ ಮಾತುಗಳಿಗೂ ಪರಸ್ಪರ ಸಂಬಂಧವಿರಲೇಬೇಕಲ್ಲವೇ?

ಇಂಥದೊಂದು ಜಿಜ್ಞಾಸೆಯೀಗ ತಮಿಳುನಾಡಿನಾದ್ಯಂತ ಚರ್ಚೆಯಾಗುತ್ತಿದೆ. ವಿಶೇಷವಾಗಿ ತಮಿಳುನಾಡಿನ ಬಿಜೆಪಿ ಪಾಲಿಗೆ ಸಾರಥಿಯಂತಿರುವ ಸುಬ್ರಹ್ಮಣ್ಯ ಸ್ವಾಮಿ ರಜನಿ ರಾಜಕೀಯಕ್ಕೆ ತಣ್ಣೀರೆರಚಿದಂತೆ ಕೊಟ್ಟ ಹೇಳಿಕೆಯಾಗಲಿ, ಇಳಂಗೋವನ್ ಎಂಬ ಮತ್ತೊಬ್ಬ ಪೆರಿಯಾರ್ ವಾದಿ ಸಿನಿಮಾ ನಟರಿಗಿನ್ನು ತಮಿಳು ರಾಜಕೀಯದಲ್ಲಿ ಭವಿಷ್ಯವಿಲ್ಲ ಎಂಬಂತೆ ನಡೆಸಿದ ಸಮೀಕ್ಷೆಯಾಗಲಿ ಮತ್ತು ಪ್ರತಿನಿತ್ಯ ಅಲ್ಲಿನ ಪತ್ರಿಕೆಗಳಲ್ಲಿ ಪ್ರಕಟವಾಗುವ ಅಂತೆಕಂತೆಗಳಾಗಲಿ ರಜನಿ ರಾಜಕೀಯ ಪ್ರವೇಶಕ್ಕೆ ಪೂರಕವಾಗೇನಿಲ್ಲ. ಇದರಿಂದಾಗಿ ರಜನಿ ರಾಜಕೀಯಕ್ಕೆ ಬರಬಹುದು ಬಿಡಬಹುದು. ಹಾಗಂತ 'ಲಿಂಗಾ' ಚಿತ್ರದ ಬಗ್ಗೆ ಅಭಿಮಾನಿಗಳ ನಿರೀಕ್ಷೆಯೇನೂ ಕುಂದುವುದಿಲ್ಲ. ಅಷ್ಟಕ್ಕೂ 'ಲಿಂಗಾ' ಬಿಡುಗಡೆಯ ಸಂದರ್ಭದಲ್ಲೇ ರಜನಿ ರಾಜಕೀಯ ಪ್ರವೇಶದ ಮಾತಾಡಿದ್ದೇಕೆ? ಇದರರ್ಥ 'ಲಿಂಗಾ' ರಜನಿ ರಾಜಕೀಯಕ್ಕೆ ಪೂರಕವಾಗೇ ಹೆಣೆದ ಕಥಾವಸ್ತುವೆ? ರಾಜಕೀಯದ ರಂಗುಸಜ್ಜಿಕೆಯಾಗಿ 'ಲಿಂಗಾ' ಕತೆಯನ್ನು ರಜನಿ ಆಯ್ಕೆ ಮಾಡಿಕೊಂಡರೆ?

ಕಾಕತಾಳೀಯವೆನ್ನಿ, ಕಾರಣಕರ್ಮವೆನ್ನಿ ಸದ್ಯ 'ಲಿಂಗಾ' ಎಂಬ ರಜನಿ ಚಿತ್ರ ಈ ಥರದ ಪ್ರಶ್ನೆಯೊಂದನ್ನು ಹುಟ್ಟುಹಾಕಿರುವುದಂತೂ ಸತ್ಯ. ಅಷ್ಟಕ್ಕೂ 'ಲಿಂಗಾ' ಕತೆಯೊಳಗೇನಿದೆ? ಗೋಕಾಕ್ ವರದಿ ಹೋರಾಟಕ್ಕೆ ವರನಟ ರಾಜ್ ಕಾಲಿಟ್ಟ ವೇಳೆ ಬಂದ 'ಮಯೂರ', ಆಂಧ್ರದಲ್ಲಿ ತೆಲುಗು ದೇಶಂ ಸ್ಥಾಪಿಸುತ್ತಿದ್ದಂತೆ ಎನ್‌ಟಿಆರ್ ನಟಿಸಿದ 'ನಾದೇಶಂ', ತಮಿಳುನಾಡಿನಲ್ಲಿ ಎಂಜಿಆರ್ ಹೊಸ ಪಕ್ಷ ಕಟ್ಟಿದ ವೇಳೆ ತೆರೆಕಂಡ 'ನಾಡೋಡಿ ಮನ್ನನ್' ಮುಂತಾದ ಚಿತ್ರಗಳ ಹಾಗೆಯೇ 'ಲಿಂಗಾ' ರಜನಿ ರಾಜಕೀಯ ಪ್ರವೇಶದ ಚಿತ್ರವೆಂಬ ಹಣೆಪಟ್ಟಿಗೆ ಈಡಾಗಿದೆ.



ಡಿಸೆಂಬರ್ 12ಕ್ಕೆ ರಜನಿಯ 64ನೇ ಹುಟ್ಟುಹಬ್ಬ. ಆವತ್ತೇ 'ಲಿಂಗಾ' ತೆರೆಗಪ್ಪಳಿಸುತ್ತಿದೆ. ನಭೂತೋ ನಭವಿಷ್ಯತಿ ಎಂಬಂತೆ ಅದು ಹುಟ್ಟುಹಾಕಿರುವ ಕಾವು ಜ್ವರದಂತೆಯೇ ವ್ಯಾಪಿಸುತ್ತಿದೆ. ತಮಿಳು, ತೆಲುಗು ಮತ್ತು ಹಿಂದಿಯಲ್ಲಿ ಅಂದರೆ ಏಕಕಾಲಕ್ಕೆ ಮೂರು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿರುವ 'ಲಿಂಗಾ' ರಜನಿಯ ಈ ಹಿಂದಿನ ಎಲ್ಲಾ ಚಿತ್ರಗಳ ದಾಖಲೆಗಳನ್ನೂ ಪ್ರವಾಹಸದೃಶವಾಗಿ ಕೊಚ್ಚಿಕೊಂಡೊಯ್ಯುತ್ತಿದೆ. ಚಿತ್ರದ ಬಜೆಟ್ಟೇ ನೂರು ಕೋಟಿ. 'ಯಂದಿರನ್' ಚಿತ್ರಕ್ಕೆ ಹೋಲಿಸಿದರೆ ಇದು ಆಪಾಟ ಬಜೆಟ್ಟೇನಲ್ಲ ನಿಜ. ಆವತ್ತು 'ಯಂದಿರನ್' ಅರ್ಥಾತ್ ರೋಬೋ ಈಗಿನಂತೆ ಹಿಂದಿ, ತಮಿಳು, ತೆಲುಗುಗಳಲ್ಲಿ ನಿರ್ಮಾಣಗೊಂಡಿದ್ದರೂ ಅದು ತೆರೆಕಂಡಿದ್ದು 2800 ಚಿತ್ರಮಂದಿರಗಳಲ್ಲಿ.

ಆವತ್ತಿನ ಹಿಂದಿ ಸಿನಿಮಾಗಳ ಆರ್ಭಟಕ್ಕೆ ಹೋಲಿಸಿದರೆ 2800 ಥೇಟರುಗಳಲ್ಲಿ ತೆರೆಕಂಡಿದ್ದು ಮಾಮೂಲಿನ ಸಂಗತಿಯೇನಾಗಿರಲಿಲ್ಲ. ಆದರೆ ಈ ಬಾರಿ ಹಾಗಲ್ಲ. ಬರೋಬ್ಬರಿ ಐದು ಸಾವಿರ ಸ್ಕ್ರೀನುಗಳನ್ನು 'ಲಿಂಗಾ' ಆಕ್ರಮಿಸುತ್ತಿದೆಯೆಂದರೆ ಅದು ಮಾಮೂಲಿನ ಮಾತೆ?

ಹಿಂದಿಯ ಬಹುತೇಕ ಮಾರುಕಟ್ಟೆಯನ್ನಷ್ಟೇ ಅಲ್ಲದೆ ದೇಶವಿದೇಶಗಳ ಸಿನಿಮಾ ಥೇಟರುಗಳಿಗೆ 'ಲಿಂಗಾ' ಅಪ್ಪಳಿಸುತ್ತಿರುವುದು ಈತನಕದ ಎಲ್ಲಾ ದಾಖಲೆಗಳನ್ನೂ ಮುರಿದಂತೆಯೇ. ಯಾವ ಸಲ್ಮಾನ್ ಖಾನ್, ಶಾರುಖ್ ಖಾನ್, ಅಮಿತಾಭ್, ಚಿರಂಜೀವಿ ಚಿತ್ರಗಳಿಗೂ ಇಲ್ಲದ ಆಪಾಟ ಡಿಮ್ಯಾಂಡ್ ರಜನಿ ಚಿತ್ರಕ್ಕಿದೆ ಎಂಬುದೇ ಹಾಲಿವುಡ್ ಮಂದಿಗೆ ಜೀರ್ಣವಾಗುತ್ತಿಲ್ಲ. ಏಕಕಾ[...] ಐದು ಸಾವಿರ ಥೇಟರುಗಳಲ್ಲಿ ಚಿತ್ರವೊಂದು ತೆರೆಕಂಡಿತೆಂ[...] ಅದು ಹಾಲಿವುಡ್ ಮತ್ತು ಜಾಕಿಚಾನ್ ಚಿತ್ರಗ[...] ಸರಿಸಮನಾದ ಪೈಪೋಟಿಯೇ!


ಇಡೀ ದಕ್ಷಿಣ ಭಾರತದ ಮಟ್ಟಿಗೆ ಡಿಸೆಂಬರ್ [...] ಜನಿ ಮಯವಾಗಲಿದೆ. ಹಾಗೆ ನೋಡಿದರೆ ರಾಕ್‌ಲ[...] ವೆಂಕಟೇಶ್ ರಜನಿಯ ತಮಿಳು ಚಿತ್ರವೊಂದನ್ನು ನಿರ್ಮಿ[...] ಕರ್ನಾಟಕದ ಮೂರನೇ ನಿರ್ಮಾಪಕ. ಈ ಹಿ[...] ದ್ವಾರಕೀಶ್ ತಮಿಳಿನಲ್ಲಿ ರಜನಿಯ 'ಅಡುತ್ತ ವಾರಿ[...] ಎಂಬ ಚಿತ್ರ ನಿರ್ಮಿಸಿದ್ದರೂ ಆ ಕಾಲಕ್ಕದು ಆ ಮ[...] ಹಿಟ್ಟಾಗಿರಲಿಲ್ಲ. ಈಶ್ವರಿ ಪಿಕ್ಚರ್‌ನ ವೀರಾಸ್ವಾಮಿ ನಿರ್ಮಿ[...] 'ಪಡಿಕ್ಕಾದವನ್' ಕೂಡ ಸಾಧಾರಣದ ಚಿತ್ರವಾಗಿ[...] ದಾಖಲಾಗಿತ್ತು. ಅದು ಆ ಕಾಲದ ಮಾತಾಯಿ[...] ಈಗಿನಂತೆ ಆಗ ರಜನಿ ಚಿತ್ರಕ್ಕೆ ವಿಶ್ವ[...] ಮಾರುಕಟ್ಟೆಯಿರಲಿಲ್ಲ. ತಮಿಳುನಾ[...] ಮಾರುಕಟ್ಟೆಯಷ್ಟೇ ಗಟ್ಟಿ ಎಂಬಂತಿದ್ದ ಕಾಲ[...] ಹೆಚ್ಚೆಂದರೆ ಬೆಂಗಳೂರು ಮತ್ತು ಆ[...] ಗಡಿಗಳಲ್ಲಷ್ಟೇ ತಮಿಳು ಚಿತ್ರಗ[...] ಮಾರುಕಟ್ಟೆಯಿತ್ತು.

ಈಗ ಹಾಗಲ್ಲ, ರಜನಿ ಚಿತ್ರವೆಂದ[...] ಅದು ನೂರುಕೋಟಿಯ ಮಾತು. ಅ[...] ಯಾವುದೇ ಬಾಲಿವುಡ್ ಚಿತ್ರಕ್ಕಿಂತ[...] ದೊಡ್ಡಮಟ್ಟದ ಬಜೆಟ್ಟು ಬೇಕೇಬ[...] ನೂರು ಕೋಟಿ ಸುರಿದು ನಿರ್ಮಿಸಿದ[...] ರಜನಿ ಚಿತ್ರಕ್ಕೆ ನ್ಯಾಯ ಸಲ್ಲ[...] ಹಿಂದಿಯ ಹೀರೋಯಿನ್ನುಗಳಿದ್ದ[...] ಬಾಲಿವುಡ್ ಮಾರುಕಟ್ಟೆಯನ್ನು ತಲುಪಲು ಸ[...] ಮಲೇಷಿಯಾ, ಸಿಂಗಾಪೂರ್‌ಗಳು ರಜನಿ ಚಿತ್ರಕ್ಕೆ ದ[...] ಮಾರುಕಟ್ಟೆಗಳೆ. ಜಪಾನ್‌ನಲ್ಲೂ ಗಣನೀಯವಾಗಿ [...] ಅಭಿಮಾನಿ ಬಳಗವಿದೆ. ದುಬೈ, ಕುವೈತ್, ಮ[...] ಬಹರಿನ್‌ಗಳಲ್ಲೂ ರಜನಿ ಚಿತ್ರಕ್ಕೆ ಬೇಡಿಕೆಯಿದೆ. ಕೆ[...] ತಮಿಳರಷ್ಟೇ ಅಲ್ಲ, ಅಲ್ಲಿನ ಕನ್ನಡ, ತೆಲು[...] ಮಲೆಯಾಳಿಗಳೂ ರಜನಿ ಚಿತ್ರಕ್ಕಾಗಿ ಸಾಲುಗಟ್ಟು[...] ಅಮೆರಿಕ ಮತ್ತು ಬ್ರಿಟನ್‌ಗಳಲ್ಲೂ ರಜನಿ ಚಿತ್ರವೊ[...] ಬೇಡಿಕೆಯಿದೆಯೆಂದರೆ ಆ ಮಟ್ಟದ ಗುಣಮಟ್ಟ[...] ಕಾಯ್ದುಕೊಳ್ಳಲೇಬೇಕಾಗುತ್ತದೆ.

ಇದೆಲ್ಲವನ್ನೂ ಲೆಕ್ಕ ಹಾಕಿಯೇ ರಜನಿ ಚಿತ್ರವೊ[...] ನಿರ್ಮಾಣಗೊಳ್ಳುತ್ತದೆ. 'ಕೊಚ್ಚಾಡಿಯನ್' ಇನ್ನಿಲ್ಲ[...] ನೆಲಕಚ್ಚಿದ ನಂತರ ರಜನಿ ಇನ್ನಾವತ್ತಿಗೂ [...] ಮಾಡಲಾರರೆಂದೇ ಸುದ್ದಿಯಾಗಿತ್ತು. ಆದರೆ ರಜ[...] ಮಾರುಕಟ್ಟೆಯಿತ್ತಲ್ಲ; ಅದು ಏನಿಲ್ಲವೆಂದರೂ ಐನ[...] ಕೋಟಿಯ ಮಾತು. ಐವತ್ತು ಕೋಟಿ ಸುರಿದು ರಜ[...] ಚಿತ್ರ ನಿರ್ಮಿಸಿದರೆ ಅದರ ಹತ್ತುಪಟ್ಟು ಲಾಭ. ಅ[...] ಐನೂರು ಕೋಟಿ!

ಇಂಥದೊಂದು ಜಾಕ್‌ಪಾಟ್ ಆಮದನಿಯ [...] ಬಹುಕಾಲದಿಂದ ಕಣ್ಣಿಟ್ಟಿದ್ದು ಬಿಬಿಎಂಪಿಯ [...] ಕಂಟ್ರಾಕ್ಟರ್ ಮತ್ತು ಹಾಲಿ ರಾಜರಾಜೇಶ್ವರಿನಗರದ ಶಾ[...] ಶಾಸಕ ಮುನಿರತ್ನ. ಅದಕ್ಕೆ ಕಾರಣವಾಗಿದ್ದು ತನ್ನ ತಾಂ[...] ಹೆಸರಲ್ಲಿ ಬೆಂಗಳೂರಿನಲ್ಲಿ ಬಡವರಿಗಾಗಿ ಕ[...] ಮಂಟಪವೊಂದನ್ನು ಕಟ್ಟಿಸಬೇಕೆಂಬ ರಜನಿ [...] ಗಾಂಧಿಬಜಾರ್, ಬಸವನಗುಡಿಗೆ ಹೊಂದಿಕೊಂಡಂತೆ [...] ವರ್ಷಗಳ ಹಿಂದೆಯೇ ಮುನಿರತ್ನ ಸೈಟೊಂ[...] ಖರೀದಿಸಿಕೊಂಡಿದ್ದರು. ರಜನಿಯ ಕಲ್ಯಾಣ ಮಂ[...]







...ಹೇಗ ಮಾಡಿಸಿದಂತಿದ್ದ ಆ ಸೈಟನ್ನು ಯಾವ ...ದರೂ ಖರೀದಿಸಲು ರಜನಿ ಮಾತುಕತೆಗೆ ...ಕುಮಾರ್ ರವಿಚಂದ್ರನ್ ಮೂಲಕ. ಸೈಟಿಗೆ ಬದಲಾಗಿ ... ಕೇಳಿದ್ದು ರಜನಿ ಕಾಲ್‌ಶೀಟನ್ನು!

...ರಿದಾ ಮೂಲದ ಪ್ರಕಾರ ರವಿಚಂದ್ರನ್ ...ಹಿಂದೆಯೇ ರಜನಿಗೆ ಕಾಲ್‌ಶೀಟಿನ ...ಯಬಿಟ್ಟಿದ್ದರಂತೆ. ಮತ್ತೊಂದೆಡೆ ರಾಕ್‌ಲೈನ್ ವೆಂಕಟೇಶ್ ... ರಜನಿ ಕಾಲ್‌ಶೀಟ್ ಕೊಡಿಸುವಂತೆ ಅಂಬಿಗೆ ...ಲು ಬಿದ್ದಿದ್ದರಂತೆ. ಹಾಗೊಮ್ಮೆ ಯಾರಿಗೇ ರಜನಿ ...ಟ್ ನೀಡಿದ್ದರೂ ಅಂತಿಮವಾಗಿ ಅದಕ್ಕೆ ಲೇಬಲ್ಲಾಗಿ ...ತ್ತಿದ್ದದ್ದು ರಾಕ್‌ಲೈನ್ ಹೆಸರನ್ನೆ!

...ಕೆಂದರೆ ಮುನಿರತ್ನ ಕೇಳಿದ್ದು ರವಿಚಂದ್ರನ್ ಒತ್ತಡ ...ದ್ದು ಮತ್ತು ಅಂಬಿ ಪ್ರಸ್ತಾಪಿಸಿದ್ದೆಲ್ಲದರ ಹಿಂದಿದ್ದದ್ದು ...ಚಿತ್ರ ನಿರ್ಮಿಸುವ ರಾಕ್‌ಲೈನ್ ಮಹತ್ವಾಕಾಂಕ್ಷೆಯೆ. ...ಡಿಯನ್' ನೆಲಕಚ್ಚಿದ ಹಿನ್ನಡೆಯನ್ನು ಸರಿಗಟ್ಟಲು ...ರ್ವಾಗಿ ಹೊಸ ಚಿತ್ರವೊಂದಕ್ಕೆ ಕೈ ಹಾಕಲೇಬೇಕಿತ್ತು. ... ಪ್ರಧಾನಿ ಮೋದಿಯ ಗೆಳೆತನವಿತ್ತಲ್ಲ. ಅದಕ್ಕೆ ...ಲೇ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ... ಪಾಲಾಗಿದ್ದು ವಿರೋಧಿ ಡಿಎಂಕೆ ಇನ್ನಿಲ್ಲದಂತೆ ...ದ್ದು ಇತ್ಯಾದಿಗಳೆಲ್ಲ ರಾಜಕೀಯಕ್ಕೆ ಬರುವ ರಜನಿಯ ...ಮನೆಯನ್ನು ಕೆರಳಿಸಿತೆ?

...ಗೆ ನೋಡಿದರೆ 'ಲಿಂಗಾ' ಚಿತ್ರದ ಕತೆಗೂ ...ಲಿತಾ ಜೈಲು ಪಾಲಾಗಿದ್ದಕ್ಕೂ ಸಂಬಂಧವಿಲ್ಲ. ...ಲಿತಾ ಜೈಲು ಪಾಲಾಗುವ ಎಷ್ಟೋ ತಿಂಗಳುಗಳ ...ಲೇ 'ಲಿಂಗಾ' ಚಿತ್ರದ ಕತೆ ತಯಾರಾಗಿತ್ತು. ರಾಕ್‌ಲೈನ್ ...ದಂತೆ ಅದು ಇದೇ ವರ್ಷದ ಮೇ ತಿಂಗಳು. ...ನಲ್ಲಿ 'ಪವರ್' ಚಿತ್ರ ನಿರ್ಮಿಸುತ್ತಿದ್ದ ರಾಕ್‌ಲೈನ್‌ಗೆ ...ಬಾದ್ ಶೂಟಿಂಗ್ ವೇಳೆಗೆ ಇದ್ದಕ್ಕಿದ್ದಂತೆ ರಜನಿಯ ... ಬಂದಂತೆ. ಹೇಗೂ ಕಾಲ್‌ಶೀಟ್ ಕೇಳ್ತಾ ...ದ್ದೀ ಪೊನ್ ಕುಮಾರನ್ ಅಂಥ ಒಬ್ಬರು ಒಳ್ಳೇ ...ಡಿದ್ದಾರೆ. ನಿನಗೆ ಇಂಟರೆಸ್ಟ್ ಇದೆ ಅಂದ್ರೆ ನಾಳೆನೇ ... ಹೈದ್ರಾಬಾದಿಗೆ ಬರುತ್ತಾರೆ. ಕತೆ ಕೇಳಿದ ಮೇಲೆ ...ಪಿನಿಯನ್ ತಿಳಿಸ್ತೀಯಾ....? ಎಂದಿದ್ದಾರೆ ...ರಂತ್.

...ದ್ದು ರಾಕ್‌ಲೈನ್ ಕೇಳಬೇಕೆ? ರಜನಿಯೇ ಕತೆ ಓಕೆ ... ಮೇಲೆ ಅದು ಚೆನ್ನಾಗಿರಲೇಬೇಕು. ಆ ...ದಲೂ ರಾಕ್‌ಲೈನ್ ರಜನಿಯನ್ನು ...ಡಿದಾಗಲೆಲ್ಲ ಸೆಂಟಿಮೆಂಟಲ್ ಸಿನಿಮಾ ಕತೆಗಳನ್ನೇ ...ಸುತ್ತಿದ್ದರು. 'ಅಣ್ಣಾಮಲೈ', 'ಭಾಷಾ', 'ಪಡೆಯಪ್ಪ' ...ದ ಚಿತ್ರಗಳೆಲ್ಲ ಒಂದರ ಮೇಲೊಂದರಂತೆ ...ದ್ದು ಅವುಗಳ ಭಾವುಕ ಸನ್ನಿವೇಶಗಳಿಂದಾಗಿ. ...ರನ್', 'ಕೊಚ್ಚಾಡಿಯನ್' ತಾಂತ್ರಿಕ ಚಿತ್ರಗಳು. ...ಥರದ ಕಾಮಿಕ್ಸ್‌ಗಳಿದ್ದಂತೆ. ವಿಶೇಷವಾಗಿ ಫ್ಯಾಮಿಲಿ ... ಹೇಳಿಮಾಡಿಸಿದ ಚಿತ್ರಗಳಲ್ಲ. ಆದರೆ ...ಮಲೈ', 'ಭಾಷಾ', 'ಪಡೆಯಪ್ಪ' ಥರದ ಚಿತ್ರಗಳು ...ಭಾವುಕವಷ್ಟೇ ಅಲ್ಲ ಅಪ್ಪಟ ಫ್ಯಾಮಿಲಿ ಚಿತ್ರಗಳು. ...ಸಾಲಿಗೆ ಸೇರಬೇಕು ಮತ್ತೊಂದು ಕತೆಗಾಗಿ ...ನೇಕ ವರ್ಷಗಳಿಂದ ಪರಿತಪಿಸುತ್ತಿದ್ದರು.

...ನ್‌ಕುಮಾರನ್ ಬಂದಿದ್ದೇ ರಜನಿಗೆ ಕತೆ ಹೇಳಿದ್ದನ್ನು ... ರಜನಿ ಸೆಟೆದು ಕೂತರಂತೆ. ರಾಕ್‌ಲೈನ್ ...ಯು ಓಕೆ ಮಾಡಿದ ಮೇಲೆ ರಜನಿಯ ವೇಗವೇ ...ಯಿತು. ರಾಕ್‌ಲೈನ್‌ರನ್ನು ನೇರ ಚೆನ್ನೈಗೇ ...ಸಿಕೊಂಡು ಹಾಕಿದ ಪ್ರಮುಖ ಷರತ್ತೆಂದರೆ ಚಿತ್ರ ...ರ್ ಅಂತ್ಯಕ್ಕೆಲ್ಲಾ ಮುಗಿದಿರಬೇಕು. ಮತ್ತು ತನ್ನ ...ಹುಟ್ಟುಹಬ್ಬದ ದಿನವೇ ಅಂದರೆ ಡಿಸೆಂಬರ್ 12 ... ಬಿಡುಗಡೆಯಾಗಬೇಕು.

...ಯು ಈ ಷರತ್ತನ್ನು ಚಾಚೂತಪ್ಪದೆ ಪಾಲಿಸಿದರೆ ...ನ್. ಇದೇ ಮೇ 26 ಕ್ಕೆ ಶುರುವಾದ 'ಲಿಂಗಾ' ... ಇದೇ ತಿಂಗಳಲ್ಲಿ ಪೂರ್ಣಗೊಂಡಿದೆ. ಚಿತ್ರಕತೆ ...ವಾಗಿದೆ. ಭಾವುಕ ಸನ್ನಿವೇಶಗಳು ಎಂಥವರ ...ನ್ನೂ ತಟ್ಟುತ್ತದೆ. ಈ ಒಂದೇ ಚಿತ್ರದಿಂದಾಗಿ ರಜನಿ ...ಗಳ ಸಂಖ್ಯೆ ಮೂರುಪಟ್ಟು ಹೆಚ್ಚಲಿದೆ. 90 ರ ... ರಜನಿಯ ಬ್ಲಾಕ್‌ಬಸ್ಟರ್ ಸಿನಿಮಾಗಳ ನೆನಪನ್ನು ...ಮರುಕಳಿಸಲಿದೆ ಎನ್ನುತ್ತಾರೆ ರಾಕ್‌ಲೈನ್. ಆದರೆ ...ಒಂದೇ ಇದು ರಜನಿಯ ರಾಜಕೀಯ ...ವಾ?

...ಕ್ಕೆ ಉತ್ತರ ಸಿಗುವುದು ಡಿಸೆಂಬರ್ 12 ರಂದೇ. ...ದ ಕತೆಯಲ್ಲಿ ಜನೋಪಕಾರಿ ನಾಯಕನ ...ದರೆ ತನ್ನ ರಾಜಕೀಯ ಪ್ರವೇಶದ ಕುರಿತಂತೆ ...ದ ಮಾತಿಗೆ ಏನೂ ಅರ್ಥವಿದೆ? ಹಾಗೊಮ್ಮೆ ... ಸಂದೇಹಿಸುವಷ್ಟೇ ಇತ್ತೆಂದರೆ ರಜನಿಯ ... ರೈಲಾಗಿದ್ದರೂ ಆಕಸ್ಮಿಕವಾಗಿ ಬಂದಿದ್ದಷ್ಟೇ. ...ಗೂ ರಾಜಕೀಯದ ಪರಾಗೂ 'ಲಿಂಗಾ' ಎಂಬ ...ಯ ಚಿತ್ರಕ್ಕೂ ಸಂಬಂಧವಂತೂ ಇದ್ದೇ

● ರಾ. ಸೋಮನಾಥ್

# ಮಂಡ್ಯ: ಅಂಬಿಗೆ ಅರ್ಧ'ಚಂದ್ರ', ಕೃಷ್ಣಗೆ ಜೋಡಿಚಂದ್ರ




ಅಂತೂಇಂತೂ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಕ್ಕಿನ ಕುತ್ತಿಗೆಗೆ ಗಂಟೆ ಕಟ್ಟಿಯೇ ಬಿಟ್ಟಿದ್ದಾರೆ. ಇನ್ನು ಅದು ಮಾಡುವ ಸದ್ದನ್ನು ಹೇಗೆ ನಿಭಾಯಿಸುತ್ತಾರೊ ನೋಡಬೇಕು. ಸಿದ್ದು-ಪರಮೇಶ್ವರ್ ನಡುವಿನ ಜಟಾಪಟಿಗೆ ಕಾರಣವಾಗಿ ಗಜಗರ್ಭದಿಂದ ಹೊರಬಿದ್ದಿರುವ ನಿಗಮ ಮಂಡಳಿ ಅಧ್ಯಕ್ಷಗಿರಿ ವಿವಾದ ಮಂಡ್ಯದ ಮಟ್ಟಿಗೆ ಭಾರೀ ಕದನವನ್ನೇ ಘೋಷಿಸಿದಂತಿದೆ. ಅಂಬಿ ಬಣಕ್ಕೆ ಕವಡೆ ಕಾಸಿನ ಕಿಮ್ಮತ್ತೂ ನೀಡದ ಸಿಎಂ, ಕೃಷ್ಣ ಬಣದ ಇಬ್ಬರಿಗೆ ಅಧ್ಯಕ್ಷಗಿರಿ ದಯಪಾಲಿಸಿರೋದು ಅಂಬಿಯನ್ನು ರೆಬೆಲ್ ಮಾಡಿಬಿಟ್ಟಿದೆ. ತನ್ನ ಬಲಗೈ ಭಂಟ ಅಮರಾವತಿ ಚಂದ್ರಶೇಖರ್‌ಗೆ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸ್ಥಾನ ಕೊಡಿಸಬೇಕೆನ್ನುವುದು ಅಂಬಿಯ ಬಿಗಿ ಪಟ್ಟಾಗಿತ್ತು. ಖುದ್ದು ಚಂದ್ರನ ನೂರಾರು ಬೆಂಬಲಿಗರೇ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಹಾಗೂ ಸಚಿವ ಹೆಚ್.ಸಿ.ಮಹದೇವಪ್ಪನವರ ಮುಂದೆ ಪೆರೇಡ್ ನಡೆಸಿ ಒತ್ತಾಯಿಸಿ ಬಂದಿದ್ದರು. ತನ್ನ ವಸತಿ ಇಲಾಖೆಯ ವ್ಯಾಪ್ತಿಗೇ ಬರುವ ಕೊಳಗೇರಿ ಮಂಡಳಿಗೆ ಶಿಷ್ಯನೇ ಅಧಿಕೃತ ಅಧ್ಯಕ್ಷನಾದರೆ ತನ್ನ ಕೆಲಸ ಮತ್ತಷ್ಟು ಸಲೀಸು ಎಂತಲೇ ಭಾವಿಸಿದ್ದ ಅಂಬಿಗೆ ಭರ್ಜರಿ ಶಾಕ್ ಆದಂತಿದೆ. ಯಾಕೆಂದರೆ ಅಮರಾವತಿ ಚಂದ್ರ ಕಣ್ಣಿಟ್ಟಿದ್ದ ಸ್ಥಾನ ಬೆಂಗಳೂರು ಮಹಾನಗರ ಪಾಲಿಕೆ ಮಾಜಿ ಮೇಯರ್ ರಮೇಶ್ ಪಾಲಾಗಿದೆ. ಇದಕ್ಕಿಂತಲೂ ಅಂಬಿ ಬಣವನ್ನು ರೊಚ್ಚಿಗೇಳಿಸಿರುವುದು ಕೃಷ್ಣ ಬಣದಿಂದ ಗುರುಚರಣ್ (ಎಸ್.ಎಂ. ಕೃಷ್ಣರ ಸಹೋದರ ಎಸ್.ಎಂ.ಶಂಕರ್‌ರ ಪುತ್ರ) ಮತ್ತು ಮಲ್ಲಾಜಮ್ಮರಿಗೆ ಅಧ್ಯಕ್ಷಗಿರಿ ಕಲ್ಪಿಸಿರೋದು. ಇದನ್ನೊಂದು ಭಾರೀ ಮುಖಭಂಗ ಎಂತಲೇ ಪರಿಗಣಿಸಿರುವ ಅಂಬಿ ಮದವೇರಿದ ಒಂಟಿಸಲಗದಂತೆ ಸಿಎಂ ಸಿದ್ದರಾಮಯ್ಯ ವಿರುದ್ಧ ಸಿಟ್ಟಾಗಿದ್ದಾರೆ. "ನನಗೂ ರಾಜಕೀಯ ಗೊತ್ತು. ಸಿದ್ದರಾಮಯ್ಯನವರು ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕಿತ್ತು" ಎಂದು ಮೈಸೂರಿನಲ್ಲಿ ಸೋತ ಸರದಾರ ನಂತೆ ಹತಾಶೆಯಿಂದ ಅಂಬಿ ಕಿಡಿಕಾರಿಕೊಂಡಿರೋದು ಇದೇ ಕಾರಣಕ್ಕೆ. ಕೊಟ್ಟಿರುವ ವಸತಿ ಖಾತೆಯನ್ನೇ ಸರಿಯಾಗಿ ನೋಡಿಕೊಳ್ಳದ ಅಂಬರೀಶರನ್ನು ಸಚಿವ ಸಂಪುಟದಿಂದ ಕೈಬಿಡಿ ಎಂಬ ಒತ್ತಾಯ ಕೇಳಿಬರುತ್ತಿರುವ ಸಂದರ್ಭವನ್ನು ಸರಿಯಾಗಿಯೇ ಬಳಸಿಕೊಂಡಿರುವ ಸಿದ್ದರಾಮಯ್ಯ ಅಂಬಿ ನೀಡಿದ್ದ ಪಟ್ಟಿಯನ್ನು ಎಡಗೈನಲ್ಲೂ ಮುಟ್ಟದೆ ಕಸದ ಬುಟ್ಟಿಗೆ ಎಸೆದಂತಿದೆ.

## ಕೃಷ್ಣ ಬಣ ಮೇಲುಗೈ

ಕಳೆದ ಸೋಮವಾರ ಮಧ್ಯಾಹ್ನ ಸ್ವತಃ ಅಮರಾವತಿ ಚಂದ್ರನೇ ತನ್ನ ಹಿಂಬಾಲಕರಿಗೆ ಫೋನ್ ಮಾಡಿ 'ನನಗೆ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸ್ಥಾನ ಸಿಕ್ಕೇಬಿಟ್ಟಿತು' ಎಂದು ತಿಳಿಸಿದ್ದ. ಆದರೆ ರಾತ್ರಿ ಹೊತ್ತಿಗೆ ಬಿಡುಗಡೆಯಾದ ಪಟ್ಟಿಯಲ್ಲಿ ಅಂಬಿ ಬಂಟ ಅಮರಾವತಿ ಚಂದ್ರನ ಹೆಸರೇ ಮಾಯವಾಗಿ ಆ ಜಾಗದಲ್ಲಿ ರಮೇಶ್ ಹೆಸರು ಸೇರ್ಪಡೆಯಾಗಿತ್ತು.

ಅಮರಾವತಿ ಚಂದ್ರನ ಬೆಂಬಲಿಗರು ಅಂಬಿ ಮೇಲೆ ಮತ್ತೆ ಒತ್ತಡ ಹಾಕುತ್ತಿರುವುದರಿಂದ ಅಂಬಿ ಸಿಎಂ ಸಿದ್ದರಾಮಯ್ಯ ವಿರುದ್ಧ ಸಿಟ್ಟಾಗಿ ಕುದಿಯತೊಡಗಿದ್ದಾರೆ. ಅಂಬಿ ಬಣಕ್ಕೆ ಮಣೆ ಹಾಕದ ಸಿಎಂ ಸಿದ್ದರಾಮಯ್ಯ ಎಸ್.ಎಂ. ಕೃಷ್ಣ ಬಣದಲ್ಲಿ ಗುರುತಿಸಿಕೊಂಡಿರುವ ಮಲ್ಲಾಜಮ್ಮನವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ ಕೊಟ್ಟಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಲ್ಲಾಜಮ್ಮ ಮಳವಳ್ಳಿ ಮೀಸಲು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಸಿದ್ದರಾಮಯ್ಯ ನರೇಂದ್ರಸ್ವಾಮಿಯನ್ನು ಕಾಂಗ್ರೆಸ್‌ಗೆ ಕರೆತಂದು ಟಿಕೆಟ್ ಕೊಡಿಸಿ ಗೆಲ್ಲಿಸಿ ಕೊಂಡಿದ್ದರು. ಹಾಗಾಗಿ ಅವರಿಗೆ ದಲಿತ ಮಹಿಳಾ ಕೋಟಾದಲ್ಲಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಮಲ್ಲಿಕಾರ್ಜುನ ಖರ್ಗೆ ಹಾಗೂ ಕೇಂದ್ರ ಕಾಂಗ್ರೆಸ್ ನಾಯಕರ ಕೃಪಾಕಟಾಕ್ಷ ಗಿಟ್ಟಿಸಿದ್ದು ಕೂಡ ಮಲ್ಲಾಜಮ್ಮರಿಗೆ ನೆರವಾಗಿದೆ. ಹಾಗೆಯೇ ಎಸ್.ಎಂ. ಕೃಷ್ಣ ತನ್ನ ಸಹೋದರ ಎಸ್.ಎಂ.ಶಂಕರ್ ಪುತ್ರ ಮತ್ತು ಜಿ.ಪಂ. ಮಾಜಿ ಅಧ್ಯಕ್ಷ ಗುರುಚರಣ್‌ಗೆ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಅಧ್ಯಕ್ಷ ಸ್ಥಾನ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ತನ್ನ ಬಣದ ಇಬ್ಬರಿಗೆ ಅಧ್ಯಕ್ಷ ಸ್ಥಾನ ಕೊಡಿಸುವ ಮೂಲಕ ಎಸ್.ಎಂ. ಕೃಷ್ಣ ಕಾಂಗ್ರೆಸ್‌ನಲ್ಲಿ ತನ್ನ ಪ್ರಭಾವ ಇನ್ನೂ ಉಳಿದಿದೆ ಎಂದು ವಸತಿ ಸಚಿವ ಅಂಬಿಗೆ ತೋರಿಸಿದ್ದಾರೆ.


ಈ ಮಧ್ಯೆ ಅಂಬಿ ಬಣದಲ್ಲಿದ್ದರೂ ಎಸ್.ಎಂ. ಕೃಷ್ಣ ಬಣದ ಜೊತೆಯೂ ಚೆನ್ನಾಗಿರುವ ಮುಡಾ ಮಾಜಿ ಅಧ್ಯಕ್ಷ ಪಿ.ಎಂ.ಸೋಮಶೇಖರ್ ಬುದ್ಧಿವಂತ. ಅಂಬಿ-ಎಸ್.ಎಂ. ಕೃಷ್ಣ ಬಣದ ಗುದ್ದಾಟದ ಮಧ್ಯೆ ತನ್ನ ಬುದ್ಧಿ ಉಪಯೋಗಿಸಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ಪಡೆದುಕೊಂಡಿದ್ದಾರೆ. 1994ರಲ್ಲಿ ಜನತಾದಳದಲ್ಲಿದ್ದ ಸೋಮಶೇಖರ್ ಆಗ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದರು. ಆಗ ಸಚಿವರಾಗಿದ್ದ ಕೆ.ಎನ್.ನಾಗೇಗೌಡ ಹಾಗೂ ಎಸ್.ಡಿ.ಜಯರಾಂ ಜೊತೆ ಸೇರಿ 500 ಎಕರೆಯಷ್ಟಿದ್ದ ಮಂಡ್ಯ ಕೆರೆಯನ್ನು ಮುಚ್ಚಿ ಲೇಔಟ್ ಮಾಡಿ ಸೈಟಿದ್ದವರಿಗೆ ಸೈಟು ಹಂಚಿ ತಾವು ಆರ್ಥಿಕವಾಗಿ ದುಂಡಗಾಗಿದ್ದರು. ಜನತಾದಳದಲ್ಲಿದ್ದ ಸಂದರ್ಭದಲ್ಲಿ ಸಿದ್ದರಾಮಯ್ಯನವರ ಜೊತೆ ಇಟ್ಟುಕೊಂಡಿದ್ದ ಒಡನಾಟದಿಂದಾಗಿ ಆತನಿಗೆ ಕ್ರೀಡಾ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ದಕ್ಕಿದೆಯೇ ಹೊರತು ಸಚಿವ ಅಂಬಿ ಶಿಫಾರಸ್ಸಿನಿಂದ ಅಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ.





ರಘುನಂದನ್ ದಲಿತ ಕೋಟಾದಲ್ಲಿ ಸಚಿವ ಮಹದೇವಪ್ಪನವರ ಮೂಲಕ ರಾಜ್ಯ ನಿಗಮ ಮಂಡಳಿ ಅಧ್ಯಕ್ಷೆಯಾಗಲು ಪ್ರಯತ್ನಿಸಿದ್ದರು. ಆದರೆ ಅವರಿಗೂ ಸ್ಥಾನ ನೀಡಿಲ್ಲ.


ಅಂಬಿ ಬಣದ ವಿರುದ್ಧ ಸೆಡ್ಡು ಹೊಡೆದು ಎಸ್.ಎಂ. ಕೃಷ್ಣ ಬಣದಲ್ಲಿ ಗುರುತಿಸಿಕೊಂಡಿರುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಾಜಿ ಸಚಿವ ಎಂ.ಎಸ್.ಆತ್ಮಾನಂದರಿಗೆ ರಾಜ್ಯ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಸಿಗುತ್ತದೆಂಬ ನಿರೀಕ್ಷೆ ಮೊದಲ ಪಟ್ಟಿ ಬಿಡುಗಡೆ ನಂತರ ಕಮರಿಹೋಗಿದೆ. ಅವರಿಗೆ ಜಿಲ್ಲಾಧ್ಯಕ್ಷ ಪಟ್ಟವೇ ಕಾಯಂ ಆಗಬಹುದೆಂಬ ಲಕ್ಷಣಗಳು ದಟ್ಟವಾಗಿವೆ.

ಅಂಬಿ ಬಣದಲ್ಲಿರುವ ಶಂಕರ (ಅಪ್ಪು) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಪ್ರಬಲ ಲಾಬಿ ನಡೆಸಿದ್ದಾರೆ. ಅಂಬಿ ಕೂಡ ಶಿಫಾರಸ್ಸು ಮಾಡಿದ್ದು ಸಿಗುವ ಅವಕಾಶಗಳು ಹೆಚ್ಚಾಗಿದೆ. ಮೈಶುಗರ್ ಮಾಜಿ ಅಧ್ಯಕ್ಷ









ಬಿ.ಸಿ.ಶಿವಾನಂದ ಕಾಡಾ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಈಗ ಅದು ಮುಖ್ಯಮಂತ್ರಿ ಆಪ್ತ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ದಾಸೇಗೌಡರ ಪಾಲಾಗಿದೆ.

## ಕಾಯುವವರ ಸಂಖ್ಯೆ ದೊಡ್ಡದು

ರಾಜ್ಯ ನಿಗಮ ಮಂಡಳಿ ಅಧ್ಯಕ್ಷ, ನಿರ್ದೇಶಕರಾಗಲು ಕಾಯುತ್ತಿರುವವರ ಸಂಖ್ಯೆ ಮಂಡ್ಯದಲ್ಲಿ ಬಹಳ ದೊಡ್ಡದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗ ಕುರುಬ ಜನಾಂಗದ ದಡದಪುರ ಶಿವಣ್ಣನಿಗೆ ಮೊದಲ ಕಂತಿನಲ್ಲೇ ರಾಜ್ಯ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಸಿಗುತ್ತದೆಂಬ ನಿರೀಕ್ಷೆ ಹುಸಿಯಾಗಿದೆ. ರಾಜ್ಯ ರಾಜಕಾರಣದಲ್ಲಿ ನಿಗೂಢವಾಗಿಯೇ ಕಾರ್ಯಚಟುವಟಿಕೆ ನಡೆಸುವ ದಡದಪುರದ ಶಿವಣ್ಣ ಸಾಕಷ್ಟು ಪ್ರಭಾವಶಾಲಿ. ಆದರೂ ಮೊದಲ ಪಟ್ಟಿಯಲ್ಲಿ ಶಿವಣ್ಣನ ಹೆಸರೇ ಇಲ್ಲದಿರುವುದು ಅಚ್ಚರಿ ಮೂಡಿಸಿದೆ.

ಇನ್ನು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಾಗರಾಜ ಮೈಶುಗರ್ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಸಿದ್ದರಾಮಯ್ಯನ ಬೆಂಬಲಿಗರಾಗಿರುವ ಇವರು 2ನೇ ಪಟ್ಟಿಯಲ್ಲಿ ಸ್ಥಾನ ಸಿಗಬಹುದು ಎಂಬ ಆಶಾಭಾವನೆ ಹೊಂದಿದ್ದಾರೆ. ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಂ.ಎಸ್.ಚಿದಂಬರ್ ರಾಜ್ಯ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಯುವ ಕಾಂಗ್ರೆಸ್ ಅಧ್ಯಕನಾಗಿದ್ದಾಗ ಬಿಜೆಪಿ ವಿರುದ್ಧ ನಡೆಸಿದ್ದ ಪ್ರತಿಭಟನೆಗಳು ... ನಾಯಕರು ಬಂದಾಗಲೆಲ್ಲಾ ಮಂಡ್ಯದ ತುಂಬೆಲ್ಲಾ ಫ್ಲೆಕ್ಸ್ ಬ್ಯಾನರ್ ಹಾಕಿಸಿದ್ದು ಕೂಡ ಆತನ ನೆರವಿಗೆ ಬಂದಿಲ್ಲ. ಆದರೂ 2ನೇ ಪಟ್ಟಿಯಲ್ಲಿ ನನಗೆ ಸ್ಥಾನ ಸಿಗಬಹುದು ಎಂಬ ನಿರೀಕ್ಷೆ ಇನ್ನೂ ಚಿದಂಬರ್‌ಗೆ ಇದ್ದಂತಿದೆ. ನಗರಸಭೆ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ


ರಾಜ್ಯ ನಿಗಮದ ನಿರ್ದೇಶಕರಾಗಲು ಅಂಬಿ ಶಿಷ್ಯರಾದ ಬೇಲೂರು ಸೋಮಶೇಖರ್, ಜೆ.ಸಿ.ಆನಂದ, ಸಿ.ಡಿ.ಗಂಗಾಧರ್, ಕೆ.ಆರ್.ಪೇಟೆಯ ನಾಗೇಂದ್ರಕುಮಾರ್, ದೇವರಾಜು, ಕೆ.ಸಿ.ಚನ್ನೇಗೌಡ, ಬಿ.ಲಿಂಗಯ್ಯ ಸೇರಿದಂತೆ 15ಕ್ಕೂ ಹೆಚ್ಚು ಮಂದಿ ಪ್ರಯತ್ನಿಸಿದ್ದು ಇವರಿಗೆ ಅಂಬಿ ಬೆಂಬಲವಿದೆ. ಎಸ್.ಎಂ. ಕೃಷ್ಣ ಕೂಡ ಪ್ರತ್ಯೇಕ ಪಟ್ಟಿ ಸಿದ್ಧಪಡಿಸಿದ್ದು, ಅದರಲ್ಲಿ ಟಿ.ಎಂ.ಎ. ಲಿಂಗಯ್ಯ, ಸಿ.ಎಂ.ನಾಗರಾಜು, ಟಿ.ಎಸ್.ಸತ್ಯಾನಂದ ಸೇರಿದಂತೆ ಹಲವರ ಹೆಸರಿದೆ. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಜಿಲ್ಲಾಧ್ಯಕ್ಷ ತಗ್ಗಹಳ್ಳಿ ಸಂದೇಶ್, ಸಾತನೂರಿನ ನರಸಪ್ಪಹೆಗಡೆ, ಶ್ರೀರಂಗಪಟ್ಟಣದ ಪುಟ್ಟೇಗೌಡ, ಅಂಬಿ ಶಿಷ್ಯ ಶೆಟ್ಟಹಳ್ಳಿ ಲಿಂಗರಾಜು, ಮಹಿಳಾ ಕೋಟಾದಲ್ಲಿ ನಿರ್ಮಲ ಚಿಕ್ಕೇಗೌಡ, ಹನ್ನಿಯಾ ಬಾನು, ಲಲಿತಾ ಭಾಸ್ಕರ್ ಸೇರಿದಂತೆ ಡಜನ್‌ಗೂ ಹೆಚ್ಚು ಮಹಿಳೆಯರು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಯಾರಿಗೆ ಅಧಿಕಾರ ದಕ್ಕುತ್ತದೋ ವಾರದಲ್ಲಿ ಗೊತ್ತಾಗಲಿದೆ.

ಪಕ್ಷಕ್ಕಾಗಿ ದುಡಿದ ನಿಷ್ಠಾವಂತರಿಗೆ ಮಾತ್ರ ನಿಗಮ ಮಂಡಳಿಯಲ್ಲಿ ಅವಕಾಶ ಕೊಡಿ ಎಂಬ ಹೈಕಮಾಂಡ್ ಆದೇಶದಿಂದ ರಾಜಕೀಯ ನಿರುದ್ಯೋಗಿಗಳಾಗಿರುವ ಮಾಜಿ ಶಾಸಕರಿಗೆ ಭಾರಿ ನಿರಾಸೆಯೇ ಆಗಿದೆ. ಮಾಜಿ ಶಾಸಕರಾದ ನಾಗಮಂಗಲ ಸುರೇಶ್‌ಗೌಡ, ಶಿವರಾಮೇಗೌಡ, ಕೆ.ಆರ್.ಪೇಟೆಯ ಕೆ.ಬಿ.ಚಂದ್ರಶೇಖರ್, ಕಲ್ಪನಾ ಸಿದ್ದರಾಜು ಮೊದಲಾದವರ ಆಸೆಗೆ ಹೈಕಮಾಂಡ್ ತಣ್ಣೀರೆರಚಿದೆ.

ಮೊದಲೇ ಕೃಷ್ಣ-ಅಂಬಿ ಬಣದ ಕಿತ್ತಾಟದಿಂದ ಜರ್ಝರಿತವಾಗಿರುವ ಮಂಡ್ಯ ಕಾಂಗ್ರೆಸ್‌ನಲ್ಲಿ ನಿಗಮ ಮಂಡಳಿ ಅಧ್ಯಕ್ಷ ನೇಮಕಾತಿಯ ನಂತರ ಹೊಸ ಸಂಘರ್ಷ ಹುಟ್ಟಿಕೊಳ್ಳುವ ಸಾಧ್ಯತೆಯಿದ್ದು ಎಲ್ಲಿಗೆ ಬಂದು ತಲುಪುತ್ತೋ ಕಾದು ನೋಡಬೇಕು

● ಮಂಡ್ಯ ನಾಗೇಶ್

# ನೈತಿಕ ಪೊಲೀಸ್‌ಗಿರಿ ಮತ್ತು 'ಕಿಸ್ ಆಫ್ ಲವ್'




ಇತ್ತೀಚೆಗೆ ದೇಶದ ಹಲವಾರು ಕಡೆಗಳಲ್ಲಿ ನಡೆಯುತ್ತಿರುವ 'ಕಿಸ್ ಆಫ್ ಲವ್', 'ಹಗ್ ಆಫ್ ಲವ್' ಮುಂತಾದವುಗಳು ಭಾರಿ ವಿವಾದವನ್ನ ಹುಟ್ಟುಹಾಕಿವೆ. ಈ ವಿವಾದದ ಬಿರುಗಾಳಿ ಎಷ್ಟು ಪ್ರಬಲವಾಗಿದೆಯೆಂದರೆ ಮೂಲತಃ ಇವೆಲ್ಲವೂ ಸಾಂಕೇತಿಕ ಪ್ರತಿಭಟನೆಗಳು ಎಂಬ ಮುಖ್ಯ ವಿಷಯವೇ ಎಲ್ಲಿಗೋ ಹಾರಿಹೋಗಿದೆ. ಒಂದು ಪ್ರಶ್ನೆಯನ್ನು ನಾವೆಲ್ಲರೂ ಕೇಳಿಕೊಳ್ಳಬೇಕು. ಈ ಪ್ರೀತಿಯ ಚುಂಬನ ಅಥವಾ ಆಲಿಂಗನದ ಸಾಂಕೇತಿಕ ಪ್ರತಿಭಟನೆಗಳಿಗೂ ಪ್ರತಿಕೃತಿ ದಹನದಂಥವುಗಳಿಗೂ ಏನು ವ್ಯತ್ಯಾಸ? ಹೇಗೆ ಪ್ರತಿಕೃತಿ ದಹನ ಮಾಡುವವರು ಅದನ್ನೊಂದು ನಿತ್ಯ ಕಾಯಕವಾಗಿ ಮಾಡುವುದಿಲ್ಲವೋ ಅದೇ ರೀತಿ ಇವರ್‍ಯಾರೂ ನಿತ್ಯ ಸಾರ್ವಜನಿಕವಾಗಿ ಚುಂಬನ ಅಥವಾ ಆಲಿಂಗನ ಮಾಡುವವರಲ್ಲ. ವಿವಾದ ಸೃಷ್ಟಿಸುತ್ತಿರುವವರು ಈ ಸತ್ಯವನ್ನು ಮರೆಮಾಚಿ ವಿಷಯಾಂತರ ಮಾಡಿ ಚರ್ಚೆಯ ದಿಕ್ಕು ತಪ್ಪಿಸುತ್ತಿದ್ದಾರೆ. ಪರಿಣಾಮವಾಗಿ ನೈತಿಕ ಪೊಲೀಸ್‌ಗಿರಿ ಎಂಬ ಕಾನೂನುಬಾಹಿರ ಕೃತ್ಯಗಳ ಸುತ್ತ ನಡೆಯಬೇಕಾದ ಚರ್ಚೆಗಳನ್ನು ಇನ್ನೆಲ್ಲಿಗೋ ಕೊಂಡೊಯ್ಯಲಾಗುತ್ತಿದೆ. ಪ್ರೇಮಿಗಳು ಮುಕ್ತವಾಗಿ ವಿಹರಿಸಲು ಅಂಜುವಂಥಾ ಸನ್ನಿವೇಶವನ್ನು ನಿರ್ಮಿಸಿದವರ ವಿರುದ್ಧ ಅವರು ಐಸ್‌ಕ್ರೀಮ್ ಪಾರ್ಲರಿನಲ್ಲೋ ಬಸ್ ನಿಲ್ದಾಣದಲ್ಲೋ, ಕಡಲಕರೆಯಲ್ಲೋ ಅತ್ತಿತ್ತ ಭಯಭೀತ ದೃಷ್ಟಿ ಹರಿಸುತ್ತ ಪಿಸುಗುಡುವ ಅನಿವಾರ್ಯತೆಯನ್ನು ಸೃಷ್ಟಿಸಿದ ತಥಾಕಥಿತ 'ಸಂಸ್ಕೃತಿ ರಕ್ಷಕರ' ವಿರುದ್ಧ ನಡೆಯಬೇಕಾದ ಚರ್ಚೆಗಳು ಚುಂಬನದ ನೈತಿಕತೆ ಮತ್ತು ಭಾರತೀಯ ಸಂಸ್ಕೃತಿಗಳ ಸುತ್ತ ಗಿರಕಿ ಹೊಡೆಯುತ್ತಿವೆ. ಕಾಮಶಾಸ್ತ್ರ ರಚಿಸಿದ ಮುನಿ ವಾತ್ಸ್ಯಾಯನನನ್ನು, ಖಜುರಾಹೊ, ಕೋನಾರ್ಕ, ನಂಜನಗೂಡು, ತೆಲಂಗಾಣದ ರಾಮಮಂದಿರ ಮೊದಲಾದ ಕಡೆಗಳಲ್ಲಿರುವ ಮೈಥುನ ಶಿಲ್ಪಗಳನ್ನು ಜಾಣ ಮರೆವಿಗೆ ತಳ್ಳಿರುವ 'ಸಂಸ್ಕೃತಿ ರಕ್ಷಕರು' ಭಾರತೀಯ ಸಂಸ್ಕೃತಿ ಬಗ್ಗೆ ಭೋರ್ಗರೆಯುವುದನ್ನು ಕೇಳುವಾಗ ನಗು ಉಕ್ಕಿ ಬರದಿದ್ದೀತೇ?

## ನೈತಿಕ ಪೊಲೀಸ್‌ಗಿರಿ

ನಮ್ಮದು ಹತ್ತುಹಲವು ಸಮುದಾಯಗಳಿಂದ ಮತ್ತು ಅಷ್ಟೇ ಭಿನ್ನಭಿನ್ನ ಸಂಸ್ಕೃತಿಗಳಿಂದ ಕೂಡಿದ ವೈವಿಧ್ಯಮಯ ದೇಶ. ಇಲ್ಲಿ ಹಲವಾರು ಮತಧರ್ಮಗಳಿವೆ. ನೂರಾರು ಪಂಥಗಳಿವೆ. ಜಗತ್ತಿನ ಬೇರೆ ಯಾವುದೇ ದೇಶದಲ್ಲಿ ಇರದಂತಹ ಜಾತಿಪದ್ಧತಿ ಇದೆ. ಹೆಚ್ಚಿನ ಸಮುದಾಯಗಳಲ್ಲಿ ಪುರುಷ ಪ್ರಾಧಾನ್ಯ ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿ ಕುಟುಂಬಕ್ಕೆ ಗಂಡೇ ಯಜಮಾನ. ಆಸ್ತಿಯ ಹಕ್ಕು ಯಜಮಾನದಿಂದ ಗಂಡುಮಕ್ಕಳಿಗೆ ಹಸ್ತಾಂತರಗೊಳ್ಳುತ್ತದೆ. ಈಚೆಗೆ ಸಮಾನ ಹಕ್ಕಿನ ಕಾಯ್ದೆ ಜಾರಿಗೆ ಬಂದಿದೆ. ಆದರೂ ಅನೇಕ ಕುಟುಂಬಗಳಲ್ಲಿ ಇನ್ನೂ ಹಳೆಯ ಪಿತೃಪ್ರಧಾನ ವ್ಯವಸ್ಥೆಯೇ ಮುಂದುವರಿದಿದೆ. ಸ್ತ್ರೀಭ್ರೂಣ ಹತ್ಯೆಗಳಿಗೆ ಇದೂ ಒಂದು ಪ್ರಮುಖ ಕಾರಣ. ಪಿತೃಪ್ರಧಾನ ಕುಟುಂಬದಲ್ಲಿ ಸ್ತ್ರೀಯ ಪಾತ್ರ ಕೇವಲ ಮನೆಗೆಲಸ ಮತ್ತು ವಂಶೋದ್ಧಾರಕರನ್ನು ಹೆರುವ ಕೆಲಸಗಳಿಗೆ ಸೀಮಿತ. ಹೆಣ್ಣಿನ ಈ ಪರಿಶುದ್ಧತೆಯ ಕಲ್ಪನೆಗೂ ಆಸ್ತಿಯ ಹಕ್ಕು ವಂಶೋದ್ಧಾರಕರಿಗಷ್ಟೆ ಹಸ್ತಾಂತರ ಆಗಬೇಕೆಂಬ ಬಯಕೆಗೂ ಪರಸ್ಪರ ಸಂಬಂಧಗಳಿವೆ.


ಜಾತಿ, ಧರ್ಮ, ಕುಲ ಮುಂತಾದವುಗಳು ಮನುಷ್ಯ ನಿರ್ಮಿತ ಗಡಿಗಳು. ಮನುಷ್ಯನ ಮೂಲಗುಣ ಇವುಗಳನ್ನೆಲ್ಲ




ಮೀರಿ ನಿಲ್ಲುತ್ತದೆ. ಆದುದರಿಂದಲೆ ಅನ್ಯ ಜಾತಿ, ಕುಲ ಅಥವಾ ಧರ್ಮದ ಯುವಕ, ಯುವತಿಯರು ಪರಸ್ಪರರನ್ನು ಇಷ್ಟಪಟ್ಟರೆ ಅದು ಖಂಡಿತಾ ಅಸ್ವಾಭಾವಿಕವೂ ಅಲ್ಲ ಅಪರಾಧವೂ ಅಲ್ಲ, ಹಾಗೆ ಭಾವಿಸುವುದು ತಪ್ಪಾಗುತ್ತದೆ. ನಿಜ ಹೇಳಬೇಕೆಂದರೆ ಇಂತಹ ಸಂಬಂಧಗಳು ಸಂವಿಧಾನದಲ್ಲಿ ಹೇಳಲಾಗಿರುವ ಜಾತ್ಯತೀತ ಮೌಲ್ಯವನ್ನು ಬೆಳೆಸುವ ರೀತಿಯಲ್ಲಿದೆ. ಭಾರತವನ್ನು ಒಂದು ಜಾತಿಮುಕ್ತ ಸೆಕ್ಯೂಲರ್ ಸಮಾಜವಾಗಿಸಬೇಕೆಂಬುದು ಅಂಬೇಡ್ಕರ್‌ರ ಕನಸಾಗಿತ್ತು, ಅಂತಹ ಸಮಾಜದಲ್ಲಿ ಜನ ಖಾಸಗಿಯಾಗಿ ಯಾವುದೇ ಧರ್ಮವನ್ನು ಅನುಸರಿಸಬಹುದು ಮತ್ತು ಅಂತರ್‌ಧರ್ಮೀಯ ಸಂಬಂಧಗಳಿಗೆ ಯಾವುದೇ ಅಡ್ಡಿಆತಂಕಗಳಿರಬಾರದು. ಇದು ಆಧುನಿಕ ಪ್ರಗತಿಪರ ಸಮಾಜದ ಪರಿಕಲ್ಪನೆಯಾಗಿದೆ. ಇದು ಕುವೆಂಪುರವರ 'ವಿಶ್ವಮಾನವ' ಪರಿಕಲ್ಪನೆಯೂ ಹೌದು.

ಇವತ್ತಿನ ಸುಶಿಕ್ಷಿತ ಯುವಜನಾಂಗ ಆಧುನಿಕತೆ ತಂದುಕೊಡುತ್ತಿರುವ ಹೊಸ ಹೊಸ ವಿಚಾರಗಳ ಬೆಳಕಿನಲ್ಲಿ ಹಳೆಯ ಕಟ್ಟುಪಾಡುಗಳನ್ನು ಮೀರಲು ಯತ್ನಿಸುತ್ತಿದೆ. ಇದು ಬುದ್ಧ ಹೇಳಿದ 'ಬದಲಾವಣೆಯೇ ಜೀವನದ ಸಾರ' ಎಂಬ ಜೀವನಧರ್ಮಕ್ಕೆ ಅನುಗುಣವಾಗಿದೆ. ಆದರೆ ಹಳೆ ಮೌಲ್ಯಗಳಿಗೆ ಕಟ್ಟುಬಿದ್ದ ಪ್ರತಿಗಾಮಿ ಶಕ್ತಿಗಳು ಬದಲಾವಣೆಯನ್ನು ವಿರೋಧಿಸುತ್ತವೆ. ಆಗ ಕೆಲವೊಮ್ಮೆ ಹಳೆ ಮತ್ತು ಹೊಸ ಮೌಲ್ಯಗಳ ನಡುವೆ ಸಂಘರ್ಷಗಳು ನಡೆಯುತ್ತವೆ. ಭಾರತದ ಸನ್ನಿವೇಶದಲ್ಲಿ ಇದನ್ನು ಸ್ಥೂಲವಾಗಿ ಮನುಸಂಹಿತೆ ಮತ್ತು ಸಂವಿಧಾನಗಳ ನಡುವಿನ ಸಂಘರ್ಷ ಎನ್ನಬಹುದು. ಮೇಲ್ಜಾತಿಗಳು ದಲಿತರ ಮೇಲೆ ನಡೆಸುವ ದೌರ್ಜನ್ಯ ಇದೇ ಸಂಘರ್ಷದ ಒಂದು ಭಾಗವಾಗಿದೆ. ಜಾತಿಸಂಕರ, ಧರ್ಮಸಂಕರದ ಹೆಸರಿನಲ್ಲಿ ಅಂತರ್ಜಾತೀಯ, ಅಂತರ್‌ಧರ್ಮೀಯ ಸಂಬಂಧಗಳನ್ನು ಹತ್ತಿಕ್ಕುವ ಪ್ರಯತ್ನಗಳು ಸಂಘರ್ಷದ ಇನ್ನೊಂದು ಮುಖ. ಈಗ ಅಂತರ್‌ಧರ್ಮೀಯ ಸಂಬಂಧಗಳನ್ನು ಹತ್ತಿಕ್ಕುವ ಪ್ರಯತ್ನವನ್ನಷ್ಟೇ ನೈತಿಕ ಪೊಲೀಸ್‌ಗಿರಿ ಎಂದು ಕರೆಯಲಾಗುತ್ತಿದೆ. ಆದರೆ ಅಂತರ್ಜಾತೀಯ ಸಂಬಂಧಗಳನ್ನು ಹತ್ತಿಕ್ಕುವುದೂ ನೈತಿಕ ಪೊಲೀಸ್‌ಗಿರಿಯೇ. ವಿಶಾಲ ಅರ್ಥದಲ್ಲಿ ಹೇಳುವುದಾದರೆ ನಿರ್ದಿಷ್ಟ ಗುಂಪು ಅಥವಾ ವ್ಯಕ್ತಿಗಳು ತಮ್ಮ ಮೂಗಿನ ನೇರದ ಸಂಪ್ರದಾಯ/ನೈತಿಕ ನಡವಳಿಕೆಗಳನ್ನು ಇತರರ ಮೇಲೆ ಹೇರಲು ಯತ್ನಿಸುವುದೇ ನೈತಿಕ ಪೊಲೀಸ್‌ಗಿರಿ.


ಬಹುಶಃ ಖಾಪ್ ಪಂಚಾಯತುಗಳು ಮತ್ತು ಮರ್ಯಾದಾ ಹತ್ಯೆಗಳ ವಿಚಾರ ತಿಳಿಯದವರು ಯಾರೂ



ಇಲ್ಲ. ಇವು ಪ್ರಧಾನವಾಗಿ ಗ್ರಾಮೀಣ ಪ್ರದೇಶಗಳಲ್ಲಿ ... ವ್ಯವಸ್ಥೆಯನ್ನು ಪೋಷಿಸಿ, ಮುಂದುವರಿಸಲು ಇ... ರಚನೆಗಳು. ಜಾತಿ ಜಾತಿಗಳ ನಡುವಿನ ವಿವಾಹ ಸಂಬಂ... ವಿಚಾರದಲ್ಲಿ ಕಾನೂನು ಕೈಗೆತ್ತಿಕೊಂಡು ಹಲ್ಲೆ ನಡೆಸು... ಖಾಪ್ ಪಂಚಾಯತುಗಳು ವಾಸ್ತವದಲ್ಲಿ ಸಂವಿ... ವಿರೋಧಿ ಸಂಸ್ಥೆಗಳು. ಇವುಗಳಿಗೆ ಸಾಂವಿಧಾನಿಕ ಮ... ಇಲ್ಲವಾದರೂ ರಾಜಕೀಯ ಪ್ರಭಾವದ ಪರಿಣಾಮ... ಅಸ್ತಿತ್ವದಲ್ಲಿವೆ.

ಖಾಪ್ ಪಂಚಾಯತುಗಳು ಜಾತಿಗೆ ಸಂಬಂಧಪ... ನೈತಿಕ ಪೊಲೀಸ್‌ಗಿರಿ ಮಾಡಿದರೆ ಧರ್ಮಕ್ಕೆ ಸಂಬಂಧ... ನೈತಿಕ ಪೊಲೀಸ್‌ಗಿರಿ ನಡೆಸುವವರು ಮತ... ಮೂಲಭೂತವಾದಿ ಸಂಘಸಂಸ್ಥೆಗಳು. ಇತ್ತೀಚಿನ ... ವರ್ಷಗಳಿಂದ ಇಂತಹ ಕೃತ್ಯಗಳ ಸಂಖ್ಯೆಯಲ್ಲಿ ... ಪ್ರಮಾಣದ ಹೆಚ್ಚಳ ಆಗಿರುವುದಕ್ಕೆ ಮತ... ಮೂಲಭೂತವಾದದ ಬೆಳವಣಿಗೆಯೆ ಕಾರಣ. ಈಗ ... ಸುದ್ದಿಯಲ್ಲಿರುವ 'ಲವ್ ಜಿಹಾದ್' ನಿರ್ದಿಷ್ಟವಾಗಿ ಹಿಂ... ಮುಸ್ಲಿಂ ಜೋಡಿಗಳ ವಿರುದ್ಧದ ನೈತಿಕ ಪೊಲೀಸ್...

ಗಂಡು ಹೆಣ್ಣು ಪಾರ್ಕಿನಲ್ಲೋ, ಹೋಟೆಲಿನ... ಸಮುದ್ರ ಕಿನಾರೆಯಲ್ಲೋ ಜೊತೆಯಾದಾಗ ಅ... ವಿರೋಧಿಸುವುದು ಅಥವಾ ಹಲ್ಲೆ ಮಾಡುವುದು... ಜೋಡಿಯ ಸಾಂವಿಧಾನಿಕ ಹಕ್ಕುಗಳನ್ನು ಉಲ್ಲಂಘಿಸಿ... ಜೋಡಿಯ ಸಾರ್ವಜನಿಕ ನಡವಳಿಕೆ ... ಅಸಭ್ಯವಿದ್ದಾಗಲಷ್ಟೆ ಕಾನೂನುಪಾಲಕರು ಹಸ್ತ... ಮಾಡಬಹುದಾಗಿದೆ. ಆದರೆ ನಾವಿಂದು ನೋಡುತ್ತಿರು... ಅಂತರ್‌ಧರ್ಮೀಯ ಜೋಡಿಗಳು ಜೊತೆಯಾಗಿರುವು... ಪರಸ್ಪರ ಮಾತಾಡುವುದನ್ನು ಹೊಂಚುಹಾಕಿ ಗಮನಿ... ಸಂಘಟನೆಗಳು ತಕ್ಷಣ ಪೊಲೀಸರಿಗೆ ದೂರು ಕೊ...



# 'ಲವ್ ಜಿಹಾದ್' ಸುಳ್ಳನ್ನು ಸತ್ಯವಾಗಿಸಲು ಹೊರಟವರು

21ನೇ ಶತಮಾನ ಪ್ರಾರಂಭವಾಗುತ್ತಿದ್ದಂತೆ ಕನ್ನಡ ಭಾಷೆಗೆ ಕೆಲವು ಹೊಸ ಶಬ್ದಗಳು ಸೇರಿಕೊಂಡಿವೆ. ಅವುಗಳಲ್ಲಿ 'ಲವ್ ಜಿಹಾದ್' ಮತ್ತು 'ನೈತಿಕ ಪೊಲೀಸ್‌ಗಿರಿ' ಎಂಬ ಶಬ್ದಗಳು ಬಹಳ ಮುಖ್ಯವಾಗಿದ್ದು ಇವುಗಳು ಕನ್ನಡ ಭಾಷೆಯಲ್ಲಿ ಸಲೀಸಾಗಿ ಬೆರೆತುಕೊಂಡಿವೆ. ಈ ಶಬ್ದಗಳನ್ನು ಸೃಷ್ಟಿಸಿದವರು ಯಾರೆಂದು ತಿಳಿಯದಿದ್ದರೂ ಕೆಲವು ರಾಜಕಾರಣಿಗಳು ಹಾಗೂ ಕೋಮುವಾದಿಗಳು ಈ ಶಬ್ದಗಳನ್ನು ಆಗಾಗ ಬಳಸಿಕೊಳ್ಳುತ್ತಲೇ ಇದ್ದಾರೆ. 'ಲವ್ ಜಿಹಾದ್' ಎಂಬುದು ಸಂಘ ಪರಿವಾರದ 'ಟ್ರೇಡ್ ಮಾರ್ಕ್' ಎಂಬಂತಾಗಿದೆ.

ಈ ಕುರಿತು ಒಂದು ವಿವರಣೆ ನೀಡಬೇಕಾಗಿದೆ. 'ಲವ್ ಜಿಹಾದ್' ಎಂಬುದಕ್ಕೆ ಸಂಘ ಪರಿವಾರ ಈ ಕೆಳಗಿನಂತೆ ವಿವರಣೆ ನೀಡುತ್ತದೆ.

'ಹಿಂದೂ ಹೆಣ್ಣು ಮಕ್ಕಳೊಡನೆ ಮುಸ್ಲಿಂ ಯುವಕರು ಪ್ರೀತಿಯ ನಾಟಕವಾಡಿ ಅವರನ್ನು ಮತಾಂತರಗೊಳಿಸಿ ಅವರನ್ನು ನಿಕಾಹ್ ಮಾಡಿಕೊಂಡು ಕೆಲವು ಸಮಯ ಅವರನ್ನು ಉಪಯೋಗಿಸಿ ಬಳಿಕ ಬೀದಿಗೆಸೆಯುತ್ತಾರೆ. ಹಿಂದೂ ಹೆಣ್ಣು ಮಕ್ಕಳನ್ನು 'ಲವ್ ಜಿಹಾದ್' ಎಂಬ ಹೆಸರಿನಲ್ಲಿ ಮತಾಂತರಗೊಳಿಸಿ ನಾಶ ಮಾಡುತ್ತಾರೆ' ಎಂದು ಸಂಘ ಪರಿವಾರ ಮುಸ್ಲಿಮರ ಮೇಲೆ ಆರೋಪ ಮಾಡುತ್ತಲೇ ಇರುತ್ತದೆ. ಆದರೆ ಈ ಆರೋಪಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರು ಯಾವುದೇ ರೀತಿಯ



ಪ್ರತಿಕ್ರಿಯೆಯನ್ನೂ ನೀಡದೆ ಸಣ್ಣ ಸುಮ್ಮನಾಗುತ...

ಸಂಘ ಪರಿವಾರದ ಈ ವಿವರಣೆಯ ಸತ್ಯಾಸತ್ಯ... ಯಾರಾದರೂ ಪರೀಕ್ಷಿಸಿದ್ದಾರೆಯೇ? ನಾನು ಮಂಗಳ... ರತೊಡಗಿ 60 ವರ್ಷಗಳು ಕಳೆದಿವೆ. ಇಲ್ಲಿ ... ಸುಮಾರು 20, 25 ಮನೆಗಳಲ್ಲಾದರೂ ಮುಸ್ಲಿಂ ಯ... ಹಿಂದೂ ಹುಡುಗಿಯರನ್ನು ಪ್ರೀತಿಸಿ ಮದುವೆಯಾಗಿ... ಕೊಂಡು ಬಂದಿದ್ದಾರೆ. ಶ್ರೀಮಂತರ ಮನೆಗಳಲ್ಲಿ, ... ವರ್ಗ ಅಥವಾ ಬಡ ಕುಟುಂಬಗಳಲ್ಲಿ ಕೂಡಾ ... ಹೆಣ್ಣು ಮಕ್ಕಳಿದ್ದಾರೆ. ಮದುವೆ ಹಾಗೂ ಇನ್ನಿತರ ಸಮಾ... ಗಳಲ್ಲಿ ಈ ಹೆಣ್ಣುಮಕ್ಕಳು ನನಗೆ ಕಾಣಸಿಗುತ್ತಾರೆ... ಬಂದ ಯಾರನ್ನೂ ಬೀದಿಗೆಸೆದ ಉದಾಹರಣೆ... ದೊರೆತಿಲ್ಲ. ಎಲ್ಲರೂ ಸುಖವಾಗಿ, ತಾವು ಸೇರಿದ ... ವರೊಡನೆ ಹೊಂದಿಕೊಂಡು ಬದುಕುತ್ತಿದ್ದಾರೆ. ... ಮಕ್ಕಳೂ ಕೂಡಾ ಡಾಕ್ಟರೂ, ಇಂಜಿನಿಯರು... ಶ್ರೀಮಂತ ಮನೆತನದ ಹೆಣ್ಣನ್ನೋ ಗಂಡನ್ನೋ ... ಯಾಗಿ ಉತ್ತಮ ರೀತಿಯಲ್ಲಿ ಬದುಕುತ್ತಿದ್ದಾರೆ. ... ಗಂಡು ಮಕ್ಕಳು ಕರೆದುಕೊಂಡು ಬಂದ ಆ... ಮಕ್ಕಳನ್ನು ಅವರ ತಾಯಂದಿರು ಚೆನ್ನಾಗಿ ನೋಡಿಕೊ... ಒಮ್ಮೆ ಬಂದ ಬಳಿಕ ಅವರನ್ನು ಅನ್ಯರೆಂದೂ, ಹೊ... ಬಂದವರೆಂದೂ ನೋಡುವ ಪದ್ಧತಿ ಇಲ್ಲವೇ ಇ... ಗಂಡನ ಕುಟುಂಬದಲ್ಲಿ, ನನ್ನ ಕುಟುಂಬದಲಿ ... ಹೀಗೆ ಬಂದವರಿದ್ದಾರೆ. ಅವರೆಲ್ಲರೂ




...ಕ ಜೋಡಿಯನ್ನು ಬೇರ್ಪಡಿಸುವ ವಿದ್ಯಮಾನ ...ಯುತ್ತಿದೆ. ಇದು ಬಹಳ ಸ್ಪಷ್ಟವಾಗಿ ಸಂವಿಧಾನಬಾಹಿರ ... ಯಾಕೆಂದರೆ ಇಲ್ಲಿ ಸಾರ್ವಜನಿಕ ಸುವ್ಯವಸ್ಥೆ ಮತ್ತು ...ಡವಳಿಕೆ ಅಥವಾ ಸದಾಚಾರಗಳ (public order, ...ality) ಉಲ್ಲಂಘನೆ ಆಗಿಲ್ಲ. ನಿಜವಾಗಿ ಇಂತಹ ... ದೂರು ಕೊಡುವವರ ವಿರುದ್ಧ ಕಾನೂನುಕ್ರಮ ...ಳ್ಳಬೇಕು. ಅದರ ಬದಲು ಬಲಿಪಶುಗಳಿಗೆ, ಅವರ ...ಷರಿಗೆ ಪೀಡನೆ ನೀಡಿ ಅವರನ್ನೇ ಅಪರಾಧಿಗಳೆಂಬಂತೆ ...ಕೊಳ್ಳುವುದು ಅಕ್ಷಮ್ಯ. ಇದು ಸಂವಿಧಾನದ ತತ್ವಗಳಿಗೆ ...ದ್ಧ ಮಾತ್ರವಲ್ಲ ಪ್ರತಿಗಾಮಿ ನಿಲುವು ಕೂಡ ಆಗಿದೆ. ... ಸಮಾಜಕ್ಕೆ ವಿಶೇಷವಾಗಿ ಯುವಜನಾಂಗಕ್ಕೆ ತಪ್ಪು ...ಶ ರವಾನಿಸುತ್ತದೆ. ನಮ್ಮ ಕಾನೂನು ರಚನಾಕಾರರು ...ಗ್ಗೆ ಗಂಭೀರವಾಗಿ ಯೋಚಿಸಿ ನೈತಿಕ ಪೊಲೀಸ್‌ಗಿರಿಗೆ ...ಧಿಸಿದಂತೆ ಹೆಚ್ಚುವರಿ ಶಿಕ್ಷೆಗಳಿಗೂ (Exemplary ...ishment) ಅವಕಾಶ ಇರುವಂತಹ ಹೊಸ ಐಪಿಸಿ ...ಮವೊಂದನ್ನು ಯಾಕೆ ರೂಪಿಸಬಾರದು?

...ತಿಕ ಪೊಲೀಸ್‌ಗಿರಿ ಕೃತ್ಯಗಳು ಸ್ಪಷ್ಟವಾಗಿ ...ನುಬಾಹಿರ ಯಾಕೆಂದರೆ ಅದಕ್ಕೆ ಸಾಂವಿಧಾನಿಕ ಮನ್ನಣೆ ... ಸಂವಿಧಾನ ಎಲ್ಲಿಯೂ ಅಂತರ್‌ಧರ್ಮೀಯ, ...ರ್ಜಾತೀಯ ವಿವಾಹ ಸಂಬಂಧಗಳು ಅನೈತಿಕ ...ವುದಿಲ್ಲ. ವಾಸ್ತವವಾಗಿ ಸಂವಿಧಾನದ ವಿಧಿ 16 ...ಒಬ್ಬ ಭಾರತದ ಪ್ರಜೆಗೆ ದೇಶದ ಯಾವುದೇ ಭಾಗಕ್ಕೆ ... ಯಾರ ಜೊತೆಗಾದರೂ ಜೀವಿಸುವ ಹಕ್ಕನ್ನು ...ತ್ತದೆ. ಒಂದು ಗಂಡು, ಒಂದು ಹೆಣ್ಣು ...ವೆಯಾಗದಿದ್ದರೂ ಒಟ್ಟಿಗೆ ಇರಬಹುದು. ಸಮಾಜ ... ಅನೈತಿಕವೆಂದು ಭಾವಿಸಲೂಬಹುದು. ಆದರೆ ...ಕಾನೂನುಬಾಹಿರ ಅಲ್ಲ. ಕಾನೂನು ಬೇರೆ. ನೈತಿಕತೆ ... (ಪಾಯಲ್ ಶರ್ಮ ವರ್ಸಸ್ ನಾರಿ ನಿಕೇತನ್ ...ತ್ರಿ ವಿಹಾರ್ ಆಗ್ರಾ. ಎಐಆರ್ 2001).

... ಮತ್ತು ನೈತಿಕ ಪೊಲೀಸ್‌ಗಿರಿಯನ್ನು ಮಟ್ಟಹಾಕಲು ...ಗುತ್ತಿದೆ. ಏಕೆಂದರೆ ಅದಕ್ಕೆ ದೊಡ್ಡ ಪ್ರಮಾಣದಲ್ಲಿ ...ಧೀಯ ರಾಜಕೀಯ ಪಕ್ಷಗಳ ಬೆಂಬಲವಿದೆ. ಒಂದು ...ಲ್ಲಿ ಸಮಾಜವಾದಿ ಎಂದು ಕರೆಸಿಕೊಳ್ಳುತ್ತಿದ್ದ ಕಾಂಗ್ರೆಸ್ ...ೂಡ ಇಂಥಾ ಹಲವಾರು ಮೃದು ಹಿಂದೂತ್ವವಾದಿ, ...ನಾಯವಾದಿ 'ಸಂಸ್ಕೃತಿ ರಕ್ಷಕರ'ನ್ನು ತನ್ನ ಬಗಲಲ್ಲಿ ...ಟ್ಟುಕೊಂಡಿರುವ ತೆರೆದ ರಹಸ್ಯವನ್ನು ಇದೀಗ 'ಕಿಸ್ ...ಲವ್' ಪ್ರತಿಭಟನಾ ಕಾರ್ಯಕ್ರಮ ಸಂಪೂರ್ಣವಾಗಿ ...ಬಯಲುಗೊಳಿಸಿದೆ. ಒಂದರ್ಥದಲ್ಲಿ ನೈತಿಕ ...ಸ್‌ಗಿರಿ ಈ ಮಟ್ಟಕ್ಕೆ ಬೆಳೆದು ನಿಲ್ಲಲು ಪರೋಕ್ಷವಾಗಿ ...ವರೇ ಕಾರಣ ಎನ್ನಬಹುದು. 'ಕಿಸ್ ಆಫ್ ಲವ್' ... ಸಮುದ್ರ ಮಂಥನದ ಮೂಲಕವಾದರೂ ಅಮೃತ, ...ಹಲಗಳು ಬೇರೆಬೇರೆಯಾಗುವುವೇ?

● ಸುರೇಶ್ ಭಟ್ ಬಾಕ್ರಬೈಲ್

# ಮೋದಿ ಸರ್ಕಾರದ ದ್ವಂದ್ವ ನೀತಿ




ನಮ್ಮ ದೇಶದಲ್ಲಿ ಸರ್ಕಾರಿ ಆಂದೋಲನಗಳಿಗೇನೂ ಬರವಿಲ್ಲ. ನಿರ್ದಿಷ್ಟವಾಗಿ ಸ್ವಚ್ಛತೆಯ ವಿಷಯಕ್ಕೆ ಬಂದರೆ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ 1999ರಷ್ಟು ಹಿಂದೆಯೇ ಸಂಪೂರ್ಣ ಸ್ವಚ್ಛತಾ ಆಂದೋಲನವೊಂದನ್ನು ಆರಂಭಿಸಿರುವುದನ್ನು ಗಮನಿಸಬಹುದು. ಮುಂದೆ ಮನಮೋಹನ ಸಿಂಗ್ ಸರ್ಕಾರ ಇದನ್ನೇ ನಿರ್ಮಲ ಭಾರತ ಅಭಿಯಾನ ಎಂದು ಮರುನಾಮಕರಣ ಮಾಡಿ 2012ರಲ್ಲಿ ಮತ್ತೊಮ್ಮೆ ಶುರು ಮಾಡಿದೆ. ಸಾಧನೆ ಪ್ರಶ್ನಾರ್ಹವಿದ್ದರೂ ಕೋಟಿಗಟ್ಟಲೆ ದುಡ್ಡು ಹರಿದುಹೋಗಿರುವುದಂತೂ ನಿಜ.

ಈಗ 2014ರಲ್ಲಿ ಮತ್ತೊಂದು ಸ್ವಚ್ಛತಾ ಪ್ರಹಸನ ಪ್ರಾರಂಭವಾಗಿದೆ. ಗುಜರಾತನ್ನು ಸ್ವಚ್ಛಗೊಳಿಸಲಾರದವರು ಮಹಾತ್ಮ ಗಾಂಧಿಯ ಜನ್ಮದಿನವನ್ನು ದುರ್ಬಳಕೆ ಮಾಡಿಕೊಂಡು ದೇಶ ಸ್ವಚ್ಛಗೊಳಿಸುವ ನಾಟಕವಾಡುತ್ತಿದ್ದಾರೆ. ಇವರ ಶೇಕಡಾ 74ರಷ್ಟು ಖಾತೆಗಳಲ್ಲಿ ನಯಾಪೈಸೆಯೂ ಇರದ ಜನಧನ ಯೋಜನೆ, ಕಸ ತಂದು ಸುರಿದು ಅದನ್ನು ಗುಡಿಸಿದಂತೆ ನಟಿಸುವ ಸ್ವಚ್ಛತಾ ಆಂದೋಲನಗಳಂಥಾ ಜನಮರುಳು ಕಾರ್ಯಕ್ರಮಗಳಿಗೆ ಬಾಲಂಗೋಚಿ ಮಾಧ್ಯಮಗಳ ಮೂಲಕ ಸಿಗುತ್ತಿರುವ ಪುಗಸಟ್ಟೆ ಪ್ರಚಾರ ಜನಸಾಮಾನ್ಯರನ್ನು ಸತ್ಯಸಂಗತಿಗಳಿಂದ ಮತ್ತಷ್ಟು ದೂರ ಒಯ್ಯುವಲ್ಲಿ ಸಹಕಾರಿಯಾಗುತ್ತಿವೆ. ಕೈಯಲ್ಲಿ ಭಗವದ್ಗೀತೆ ಬಾಯಲ್ಲಿ ಗುಜರಾತ್ ಮಾದರಿ ಅಭಿವೃದ್ಧಿ ಇದು ಇವತ್ತಿನ ಮೋದಿ ಸರ್ಕಾರದ ಬ್ರಾಂಡ್ ಇಮೇಜು. ಈ ಗುಜರಾತ್ ಮಾದರಿ ಅಭಿವೃದ್ಧಿ, ಸ್ವಚ್ಛತಾ ಆಂದೋಲನ ಇತ್ಯಾದಿಗಳ ಅಸಲಿಯತ್ತು ಏನೆಂದು ನೋಡಬೇಕಿದ್ದರೆ ಮಹಾಲೆಕ್ಕ ಪರಿಶೋಧಕರು ನೀಡಿರುವ ಇತ್ತೀಚಿನ ವರದಿಯನ್ನೋದಬೇಕು. ನೆನಪಿರಲಿ, ಮನಮೋಹನ ಸಿಂಗ್ ಸರ್ಕಾರದ ಭ್ರಷ್ಟಾಚಾರವನ್ನು ಬೀದಿಬೀದಿಗಳಲ್ಲಿ ಪ್ರಚುರಪಡಿಸಿ ಬಿಜೆಪಿ ಅಂತಿಮವಾಗಿ ಜನರ ವೋಟು ಗಳಿಸುವಲ್ಲಿ ಯಶಸ್ವಿಯಾದುದು ಇದೇ ಮಹಾಲೆಕ್ಕ ಪರಿಶೋಧಕರ ಇತರ ವರದಿಗಳನ್ನು ಆಧರಿಸಿ.

2008-13ರ ಅವಧಿಯಲ್ಲಿ ಗುಜರಾತಿನ ನೈಜ ಸಾಧನೆಗಳೇನೆಂಬುದನ್ನು ಬಿಚ್ಚಿಡುವ ಈ ಸಿಎಜಿ ವರದಿಯನ್ನು ವಿಧಾನಸಭೆಯ ಕಲಾಪಗಳ ಕೊನೆಯಲ್ಲಿ ನವಂಬರ್ 11, 2014ರಂದು ಸದನದ ಮುಂದಿಡಲಾಯಿತು. ನಮಗೆಲ್ಲರಿಗೂ ಗೊತ್ತಿರುವಂತೆ 2008-13ರ ಅವಧಿಯಲ್ಲಿ ಗುಜರಾತಿನ ಮುಖ್ಯಮಂತ್ರಿಯಾಗಿದ್ದವನು ನರೇಂದ್ರ ಮೋದಿ. ಇದೇ ಅವಧಿಯಲ್ಲಿ ನಡೆದ ಗುಜರಾತ್ ಸ್ವಚ್ಛತಾ ಆಂದೋಲನ ಸುಮಾರು 5000 ಅಂಗನವಾಡಿ ಕೇಂದ್ರಗಳು ಮತ್ತು 4000 ಶಾಲೆಗಳ ಸಮೀಪವೂ ಸುಳಿದಿಲ್ಲವೆನ್ನುತ್ತದೆ ಸಿಎಜಿ ವರದಿ! ಇವುಗಳ ಪೈಕಿ ಒಂದರಲ್ಲಾದರೂ ಶೌಚಾಲಯ ಇಲ್ಲ! 2012ರ ಒಳಗಾಗಿ ಎಲ್ಲಾ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಶೌಚಾಲಯಗಳನ್ನು ಕಟ್ಟಿಸಬೇಕೆಂದು ಸುಪ್ರೀಂಕೋರ್ಟಿನ ಆದೇಶವೇ ಇದ್ದರೂ ಅದಕ್ಕೂ ಕ್ಯಾರೇ ಅನ್ನಲಾಗಿಲ್ಲ.

ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವ್ಯವಸ್ಥಿತ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಆದರೆ ಗುಜರಾತಿನಲ್ಲಿ ಇದಕ್ಕೆ ಬೇಕಿದ್ದ ಆರಂಭಿಕ ಸಮೀಕ್ಷೆಗಳನ್ನೇ ನಡೆಸಲಾಗಿಲ್ಲ. ಸ್ವಚ್ಛತಾ ಆಂದೋಲನಕ್ಕೆ ಬೇಕಾದಷ್ಟು ಅನುದಾನ ಲಭ್ಯವಿದ್ದರೂ ವ್ಯಯಮಾಡಿರುವುದು ಒಟ್ಟು ಮೊತ್ತದ ಶೇಕಡಾ 43ರಿಂದ 60ರಷ್ಟು ಹಣವನ್ನು ಮಾತ್ರ.

ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯಡಿ ಪ್ರಶಸ್ತಿ ವಿಜೇತ ಗ್ರಾಮ ಪಂಚಾಯತುಗಳಿಗೆಂದು ಕೇಂದ್ರ ಸರ್ಕಾರ ನೀಡುವ ಬಹುಮಾನದ ಹಣ ಬಂದಿತ್ತಾದರೂ ಅದನ್ನು ಆಯಾ ಪಂಚಾಯತುಗಳಿಗೆ ವಿತರಿಸಿಯೇ ಇಲ್ಲ.

ಸಿಎಜಿ ಕಂಡುಕೊಂಡಿರುವ ಪ್ರಕಾರ ಸ್ವಚ್ಛತಾ ಆಂದೋಲನದ ಅನುಷ್ಠಾನದಲ್ಲಿ ಬರೀ 46% ಪ್ರಗತಿಯಾಗಿದೆ. ಆದರೆ ಇಲಾಖೆಯ ದಾಖಲೆಗಳಲ್ಲಿ ಇದಕ್ಕಿಂತ ಹೆಚ್ಚು ಪ್ರಗತಿಯನ್ನು ಕಾಣಿಸಿರುವುದು ಸ್ಪಷ್ಟವಾಗಿ ಅಂಕಿಅಂಶಗಳೊಂದಿಗೆ ಆಟವಾಡಿರುವುದನ್ನು ತೋರಿಸುತ್ತದೆ ಎನ್ನುತ್ತದೆ ಸಿಎಜಿ ವರದಿ.




2.8 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾದ ಶೌಚಾಲಯಗಳ ನಿರ್ಮಾಣ ಕಳಪೆ ಮಟ್ಟದ್ದಾಗಿದೆಯಲ್ಲದೆ ಇಂಗುಗುಂಡಿ ಕೂಡ ಕಟ್ಟದಿರುವುದರಿಂದ ಶೌಚಾಲಯಗಳು ಇದ್ದೂ ಇಲ್ಲದಂತಾಗಿವೆ.

ಸರ್ಕಾರದ ಪ್ರಗತಿ ಪರಿಶೀಲನಾ ವರದಿಗಳಲ್ಲಿ ಹೇಳಲಾಗಿರುವ ಶೌಚಾಲಯ ನಿರ್ಮಾಣದ ಗುರಿಗಳನ್ನು ನಿಗದಿಪಡಿಸಿರುವುದು ಸ್ವಚ್ಛತಾ ಆಂದೋಲನಕ್ಕೆಂದು ಒಟ್ಟು ಬಿಡುಗಡೆಯಾದ ಹಣವನ್ನು ಪರಿಗಣಿಸಿ. ಆದರೆ ವಾಸ್ತವವಾಗಿ ಕಟ್ಟಿಸಿದ ಶೌಚಾಲಯಗಳ ಸಂಖ್ಯೆ ಇದಕ್ಕಿಂತ ಕಡಮೆ. ಕಾರಣವೇನೆಂದರೆ ಸ್ವಚ್ಛತಾ ಆಂದೋಲನಕ್ಕಾಗಿದ್ದ ಹಣವನ್ನು ಭಾಗಶಃ ಬೇರೆಡೆಗೆ ವರ್ಗಾಯಿಸಲಾಗಿದೆ. ಅಂದು ಮುಖ್ಯಮಂತ್ರಿ ಮೋದಿ ಸ್ವಪ್ರಚಾರಕ್ಕೋಸ್ಕರ ಅನೇಕ 'ಉತ್ಸವ', 'ಸಮ್ಮೇಳನ' ಇತ್ಯಾದಿಗಳನ್ನು ಆಯೋಜಿಸುತ್ತಿದ್ದ ವಿಚಾರ ಜನಜನಿತವಿದೆ. ಇಂತಹ ಒಂದು ಕಾರ್ಯಕ್ರಮವಾದ ಕೃಷಿ ಮಹೋತ್ಸವಕ್ಕೆ ಜನರನ್ನು ಕರೆತರಲು ಬಾಡಿಗೆ ಬಸ್ಸುಗಳ ಏರ್ಪಾಟು ಮಾಡಲಾಗಿತ್ತು. ಇದನ್ನೆಲ್ಲ ಸ್ವಚ್ಛತಾ ಆಂದೋಲನದಡಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲು ಖರ್ಚಾದ ಹಣವೆಂದು ತೋರಿಸಿರುವುದರತ್ತ ಸಿಎಜಿ ವರದಿ ಬೆಟ್ಟುಮಾಡುತ್ತದೆ.

ಮೋದಿ ಸರ್ಕಾರದ ಮಾತುಗಳನ್ನು ಒಂದು ಚಿಟಿಕೆ ಉಪ್ಪಿನೊಂದಿಗೆ ಸ್ವೀಕರಿಸಬೇಕು ಎನ್ನುವುದಕ್ಕೆ ಗುಜರಾತಿನಲ್ಲಿ ಮಲಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನಗೊಳಿಸಲಾಗಿದೆ ಎಂಬ ಘೋಷಣೆಯೆ ಸಾಕ್ಷಿ. 2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಈಗಲೂ ಮಲಹೊರುವ ಪದ್ಧತಿ ಜಾರಿಯಲ್ಲಿದೆ ಎನ್ನುತ್ತದೆ ಸಿಎಜಿ ವರದಿ. 2013ರ ಮಾರ್ಚ್ 31ರ ತನಕ ಗುಜರಾತಿನ ಗ್ರಾಮೀಣ ಪ್ರದೇಶಗಳಲ್ಲಿ ಮನುಷ್ಯರು ಮಲಹೊರುವ 1408 ಪ್ರಕರಣಗಳನ್ನೂ, ಪ್ರಾಣಿಗಳಿಂದ ಮಲಹೊರಿಸುವ 2593 ಪ್ರಕರಣಗಳನ್ನೂ ದಾಖಲಿಸಲಾಗಿದೆ.

ಇಂದಿರಾ ಆವಾಸ್ ಯೋಜನೆಯ ಅಡಿಯಲ್ಲಿ ಮನೆಗಳ ನಿರ್ಮಾಣಕ್ಕೆ ಎರಡು ವರ್ಷಗಳ ಗರಿಷ್ಠ ಮಿತಿಯನ್ನು ವಿಧಿಸಲಾಗಿದೆ. ಯೋಜನೆಯ ಅನುಷ್ಠಾನವನ್ನು ಪರಿಶೀಲಿಸಲು ಕೆಲವು ತಾಲೂಕುಗಳನ್ನು ಆರಿಸಿದ ಸಿಎಜಿ, ಅಲ್ಲಿ 2008-11ರ ಅವಧಿಯಲ್ಲಿ 85,063 ಮನೆಗಳ ಗುರಿ ಇದ್ದರೂ 16,722 ಮನೆಗಳ ಕೆಲಸ ಇನ್ನೂ ಪೂರ್ತಿಯಾಗಿ ಮುಗಿಯದಿರುವುದನ್ನು ಪತ್ತೆಮಾಡಿದೆ. ಸಿಎಜಿ ಪ್ರಕಾರ ಇಲಾಖೆ ನೀಡಿರುವ ಮಾಹಿತಿಯಲ್ಲಿ ನಿರ್ಮಾಣ ಪೂರ್ತಿಯಾಗದ ಮನೆಗಳನ್ನು ಪೂರ್ತಿಯಾದ ಹಾಗೆ ತೋರಿಸಲಾಗಿದೆ.

ಸರ್ವ ಶಿಕ್ಷಣ ಅಭಿಯಾನಕ್ಕೆ ಕೇಂದ್ರ ಸರ್ಕಾರ ಹಣಕಾಸು ಒದಗಿಸುತ್ತಿಲ್ಲವೆಂದು ಮೋದಿ 2013ರಲ್ಲಿ ಬೊಬ್ಬೆ ಹಾಕಿದ್ದ. ಆದರೆ ವಾಸ್ತವಾಂಶ ಏನೆಂದರೆ ಬಂದಿದ್ದ ಅನುದಾನದ ಮೊತ್ತವನ್ನು ಗುಜರಾತಿನ ಪ್ರಾಥಮಿಕ ಶಿಕ್ಷಣ ಮಂಡಳಿ ಬಳಸಿಯೇ ಇರದ ಕಾರಣಕ್ಕಾಗಿ ಮೊತ್ತವನ್ನು ಕಡಿತಗೊಳಿಸಲಾಗಿತ್ತು. ಕೇಂದ್ರದ 13ನೆ ಹಣಕಾಸು ಆಯೋಗ ಗುರುತಿಸಿರುವ ಹಾಗೆ "ಶಿಕ್ಷಣಕ್ಕೆ ಸಂಬಂಧಿಸಿದಂತೆ ಗುಜರಾತ್ ಸರ್ಕಾರದ ದಾಖಲೆಗಳು ನಂಬಲರ್ಹವಲ್ಲ ಮಾತ್ರವಲ್ಲ ಅಂಕಿಅಂಶಗಳನ್ನು ಹಿಗ್ಗಿಸಲಾಗಿದೆ. ಗುಜರಾತಿನ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಹಕ್ಕಿನಿಂದ ವಂಚಿತರಾಗಿದ್ದಾರೆ". ಹಾಗಾಗಿ ಆಯೋಗದ ನಿಯಮಗಳನ್ನು ಪಾಲಿಸದಿರುವ ಕಾರಣಕ್ಕೆ 296.34 ಕೋಟಿಯಷ್ಟು ಸಹಾಯಧನವನ್ನು ಕಡಿತಗೊಳಿಸಲಾಯಿತು.

ಗುಜರಾತಿನಲ್ಲಿ 2008-13ರ ಸಾಲಿನಲ್ಲಿ 57 ಸರ್ಕಾರಿ ಲೋಯರ್ ಪ್ರೈಮರಿ ಶಾಲೆಗಳಲ್ಲಿ ಶಿಕ್ಷಕರೇ ಇರಲಿಲ್ಲ. ಇನ್ನು ಏಕಶಿಕ್ಷಕ ಶಾಲೆಗಳ ಸಂಖ್ಯೆ 383ರಷ್ಟಿತ್ತು. ಹೈಯರ್ ಪ್ರೈಮರಿ ಶಾಲೆಗಳ ಪೈಕಿ 223ರಲ್ಲಿ ಶಿಕ್ಷಕರೇ ಇಲ್ಲವಾದರೆ 678 ಶಾಲೆಗಳಲ್ಲಿದ್ದುದು ಒಬ್ಬನೇ ಶಿಕ್ಷಕ. ಸರ್ಕಾರಿ ಶಾಲೆಗಳಿಗೆ ಒಟ್ಟು 9262 ಮುಖ್ಯೋಪಾಧ್ಯಾಯರ ಅವಶ್ಯಕತೆ ಇದ್ದರೂ 4262 ಹುದ್ದೆಗಳು ಇನ್ನೂ ಖಾಲಿ ಬಿದ್ದಿದ್ದವು. ಹೀಗೆ ಸರ್ಕಾರಿ ಶಾಲೆಗಳ ಬಗ್ಗೆ ತೋರಿದ ಅಸಡ್ಡೆಯ ಪರಿಣಾಮವಾಗಿ ಅನುದಾನರಹಿತ ಖಾಸಗಿ ಶಾಲೆಗಳ ಸಂಖ್ಯೆಯಲ್ಲಿ ಶೇಕಡಾ 55.87ರಷ್ಟು ಅಭಿವೃದ್ಧಿಯಾಗಿದೆ.

ಪ್ರಸ್ತುತ ಸಿಎಜಿ ವರದಿಯನ್ನು ರಾಜ್ಯ ಸರ್ಕಾರಕ್ಕೆ ಆಗಸ್ಟ್ 2013ರಷ್ಟು ಹಿಂದೆಯೆ ಕಳುಹಿಸಲಾಗಿದೆ. ಆದರೂ ಮಾರ್ಚ್ 2014ರ ತನಕವೂ ಸರ್ಕಾರ ಉತ್ತರಿಸುವ ಗೋಜಿಗೆ ಹೋಗಿಲ್ಲ. ಇದರರ್ಥ ಮೋದಿ ಆಡಳಿತವನ್ನು ಟೀಕಿಸುವ ಸಿಎಜಿ ವರದಿಗಳನ್ನು ಸರ್ಕಾರ ನಗಣ್ಯ ಮಾಡಿದ್ದಷ್ಟೆ ಅಲ್ಲ ಉತ್ತರಿಸುವಲ್ಲಿಯೂ ತುಂಬಾ ವಿಳಂಬ ಮಾಡಿದೆ. ಪರಿಣಾಮವಾಗಿ ಸಿಎಜಿ ಪರಿಶ್ರಮವೆಲ್ಲ ನೀರಲ್ಲಿ ಹೋಮ ಮಾಡಿದಂತಾಗಿದೆ. ಮೋದಿ ಸರ್ಕಾರದ ದ್ವಂದ್ವ ನೀತಿಗೆ ಇದಕ್ಕಿಂತ ಉತ್ತಮ ನಿದರ್ಶನ ಇನ್ನೊಂದಿಲ್ಲ.

(ಆಧಾರ: ಔಟ್‌ಲುಕ್)

...ಬಗಳಿಂದಾಗಲಿ ಸಮಾಜದಿಂದಾಗಲಿ ಯಾವುದೇ ...ಡೆಗಳಿಲ್ಲದೆ ಸುಖವಾಗಿ ಜೀವನ ಸಾಗಿಸುತ್ತಿದ್ದಾರೆ. ...ರು ಮಹಿಳೆಯರನ್ನು ಕೆಲವು ಮೂಲಭೂತವಾದಿ ...ಗಳು ತಮ್ಮೊಳಗೆಳೆದುಕೊಂಡು ಅವರಿಂದ ಇತರ ... ಮಹಿಳೆಯರಿಗೆ 'ದೀನ್' (ಧರ್ಮ) ಕಲಿಸಿಕೊಡಲು ... ಮಾಡಿಕೊಟ್ಟಿದ್ದಾರೆ!


...ಸ್ಲಿಂ ಯುವಕರು ಈ ರೀತಿ ಬೇರೆ ಹೆಣ್ಣುಮಕ್ಕಳನ್ನು ...ಕೊಂಡು ಬರುವುದರಿಂದ ಮುಸ್ಲಿಂ ಹೆಣ್ಣು ಮಕ್ಕಳಿಗೆ ...ಷಕ್ಕೆ ಕಷ್ಟವಾಗುತ್ತಿದೆ. ಮುಸ್ಲಿಂ ಹೆಣ್ಣು ಮಕ್ಕಳಿಗೆ ... ಬೇಕಾದಂತೆ ಪ್ರೇಮ ವಿವಾಹ ಮಾಡಿಕೊಳ್ಳುವ ...ಶವೂ ಇಲ್ಲ. ಅವರಿಗೆ ಮನೆಯಿಂದ ಹೊರಗಡಿ ...ಡಬೇಕಾದರೆ ನೂರು ನಿರ್ಬಂಧಗಳು. ಅವರ ಮುಖ ... ಕಾಣದಂತೆ ಕಪ್ಪು ಬಟ್ಟೆಯಲ್ಲಿ ಮುಚ್ಚಿಕೊಂಡ ...ಮ್ಮಳನ್ನು ನಮ್ಮ ಹುಡುಗರು ಹಿಂಬಾಲಿಸುವುದು ...ಸವೆಂದೇ ಹೇಳಬಹುದು. ಹೀಗಾಗಿ ಇಂತಹ ... ವಿವಾಹದಿಂದ ಮುಸ್ಲಿಂ ಹೆಣ್ಣು ಮಕ್ಕಳಿಗೇ ...ಬುದು ನನ್ನ ಅಭಿಪ್ರಾಯ.

...ವ್ ಜಿಹಾದ್' ಎಂಬ ಹೆಸರಿನಲ್ಲಿ ಈವರೆಗೆ ಒಬ್ಬಳೆ ...ಹಿಳೆಯಾದರೂ ಬೀದಿಗೆಸೆಯಲ್ಪಟ್ಟಿಲ್ಲ. ನಾನು ...ದು ಬಾರಿ ನನ್ನ ಭಾಷಣದಲ್ಲಿ, 'ಲವ್ ಜಿಹಾದ್' ...ಲ್ಲಿ ಬೀದಿಗೆಸೆಯಲ್ಪಡುತ್ತಿದ್ದಾರೆ ಎನ್ನುವ ನಾಲ್ಕು ...ಣ್ಣುಮಕ್ಕಳನ್ನಾದರೂ ನನ್ನ ಮುಂದೆ ತಂದು ನಿಲ್ಲಿಸಿ!" ...ನಾನು ಕರೆ ಕೊಟ್ಟಿದ್ದೇನೆ. ಆದರೆ ಈವರೆಗೆ ಯಾರೂ ... ಹೆಣ್ಣುಮಕ್ಕಳನ್ನು ನನ್ನ ಮುಂದೆ ಕರೆತಂದಿಲ್ಲ! ... ಇದ್ದರೆ ... ಅದೇ

ಸತ್ಯವೆಂದೇ ಜನರು ನಂಬುವರೆಂದೇ?

ಈ ಸಂದರ್ಭದಲ್ಲಿ ನಮ್ಮ ಸಂವಿಧಾನದ ಕುರಿತು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಅತ್ಯುತ್ತಮ ಸಂವಿಧಾನವಿದೆ. 21 ವರ್ಷ ಪ್ರಾಯ ದಾಟಿದ ಗಂಡು ಮತ್ತು 18 ವರ್ಷ ದಾಟಿದ ಹೆಣ್ಣು ಮದುವೆಯಾಗಲು ಅವರ ತಂದೆತಾಯಿಗಳ ಅನುಮತಿ ಕೂಡಾ ಬೇಕಾಗಿಲ್ಲ! ಅವರು ಮದುವೆಯಾಗದಂತೆ ತಡೆಯುವ ಅಧಿಕಾರ ಕೂಡಾ ಯಾರಿಗೂ ಇಲ್ಲ. ಪೊಲೀಸ್ ಸ್ಟೇಷನ್ನಿನಲ್ಲಿ ಪೊಲೀಸರೇ ಮದುವೆ ಮಾಡಿಸಿದ ಉದಾಹರಣೆಗಳೂ ಸಾಕಷ್ಟಿದೆಯಲ್ಲಾ?


ಮತಾಂತರ ಕೂಡಾ ಶಿಕ್ಷಾರ್ಹ ಅಪರಾಧವೆಂಬಂತೆ ಬಿಂಬಿಸಲಾಗುತ್ತಿದೆ. ತಾವಿರುವ ಧಾರ್ಮಿಕ ನಿಯಮಗಳಲ್ಲಿ ತಮಗೆ ವಿಶ್ವಾಸವಿಲ್ಲವಾದರೆ ಇನ್ನೊಂದು ಧಾರ್ಮಿಕ ನಿಯಮವನ್ನನುಸರಿಸಲು ಕೂಡಾ ಈ ದೇಶದ ಪ್ರಜೆಗಳಿಗೆ ನಮ್ಮ ಸಂವಿಧಾನ ಪೂರ್ಣ ಸ್ವಾತಂತ್ರ್ಯ ನೀಡಿದೆ ಎಂಬುದು ನನ್ನ ತಿಳಿವಳಿಕೆಯಾಗಿದೆ.



ದಲಿತರ ಮೇಲೆ ಇಂದಿಗೂ ಎಲ್ಲ ರೀತಿಯ ದೌರ್ಜನ್ಯಗಳು ನಡೆಯುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇದೆ. ಅವರ ಕೊಲೆ ಮಾಡುವುದು, ಗುಡಿಸಲಿಗೆ ಬೆಂಕಿ ಹಾಕಿ ಸುಡುವುದು, ಕುಡಿಯಲು ಕೂಡಾ ನೀರು ಕೊಡದಿರುವುದು, ಅವರ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡುವುದು, ಅವರ ಮಕ್ಕಳು ಸೈಕಲ್ಲಿನಲ್ಲಿ ಓಡಾಡುವುದೂ ಕೂಡಾ ಮೇಲ್ಜಾತಿಯವರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ದಲಿತರು ಬಿಡಿ. ಹಿಂದುಳಿದ ವರ್ಗದ ಹೆಣ್ಣು ಮಗಳೋರ್ವಳು ಉಡುಪಿ ದೇವಸ್ಥಾನದಲ್ಲಿ ಊಟಕ್ಕೆ ಕುಳಿತಾಗ ಆಕೆಯನ್ನು ಎಲೆಯ ಮುಂದಿನಿಂದ ಎಬ್ಬಿಸಿ ಹೊರಗೆ ಕಳುಹಿಸಿ ಅವಮಾನಿಸಿದ್ದೂ ನಡೆದಿದೆಯಲ್ಲಾ? ಇಂತಹ ಎಲ್ಲ ಅವಮಾನಗಳನ್ನು ಸಹಿಸಿಕೊಂಡು ಅವರು 'ಹಿಂದೂ ನಾವೆಲ್ಲ ಒಂದು' ಎಂದು ಹೇಳುತ್ತಾ ಇರಬೇಕೆ? ಈ ನೋವನುಭವಿಸುವುದಕ್ಕಿಂತ ಇನ್ನೊಂದು ಧಾರ್ಮಿಕ ವಿಶ್ವಾಸದೆಡೆಗೆ ವಾಲಿಕೊಂಡು ಸಮಾನತೆಯಿಂದ, ತಾವೂ ಮನುಷ್ಯರಾಗಿದ್ದೇವೆ ಎಂದು ತೃಪ್ತಿಪಟ್ಟುಕೊಳ್ಳುವುದು ಅಪರಾಧವೆಂದು ಹೇಗೆ ಹೇಳುತ್ತೀರಿ? ಮತಾಂತರವೆಂಬುದು ಮನುಷ್ಯರಿಗೆ ಘನತೆ, ಗೌರವದಿಂದ ಬದುಕುವ ಹಾದಿಯಾಗಿದೆ. ಮೊತ್ತಮೊದಲು ನಾವೆಲ್ಲರೂ ನಮ್ಮ ಸಂವಿಧಾನವನ್ನು ರಕ್ಷಿಸೋಣ. ಈ ಸಂವಿಧಾನವನ್ನು ಗೌರವಿಸೋಣ. ಹೈಸ್ಕೂಲ್ ತರಗತಿಗಳ ಪಠ್ಯ ಪುಸ್ತಕಗಳಲ್ಲಿ ಸಂವಿಧಾನದ ಕುರಿತು ಸಮಗ್ರವಾದ ವಿವರಣೆ ನೀಡಿ ಎಲ್ಲರೂ ಸಂವಿಧಾನವನ್ನು ಸರಿಯಾಗಿ ಅನುಸರಿಸುವಂತೆ ಮಾಡೋಣ.

● ಸಾರಾ ಅಬೂಬಕ್ಕರ್

# ನರಭಕ್ಷಕನಲ್ಲ, ನರಹಂತಕ ಮಾತ್ರ




ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಆ ಹುಲಿಯ ವಿಚಿತ್ರ ಸ್ವಭಾವದಿಂದಾಗಿ ಮತ್ತು ಅದು ತಂಗುವುದಕ್ಕೆ ಆರಿಸಿಕೊಳ್ಳುತ್ತಿದ್ದ ಜಾಗಗಳನ್ನು ನೋಡಿ ಅದನ್ನು ಏಕಾಂಗಿ ಎಂದು ಕರೆದಿದ್ದೇನೆ.

ಅದೊಂದು ಅಸ್ವಾಭಾವಿಕವಾದ ಹುಲಿಯಾಗಿತ್ತು. ಆ ಹುಲಿ ನರಮಾಂಸವನ್ನು ತಿನ್ನುತ್ತಿದ್ದುದರ ಬಗೆಗೆ ಯಾವುದೇ ದಾಖಲೆಗಳಿಲ್ಲದಿದ್ದರೂ, ಅದು ಮನುಷ್ಯರ ಬಗೆಗೆ ವಿಪರೀತ ದ್ವೇಷವನ್ನು ಹೊಂದಿತ್ತು. ಐದು ದಿನಗಳ ಅಂತರದಲ್ಲಿ ಅದು ಮೂರು ಜನರನ್ನು ಕೊಂದಿತ್ತು. ಎಲ್ಲಾ ಕೊಲೆಗಳ ಹಿಂದೆ ಆ ಕ್ಷಣದ ಆಕ್ರಮಣಕಾರಿ ಮನೋಭಾವ ಎದ್ದು ಕಾಣುತ್ತಿತ್ತು. ಹುಲಿಗಳು ಸಾಮಾನ್ಯವಾಗಿ ನಾಯಿಗಳನ್ನು ತಿನ್ನುವುದಿಲ್ಲ. ಆದರೆ ಈ ವಿಚಿತ್ರ ಹುಲಿಗೆ ಕುರಿ ಮತ್ತು ನಾಯಿಗಳು ಪ್ರಿಯವಾದ ಆಹಾರವಾಗಿತ್ತು. ಅಷ್ಟೇ ಅಲ್ಲದೆ ತುಮಕೂರಿನಿಂದ ಆರು ಮೈಲು ದೂರವಿದ್ದ ದೇವರಾಯನದುರ್ಗ ಬೆಟ್ಟಗಳ ಪೊದೆಕಾಡುಗಳಲ್ಲಿ ಅದು ದಿಢೀರನೆ ಕಾಣಿಸಿಕೊಂಡಿತ್ತು. ದೇವರಾಯನದುರ್ಗದಲ್ಲಿ ಕಾಡುಹಂದಿ ಮತ್ತು ಕಾಡುಕೋಳಿಗಳು ಮಾತ್ರ ಇರುತ್ತಿದ್ದವು. ದಶಕಗಳಿಂದ ಇಲ್ಲಿ ಯಾವುದೇ ಹುಲಿ ವಾಸಿಸುತ್ತಿದ್ದ ಬಗೆಗೆ ವರದಿಯಾಗಿರಲಿಲ್ಲ. ಲಂಟಾನ ಮತ್ತಿತರ ಮುಳ್ಳುಪೊದೆಗಳ ಹೊರತಾಗಿ ಇಲ್ಲಿ ಮರಗಳಿರುವ ಕಾಡುಗಳಿರಲಿಲ್ಲ. ಬೆಟ್ಟದ ತುದಿ ಬಂಡೆಗಳಿಂದ ಆವೃತವಾಗಿದ್ದು ಅದರಲ್ಲಿ ಕೆಲವು ಸಣ್ಣಪುಟ್ಟ ಗುಹೆಗಳಿದ್ದವು. ಇವುಗಳಲ್ಲಿ ಸಾಮಾನ್ಯವಾಗಿ ಇರುತ್ತಿದ್ದ ಮುಳ್ಳುಹಂದಿಗಳನ್ನು ಓಡಿಸಿ ಅಪರೂಪಕ್ಕೊಮ್ಮೆ ಚಿರತೆಗಳು ಬಂದು ಸೇರಿಕೊಳ್ಳುತ್ತಿದ್ದವು. ಆದರೆ ಹುಲಿಯಂತಹ ದೊಡ್ಡ ಗಾತ್ರದ ಪ್ರಾಣಿಗಳಿಗೆ ಈ ಗುಹೆಗಳು ರಕ್ಷಣೆಯನ್ನೊದಗಿಸುವುದಿರಲಿ, ಇರುವುದಕ್ಕೂ ಸಾಕಾಗುವಷ್ಟಿರಲಿಲ್ಲ. ಇಡೀ ಪ್ರದೇಶ ಹೊಲಗಳು ಮತ್ತು ಪೊದೆಕಾಡುಗಳನ್ನು ಒಳಗೊಂಡಿದ್ದು ಯಾವುದೇ ಹುಲಿ ಇಂತಹ ಜಾಗಕ್ಕೆ ಹಗಲು ಅಥವಾ ರಾತ್ರಿಯ ಹೊತ್ತಿನಲ್ಲಿ ಬಂದು ಅಪಾಯವನ್ನು ಆಹ್ವಾನಿಸಿಕೊಳ್ಳುತ್ತಿರಲಿಲ್ಲ.

ಆದರೆ ಈ ಏಕಾಂಗಿ ಹುಲಿ ಅದನ್ನೇ ಮಾಡಿತ್ತು. ಇಲ್ಲಿನ ಹೊಲಗಳನ್ನು ಹಾದು ಅದು ದೇವರಾಯನದುರ್ಗದ ಬೆಟ್ಟಗಳಲ್ಲಿ ಸೇರಿಕೊಂಡಿತ್ತು.


ಮೊದಮೊದಲು ಬೆಟ್ಟದಲ್ಲಿ ಒಂದು ಹುಲಿ ಬಂದು ಸೇರಿಕೊಂಡಿದೆ ಎಂದು ಯಾರಿಗೂ ಗೊತ್ತಾಗಲಿಲ್ಲ. ಸುತ್ತಲಿನ ಹಳ್ಳಿಗಳಲ್ಲಿ ಕುರಿ ಮತ್ತು ನಾಯಿಗಳು ಅಸ್ವಾಭಾವಿಕವೆನ್ನುವಂತೆ ಕಾಣೆಯಾಗತೊಡಗಿದವು. ಬೇಸಾಯ ಮಾಡಿದ ಅಲ್ಲಿನ ಹೊಲವೊಂದರಲ್ಲಿ ಹುಲಿಯ ಹೆಜ್ಜೆ ಗುರುತುಗಳು ಕಾಣುವವರೆಗೆ ಎಲ್ಲರೂ ಸಾಕುಪ್ರಾಣಿಗಳ ಸಾವಿಗೆ ಚಿರತೆಯೇ ಕಾರಣ ಎಂದುಕೊಂಡಿದ್ದರು. ಅದಾದ ಎರಡು ದಿನಗಳ ನಂತರ ಹಳ್ಳಿಯ ಹೊರವಲಯದಲ್ಲಿ ಮೇಯುತ್ತಿದ್ದ ಹಸುವೊಂದು ಸಾವನ್ನಪ್ಪಿತು. ತನ್ನ ಹಸುವಿನ ಬಗೆಗೆ ಅಪಾರವಾದ ಪ್ರೀತಿಯಿದ್ದ ಅದರ ಯಜಮಾನಿ ವೃದ್ಧ ಮಹಿಳೆಗೆ ಸಾವಿನ ವಿಚಾರ ತಿಳಿದಾಗ ಅವಳು ಕಾಲು ಮೈಲು ದೂರದಲ್ಲಿ ಬಿದ್ದಿದ್ದ ಹಸುವಿನ ಶವದ ಬಳಿ ಹೋಗಿ ದೊಡ್ಡದಾಗಿ ಕೂಗಾಡಿಕೊಂಡು ಅಳತೊಡಗಿದಳು. ಆ ವೃದ್ಧೆಯ ಕುಟುಂಬದ ಇತರ ಸದಸ್ಯರೂ ಸ್ವಲ್ಪ ಸಮಯ ಅದೇ ಸ್ಥಳದಲ್ಲಿದ್ದರು. ನಿಧಾನವಾಗಿ ಅವರಿಗೆ ಈ ಗೋಳಾಟ ಬೇಸರ ತಂದಾಗ ಅವರು ವೃದ್ಧೆಯೊಬ್ಬಳನ್ನೇ ಅಲ್ಲಿ ಬಿಟ್ಟು ತಮ್ಮತಮ್ಮ ಕೆಲಸಗಳಿಗೆ ತೆರಳಿದರು.

ಮಧ್ಯಾಹ್ನದ 11 ಗಂಟೆಯ ಹೊತ್ತಿನ ಸುಡುಬಿಸಿಲಿನಲ್ಲಿ ಮತ್ತು ವೃದ್ಧೆಯ ಅಳುವಿನ ಸದ್ದು ಜೋರಾಗಿ ಕೇಳುತ್ತಿರುವಾಗ ಯಾವುದೇ ಸಾಮಾನ್ಯ ಹುಲಿ ಅಂತಹ ಬಯಲು ಪ್ರದೇಶದಲ್ಲಿ ಬಿದ್ದಿರುವ ಶವವನ್ನು ತಿನ್ನಲು ಮತ್ತೆ ಬರುವುದಿಲ್ಲ. ಆದರೆ ವಿಚಿತ್ರ ಸ್ವಭಾವದ ದೇವರಾಯನದುರ್ಗದ ಈ ಏಕಾಂಗಿ ಅಂತಹ ಸಮಯದಲ್ಲೇ ಬಂದಿತ್ತು. ಸ್ವಲ್ಪ ಹೊತ್ತು ಅಲ್ಲೇ ಸುತ್ತಾಡಿದ ಹುಲಿಗೆ ವೃದ್ಧೆಯ ಅಳುವಿನ ಶಬ್ದ ಅಸಹನೀಯವೆನ್ನಿಸಿ ಅದನ್ನು ನಿಲ್ಲಿಸಲು ನಿರ್ಧರಿಸಿರಬೇಕು. ಆ ವೃದ್ಧೆಯ ಮೇಲೆ ಹಾರಿ ಬಂದು ತನ್ನ ಪಂಜಿನ ಒಂದೇ ಏಟಿನಿಂದ ಆಕೆಯನ್ನು ಕೊಂದುಹಾಕಿತ್ತು. ನಂತರ ಹಸುವಿನ ಶವವನ್ನು ಸ್ವಲ್ಪ ದೂರ ಎಳೆದುಕೊಂಡು ಹೋಗಿ ಹೊಟ್ಟೆತುಂಬಾ ತಿಂದು ಮುಗಿಸಿತ್ತು. ಆದರೆ ವೃದ್ಧೆಯ ಶವದ ಕಡೆ ಕಣ್ಣೆತ್ತಿಯೂ ನೋಡಿರಲಿಲ್ಲ.



ಸಂಜೆ ನಾಲ್ಕು ಗಂಟೆಯಾದರೂ ಆ ವೃದ್ಧ ಮಹಿಳೆ ಮನೆಗೆ ಹಿಂತಿರುಗಲಿಲ್ಲ. ಅವಳ ಮನೆಯವರು ಹುಡುಕಿಕೊಂಡು ಹೋದಾಗ ಹುಲಿಯಿಂದ ಕೊಲ್ಲಲ್ಪಟ್ಟ ಅವಳ ಶವವನ್ನು ನೋಡಿ ದಿಗ್ಭ್ರಾಂತರಾದರು. ಹಳ್ಳಿಗೆ ಹಿಂತಿರುಗಿ ಒಂದು ದೊಡ್ಡ ಗುಂಪನ್ನು ಒಟ್ಟುಗೂಡಿಸಿಕೊಂಡು ತಮ್ಮ ಆಯುಧಗಳೊಂದಿಗೆ ಹುಲಿಯನ್ನು ಕೊಲ್ಲಲು ಹೊರಟರು. ಜೊತೆಯಲ್ಲಿ ಹಳ್ಳಿಯ ಪ್ರಮುಖ ಕೂಡ ತನ್ನ ನಾಡ ಬಂದೂಕಿನೊಂದಿಗೆ ಅವರ ಜೊತೆಗೆ ಹೊರಟ. ಹುಲಿಯ ಜಾಡನ್ನು ಹಿಡಿದು ಮುಂದೆ ಹೋದಾಗ ಅದು ದಟ್ಟವಾದ ಪೊದೆಯೊಳಗೆ ತೂರಿಕೊಂಡು ಹೋಗಿರುವುದು ಕಂಡುಬಂದಿತು. ಅಲ್ಲಿಂದ ಮುಂದೆ ಹೋಗಲು ಆ ಗುಂಪಿಗೆ ಭಯವಾಯಿತು. ಹಾಗಾಗಿ ಅಲ್ಲಿಯೇ ನಿಂತು ಹುಲಿಯನ್ನು ಹೆದರಿಸಿ ಓಡಿಸಲು ಪೊದೆಗಳ ಕಡೆ ಕಲ್ಲುಗಳನ್ನು ಎಸೆದರು. ಹಳ್ಳಿಯ ಪ್ರಮುಖ ತನ್ನ ಬಂದೂಕಿನಿಂದ ಗಾಳಿಯಲ್ಲಿ ಎರಡು ತೋಟಾಗಳನ್ನು ಹಾರಿಸಿದ. ಹುಲಿಯಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದಾಗ ಅವರು ವೃದ್ಧೆಯ ಹೆಣವನ್ನು ಸಾಗಿಸಲು ಹಿಂತಿರುಗತೊಡಗಿದರು. ಆಗ ಒಮ್ಮಿಂದೊಮ್ಮೆಲೆ ಹಾರಿಬಂದ ಹುಲಿ ಹಿಂದಿನಿಂದ ಬರುತ್ತಿದ್ದ ಹಳ್ಳಿಯ ಪ್ರಮುಖನ ಮೇಲೆ ಆಕ್ರಮಣ ಮಾಡಿತು. ಏನಾಗುತ್ತಿದೆ ಎಂದು ತಿಳಿಯುವಷ್ಟರಲ್ಲಿ ಅವನು ಹೆಣವಾದ.

ಇದರಿಂದ ಗಾಬರಿಗೊಂಡ ಜನರ ಗುಂಪು ಹಳ್ಳಿಗೆ ಓಡಿಬಂದಿತು. ಮರುದಿನ ಬೆಳಗ್ಗೆ ಇನ್ನೂ ದೊಡ್ಡ ಗುಂಪನ್ನು ಒಟ್ಟುಗೂಡಿಸಿಕೊಂಡು ಹೋಗಿ ಎರಡೂ ಶವಗಳನ್ನು ತಂದು ಸಂಸ್ಕಾರ ಮಾಡಿದರು. ಹುಲಿ ಮನುಷ್ಯರ ಶವಗಳತ್ತ ನೋಡದೆ ಹಸುವನ್ನು ಮಾತ್ರ ಹಿಂದಿನ ರಾತ್ರಿ ಪೂರ್ಣ ತಿಂದು ಮುಗಿಸಿತ್ತು.



## ಮತ್ತೆ ನರಬಲಿ

ಮುಂದಿನ ಎರಡು ದಿನಗಳಲ್ಲಿ ಹಳ್ಳಿಗರಲ್ಲಿ ತೀವ್ರವಾದ ಆತಂಕ ತುಂಬಿಕೊಂಡಿತು. ಮೂರನೆಯ ದಿನ ತುಮಕೂರಿನ ಒಬ್ಬ ವ್ಯಾಪಾರಿ ತನ್ನ ಮಾರಾಟದ ವಸ್ತುಗಳನ್ನು ಎರಡು ಕತ್ತೆಗಳ ಮೇಲೆ ಹೇರಿಕೊಂಡು ಹಳ್ಳಿಯ ಕಡೆ ಮಾರಲು ಹೊರಟ. ಹಳ್ಳಿಗೆ ಒಂದು ಮೈಲು ದೂರವಿರುವಾಗ ಹುಲಿ ಮುಂದೆ ಹೋಗುತ್ತಿದ್ದ ಕತ್ತೆಯ ಮೇಲೆ ಆಕ್ರಮಣ ಮಾಡಿತು. ಅದು ತಕ್ಷಣ ಸತ್ತು ಹೋಯಿತು. ಹಿಂದಿನ ಕತ್ತೆ ನಿಶ್ಚಲವಾಗಿ ನಿಂತೇ ಇದ್ದರೂ ವ್ಯಾಪಾರಿ ಮಾತ್ರ ಗಾಬರಿಯಿಂದ ಬಂದ ದಾರಿಯಲ್ಲಿ ಹಿಂತಿರುಗಿ ಓಡತೊಡಗಿದ. ಅವನ ಓಟ ಈ ವಿಚಿತ್ರ ಹುಲಿಯನ್ನು ಕೆರಳಿಸಿರಬೇಕು. ಹಾಗಾಗಿ ಅದು ವ್ಯಾಪಾರಿಯನ್ನು ಬೆನ್ನತ್ತಿ ಹೋಗಿ ಕೊಂದು ಹಾಕಿತು. ನಂತರ ಹಿಂತಿರುಗಿ ಬಂದು ಕೊಂದಿದ್ದ ಕತ್ತೆಯನ್ನು ಎಳೆದುಕೊಂಡು ದೂರಹೋಗಿ ತಿಂದುಹಾಕಿತು. ಆಶ್ಚರ್ಯವೆಂದರೆ ಹುಲಿ ವ್ಯಾಪಾರಿಯ ಶವವನ್ನು ಮುಟ್ಟಿರಲಿಲ್ಲ ಮತ್ತು ಇನ್ನೊಂದು ಕತ್ತೆಯನ್ನೂ ಜೀವಂತ ಬಿಟ್ಟುಹೋಗಿತ್ತು.

ಈ ಎಲ್ಲಾ ವಿಚಾರಗಳೂ ಬೆಂಗಳೂರಿನ ವರ್ತಮಾನ ಪತ್ರಿಕೆಗಳಲ್ಲಿ ಬಂದಾಗ ನಾನು ದೇವರಾಯನದುರ್ಗಕ್ಕೆ ಹೊರಟೆ. ಭಯಭೀತರಾಗಿದ್ದ ಹಳ್ಳಿಗರ ಜೊತೆ ಮಾತನಾಡಿದಾಗ ಮೇಲಿನ ಎಲ್ಲಾ ಸಮಾಚಾರಗಳೂ ತಿಳಿಯಿತು. ಬೇಸಿಗೆಯಿದ್ದು ರಸ್ತೆಗಳು ಧೂಳಿನಿಂದ ತುಂಬಿಹೋಗಿದ್ದರಿಂದ ಹುಲಿಯ ಯಾವುದೇ ಹೆಜ್ಜೆಗುರುತುಗಳು ಕಂಡುಬರಲಿಲ್ಲ. ಈ ಪ್ರಾಣಿ ಹುಲಿಯಾಗಿರದೆ ಒಂದು ದೊಡ್ಡ ಗಾತ್ರದ ಆಕ್ರಮಣಕಾರಿ ಚಿರತೆಯಾಗಿರಬಹುದೇ ಎಂದು ನನಗೆ ಅನ್ನಿಸಿತು. ಆದರೆ ಹಳ್ಳಿಯ ಪ್ರಮುಖನೊಂದಿಗೆ ಹೋಗಿದ್ದ ಜನಗಳು ಈ ಪ್ರಾಣಿ ಹುಲಿಯೇ ಎಂದು ದೃಢಪಡಿಸಿದರು. ಆದರೂ ಈ ಹಳ್ಳಿಗರ ವೈಭವೀಕರಿಸುವ ಸ್ವಭಾವದ ಪರಿಚಯವಿದ್ದ ನನಗೆ ಇನ್ನೂ ಅನುಮಾನಗಳಿದ್ದವು.

ಮಧ್ಯಾಹ್ನದ ಊಟದ ನಂತರ ನಾನು ಮಾರ್ಗದರ್ಶಕನೊಬ್ಬನನ್ನು ಕರೆದುಕೊಂಡು ಸುತ್ತಲಿನ ಸಂಪೂರ್ಣ ಪ್ರದೇಶವನ್ನು ಹುಡುಕಾಡಿದೆ. ಬೆಟ್ಟದಲ್ಲಿನ ಗುಹೆಗಳನ್ನೂ ಸೇರಿಸಿ ಸುಸ್ತಾಗುವವರೆಗೂ ತಿರುಗಾಡಿದರೂ ಹುಲಿಯಾಗಲೀ ಅಥವಾ ಅದರ ಹೆಜ್ಜೆ ಗುರುತುಗಳಾಗಲೀ ಕಂಡುಬರಲಿಲ್ಲ.

ನಾಲ್ಕು ಗಂಟೆಯ ಹೊತ್ತಿಗೆ ಹಳ್ಳಿಗೆ ಹಿಂತಿರುಗಿ ಬಹಳ ಕಷ್ಟದಿಂದ ಒಂದು ಹೋರಿಯನ್ನು ಬಲಿಗಾಗಿ ಸಂಪಾದಿಸಿದೆ. ಅದನ್ನು ಊರಿನಿಂದ ಮುಕ್ಕಾಲು ಮೈಲು ದೂರವಿದ್ದ ದಾರಿಯ ಪಕ್ಕದ ಮುಳ್ಳುಗಿಡಗಳಿಂದ ಕೂಡಿದ್ದ ಒಣ ಹಳ್ಳದ ಬಳಿ ಕಟ್ಟಿದೆ. ಆಗಲೇ ಸಂಜೆ ಆರುಗಂಟೆಯಾಗಿತ್ತು. ಹಾಗಾಗಿ ಮಚಾನನ್ನು ನಿರ್ಮಿಸಲು ಸಮಯವಿಲ್ಲದಿದ್ದರಿಂದ ನಾನು ತುಮಕೂರಿನ ಪ್ರವಾಸಿಬಂಗಲೆಯಲ್ಲಿ ರಾತ್ರಿಯನ್ನು ಕಳೆಯಲು ನಿರ್ಧರಿಸಿದೆ.

ಬೆಳಗಿನ ಜಾವ 5.30ಕ್ಕೆ ನಾನು ಬಲಿಯನ್ನು ಕಟ್ಟಿದ್ದ ಜಾಗಕ್ಕೆ ತಲುಪಿದೆ. ಆಶ್ಚರ್ಯವೆಂಬಂತೆ ಆ ಹೋರಿ ಅಲ್ಲಿಂದ ಮಾಯವಾಗಿತ್ತು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಹುಲಿ ಈ ಪ್ರಾಣಿಯನ್ನು ಕೊಂದು ಕಟ್ಟಿದ್ದ ಹಗ್ಗವನ್ನು ತುಂಡುಮಾಡಿ ಶವವನ್ನು ಎಳೆದುಕೊಂಡು ಹೋಗಿರುವುದು ಕಂಡುಬಂತು. ಅಲ್ಲಿನ ಹೆಜ್ಜೆಗುರುತುಗಳಿಂದ ಇದೊಂದು ಹೆಣ್ಣುಹುಲಿ ಎಂದು ತಿಳಿಯಿತು. ಸಾಮಾನ್ಯ ಹೆಣ್ಣುಹುಲಿಗಳಿಗಿಂತ ಇದರ ಗಾತ್ರ ದೊಡ್ಡದೇ ಆಗಿತ್ತು.

ಈ ಹುಲಿಯ ಹಿಂದಿನ ಸಾಹಸಗಳ ಪರಿಚಯವಿದ್ದ ನಾನು ಬಹಳ ಎಚ್ಚರಿಕೆಯಿಂದ ಹುಲಿಯ ಜಾಡನ್ನು ಹಿಡಿದು ಹೊರಟೆ. ಪ್ರತಿ ಹೆಜ್ಜೆಗೂ ಸುತ್ತಲಿನ ಎಲ್ಲಾ ಸ್ಥಳಗಳನ್ನು ಪರಿಶೀಲಿಸುತ್ತಾ ಮುಂದೆ ಹೋದಾಗ ... ಗಜದೂರದಲ್ಲಿ ಹೋರಿಯ ಶವವನ್ನು ನೋಡಿದೆ. ಹುಲಿ ಅದರ ಕುತ್ತಿಗೆ ಮುರಿದು ಬಿಸಿಯಾದ ನೆತ್ತರನ್ನು ಹೀರಿತ್ತು. ಹುಲಿಗಳ ಮತ್ತು ದೊಡ್ಡ ಚಿ... ಸಾಮಾನ್ಯ ಸ್ವಭಾವದಂತೆ ಬಲಿಯಾದ ಪ್ರಾಣಿಯ ಬಾಲವನ್ನು ಕತ್ತರಿಸಿ ಎಸೆದಿತ್ತು. ನಂತರ ಹೊಟ್ಟೆ ಮತ್ತು ಕರುಳಿನ ಭಾಗವನ್ನು ಗುದದ ಮೂಲಕ ಸರಾಗವಾಗಿ ಹೊರತೆಗೆದು ಬಿಸಾಕಿತ್ತು. ಕೊನೆಗೆ ಅರ್ಧಶ... ತಿಂದು ಮುಗಿಸಿತ್ತು. ಇದನ್ನೆಲ್ಲಾ ನೋಡಿದ ಮೇಲೆ ನನಗೆ ಅನಿಸಿದ್ದು ... ಹೇಳುವಂತೆ ಇದೇನು ಅಂತಹ ವಿಚಿತ್ರವಾದ ಹುಲಿಯಾಗಿರದಿದ್ದರೂ ... ಕೋಪಿಷ್ಟ ಎನ್ನುವುದು ಖಚಿತವಾಯಿತು.

ಹುಲಿ ತಕ್ಷಣ ಮತ್ತೆ ಬರಬಹುದೆಂಬ ನಿರೀಕ್ಷೆಯಲ್ಲಿ ನಾನು ಹತ್ತಿರ... ಮರವನ್ನು ಏರಿ ಕುಳಿತು ಕಾಯತೊಡಗಿದೆ. ಸುಮಾರು 9.30 ಗಂಟೆಯಾ... ಹುಲಿ ಬರುವ ಸೂಚನೆಗಳು ಸಿಗಲಿಲ್ಲ. ಬದಲಾಗಿ ಶವದ ಅವಶೇಷ... ನೋಡಿದ ಹದ್ದುಗಳು ಸುತ್ತಲೂ ಸುಳಿಯತೊಡಗಿದವು. ಶವವನ್ನು ಹದ್ದು... ರಕ್ಷಿಸಲು ಹತ್ತಿರದ ಪೊದೆಗಳ ಎಲೆಗಳನ್ನು ಅದರ ಮೇಲೆ ಹರಡಿ ... ಹಳ್ಳಿಗೆ ಬಂದೆ. ಅಲ್ಲಿಂದ ನಾಲ್ಕು ಜನರನ್ನು ಒಟ್ಟುಗೂಡಿಸಿ ಕರೆತಂದು ಮಚಾ... ಸಿದ್ಧಪಡಿಸಿಕೊಂಡೆ.

ನನ್ನ ಜೊತೆ ಬಂದವರು ಹೇಳಿದ ಪ್ರಕಾರ ಈ ಏಕಾಂಗಿ ... ಕುರಿಗಳೆಂದರೆ ಬಹಳ ಪ್ರೀತಿಯಾಗಿತ್ತು. ಹಾಗಾಗಿ ಹತ್ತಿರದಲ್ಲೇ ಒಂದು ಕುರಿ... ಕಟ್ಟಿದರೆ ಅದರ ಕೂಗಿನಿಂದ ಹುಲಿ ಆಕರ್ಷಿತವಾಗುವ ಸಾಧ್ಯತೆಗಳು ಹೆಚ್ಚು... ಅವರ ಸಲಹೆಯಂತೆ ನಾನು ಹಳ್ಳಿಗೆ ಹಿಂತಿರುಗಿ ಜೋರಾಗಿ ಕೂ... ಒಂದು ಅರ್ಧಬೆಳೆದ ಕುರಿಯನ್ನು ತಂದು ಹತ್ತಿರದಲ್ಲೇ ಕಟ್ಟಿಸಿದೆ. ಮ... ಸುಮಾರು ಎರಡು ಗಂಟೆಯ ಹೊತ್ತಿಗೆ ನಾನು ಮಚಾನಿನಲ್ಲಿ ಕುಳಿತ... ಆ ಜನಗಳು ಹಳ್ಳಿಗೆ ಹಿಂತಿರುಗಿದರು.

## ನನ್ನನ್ನು ಪತ್ತೆಹಚ್ಚಿದ ಚಾಣಾಕ್ಷ

ಕೂಡಲೆ ಆ ಕುರಿ ಜೋರಾಗಿ ಕೂಗಲು ಶುರುಮಾಡಿತು. ಸು... 5.45ರವರೆಗೆ ಕುರಿ ಆಗಾಗ ನಿಲ್ಲಿಸುತ್ತಾ ಕೂಗುತ್ತಲೇ ಇತ್ತು. ಆಗ ... ಸಣ್ಣದಾದ ಕೂಗಿನೊಂದಿಗೆ ಹತ್ತಿರ ಬರುತ್ತಿರುವುದು ನನಗೆ ತಿಳಿಯಿತು. ಕ... ಈ ಶಬ್ದ ಕೇಳಿರಬೇಕು. ಅದು ಕೂಗನ್ನು ನಿಲ್ಲಿಸಿದರೂ ಹುಲಿ ಬರು... ದಿಕ್ಕಿನ ಕಡೆ ಮುಖ ಮಾಡಿ ಗಡಗಡನೆ ನಡುಗುತ್ತಾ ನಿಂತಿತು.

ದುರದೃಷ್ಟವೆಂದರೆ ಹುಲಿ ನಾನು ಕುಳಿತ ಜಾಗದ ಹಿಂದಿನಿಂದ ಬ... ಮರದ ರೆಂಬೆಗಳು ಮತ್ತು ದಟ್ಟವಾದ ಪೊದೆಗಳು ಆ ಕಡೆ ನನ್ನ ... ಮರೆಯಾಗಿದ್ದವು. ಹುಲಿ ಬರುತ್ತಿದ್ದ ದಿಕ್ಕಿನಿಂದ ನಾನು ಕುಳಿತಿದ್ದ ಮರ... ಇಳಿಜಾರಿನ ನೆಲವಿತ್ತು. ಹಾಗಾಗಿ ಹುಲಿಗೆ ದೂರದಿಂದ ಅದರ ಕಣ್ಣಿನ ... ನನ್ನ ಮಚಾನು ಕಂಡಿರಬೇಕು ಅಥವಾ ಸಾಮಾನ್ಯವಾಗಿ ಮಾಂಸ... ಪ್ರಾಣಿಗಳಿಗಾಗುವಂತೆ ಈ ಹುಲಿಗೂ ಅದರ ಆರನೇ ಇಂದ್ರಿಯ ಎಚ್ಚ... ಗಂಟೆಯನ್ನು ಮೊಳಗಿಸಿರಬೇಕು. ಕಾರಣಗಳೇನೇ ಇದ್ದರೂ ಹುಲಿಗೆ ಅ... ಅರಿವಾಗಿ ಅದು ಮೆಲುದನಿಯಲ್ಲಿ ಘರ್ಜಿಸುತ್ತಾ ನನ್ನನ್ನು ಸುತ್ತುಹಾಕತೊ... ಬಡಪಾಯಿ ಕುರಿಮರಿ ಭಯದಿಂದಲೇ ಸತ್ತುಹೋಗಿರಬೇಕು ಅನ್ನಿಸಿ...

ಈ ಅಸಾಮಾನ್ಯವಾದ ಹುಲಿ ರಾತ್ರಿ 9 ಗಂಟೆಯವರೆಗೆ ಘರ್ಜಿ... ಮರೆಯಲ್ಲಿಯೇ ಇತ್ತು. ನಂತರ ಒಂದು ದೊಡ್ಡ ಕೂಗಿನೊಂದಿಗೆ ... ಹೊರಟುಹೋಯಿತು. ಸಮಯ ಕಳೆದಂತೆ ಉಷ್ಣತೆ ಗಣನೀಯ... ಕಡಿಮೆಯಾಗಿ ಚಳಿಯಾಗತೊಡಗಿತು. ಬೆಳಗಿನವರೆಗೂ ನಡುಕದಿಂದ ... ಕಡಿಯುತ್ತಾ ನಾನು ಕುಳಿತೇ ಇದ್ದೆ.

ಬೆಳಗ್ಗೆ ಕುರಿ ಕೂಗಲು ಯತ್ನಿಸಿದರೂ ಅದರ ಗಂಟಲು ಪೂರ್ತಿ... ಉಡುಗಿಹೋಗಿ ಧ್ವನಿ ಹೊರಬರುತ್ತಲೇ ಇರಲಿಲ್ಲ. ಅವತ್ತು ಮಧ್ಯಾಹ್ನ... ತಾಸು ಮತ್ತೆ ಆ ಪ್ರದೇಶದಲ್ಲಿ ಹುಲಿಯನ್ನು ಹುಡುಕಿಕೊಂಡು ಸುತ್ತಾಡಿದ... ಪ್ರಯೋಜನವಾಗಲಿಲ್ಲ. ಹಾಗಾಗಿ ಮತ್ತೆ ಹೆಚ್ಚು ಎಲೆಗಳಿದ್ದ ಮತ್ತು ಸ... ಎತ್ತರದಲ್ಲಿದ್ದ ಇನ್ನೊಂದು ಮರದಲ್ಲಿ ಮಚಾನನ್ನು ಕಟ್ಟಿಸಿದೆ. ಆ ಮರ... ಹೊಸದೊಂದು ಕುರಿಯನ್ನು ಕಟ್ಟಿಹಾಕಿಸಿದೆ. ಆದರೆ ಈ ಕುರಿ ... ಸೋಂಭೇರಿಯಾಗಿದ್ದು ಕೂಗುತ್ತಲೇ ಇರಲಿಲ್ಲ. ನೆಲದ ಮೇಲೆ ಬಿದ್ದು... ನಿಶ್ಚಿಂತೆಯಿಂದ ಸೊಪ್ಪನ್ನು ಮೆಲ್ಲತೊಡಗಿತು!

ಆ ದಿನ ನಾನು ಬೆಚ್ಚಗಿನ ಬಟ್ಟೆಯನ್ನು ಹಾಕಿಕೊಂಡು ಮತ್ತು ಕಂಬ... ತೆಗೆದುಕೊಂಡು ಹೋಗಿದ್ದೆ. ಮಧ್ಯರಾತ್ರಿಯವರೆಗೆ ಏನೂ ನಡೆಯದೆ ಇದ್ದ... ಕಂಬಳಿಯನ್ನು ಹೊದ್ದು ಮಚಾನಿನಲ್ಲಿ ಗಡದ್ದಾಗಿ ನಿದ್ದೆ ಮಾಡಿಬಿಟ್ಟೆ! ಎಚ್ಚ... ಆ ಸೋಂಭೇರಿ ಕುರಿ ಮೇಯುತ್ತಲೇ ಇತ್ತು. ಈ ಪ್ರಪಂಚದಲ್ಲಿ ಯ... ಮಾಂಸಹಾರಿ ಪ್ರಾಣಿ ಇಲ್ಲವೇ ಇಲ್ಲ ಎಂದು ಅದು ಭಾವಿಸಿದಂತಿತ್ತು. ... ಮಧ್ಯಾಹ್ನ ನಾನು ಮತ್ತೆ ಹುಲಿಗಾಗಿ ಹುಡುಕಾಡಿ ನಿರಾಶನಾದೆ. ಪುನಃ ... ಗಂಟೆಯ ಹೊತ್ತಿಗೆ ಮಚಾನಿನಲ್ಲಿ ಕುಳಿತುಕೊಂಡೆ. ಈ ಸಾರಿ ... ಬದಲಾಗಿ ಒಂದು ಹೋರಿಯನ್ನು ಬಲಿಯಾಗಿ ಕಟ್ಟಿದೆ.

## ವಿಟು ತಿಂದ ಹುಲಿ ಸತ್ತಿತೇ?


ರಾತ್ರಿ ಸುಮಾರು ಏಳುಗಂಟೆಯ ಹೊತ್ತಿಗೆ ಊರಿನ ಜನರ ಗುಂ... ಲಾಟೀನಿನ ಬೆಳಕಿನಲ್ಲಿ ನಾನಿದ್ದಲ್ಲಿಗೆ ಬಂದರು. ಅವರು ಹೇಳಿದಪ್ರಕಾರ...

# ...ಚ್ಛ ಭಾರತವೆಂಬ ಸರ್ಕಾರೀ ಪ್ರಹಸನ

...ಧಾನ ಮಂತ್ರಿ ನರೇಂದ್ರ ಮೋದಿ ಅವರು ...ರ್ 2ರಂದು ಸ್ವಚ್ಛ ಭಾರತವೆಂಬ ಅಭಿಯಾನಕ್ಕೆ ...ಕೊಟ್ಟಿದ್ದಾರೆ. ನಮ್ಮ ಪರಿಸರವನ್ನು ತುರ್ತಾಗಿ ...ಸುವ ಅಗತ್ಯವಿರುವುದೇನೋ ನಿಜ. ಜೊತೆಗೆ ...ಯಾನಕ್ಕೆ ಸಾರ್ವಜನಿಕರಿಂದ ವ್ಯಕ್ತವಾಗಿರುವ ...ಯನ್ನು ನೋಡಿದರೆ ನಮ್ಮ ಜನರಲ್ಲಿ ಸ್ವಚ್ಛತೆಯ ...ಕಷ್ಟು ಪ್ರಜ್ಞೆಯೂ ಮೂಡಿದೆ ಎನ್ನುವುದರಲ್ಲಿ ...ನವಿಲ್ಲ. ಆದರೆ ಸರ್ಕಾರ ಹಮ್ಮಿಕೊಂಡಿರುವ ...ಮಗಳು ಮತ್ತು ಎಲ್ಲರೂ ಇದರ ಬಗೆಗೆ ...ಸುವ ರೀತಿಯನ್ನು ನೋಡಿದರೆ ಇದೂ ಒಂದು ಜನಪ್ರಿಯತೆ ಗಿಟ್ಟಿಸುವ ಗಿಮಿಕ್ ಇರಬಹುದೇ ...ದಲ್ಲಿ ಅನುಮಾನವೇ ಇಲ್ಲ.

...ದಲನೆಯದಾಗಿ ಸ್ವಚ್ಛತೆ ಎಂದರೆ ಏನು ಎನ್ನುವುದರ ...ಸರ್ಕಾರಕ್ಕಾಗಲೀ ಮತ್ತು ಸಾರ್ವಜನಿಕರಿಗಾಗಲೀ ...ಇದೆಯೋ ಎನ್ನುವ ಅಂಶದಿಂದಲೇ ನನ್ನ ...ನೆಗಳು ಶುರುವಾಗುತ್ತವೆ. ನಮ್ಮ ಮನೆ ಮತ್ತು ...ಕ ಸ್ಥಳಗಳನ್ನು ಕಸಮುಕ್ತವನ್ನಾಗಿ ಮಾಡುವುದಷ್ಟೇ ...ಎಂದು ನಾವೆಲ್ಲಾ ಅಂದುಕೊಂಡಂತೆ ಕಾಣುತ್ತದೆ. ...ಲೆಬ್ರಿಟಿಗಳೂ ಪೊರಕೆ ಹಿಡಿದು ಪೋಸ್ ...ದು ಶುದ್ಧ ನಯವಂಚಕತನ. ಹೀಗೆ ಒಟ್ಟುಮಾಡಿದ ...ಲ್ಲಿ ವಿಲೇವಾರಿ ಮಾಡುವುದು ಎಂದು ಇವರ ...ತೆ ಯೋಚಿಸಬಲ್ಲರೇ? ಕಳೆದ ಹಲವಾರು ...ದ ಎಲ್ಲಾ ಮಹಾನಗರಗಳಲ್ಲಷ್ಟೇ ಅಲ್ಲ, ಜಿಲ್ಲಾ ...ಲ್ಲಿಯೂ ಕಸ ವಿಲೇವಾರಿ ಒಂದು ದೊಡ್ಡ ...ವಾಗಿದೆ. ನಗರಗಳ ತುಂಬೆಲ್ಲಾ ಇನ್ನೂ ಕಸ ...ನಾಗಲೇ ಸಂಗ್ರಹಿಸಿರುವುದರ ವಿಲೇವಾರಿ ಇಷ್ಟು ...ಮಸ್ಯೆಯಾಗಿರುವಾಗ ಇನ್ನು ಇಲ್ಲಿನ ಪೂರ್ಣ ...ಒಟ್ಟು ಮಾಡಿದರೆ ಪರಿಸ್ಥಿತಿ ಹೇಗಿರಬಹುದು ...ವನ್ನು ನೆನಪಿಸಿಕೊಂಡರೇ ಭಯವಾಗುತ್ತದೆ. ...ಗಳೆಲ್ಲಾ ತಮ್ಮ ಉಚ್ಛಿಷ್ಟವನ್ನು ಸುತ್ತಮುತ್ತಲಿನ ...ಜನರ ಜಮೀನಿನಲ್ಲಿ ಸುರಿಯುತ್ತಾ ಹೋದರೆ ಹಂದಿಗಳಂತೆ ಬದುಕುವುದು ಸಾಧ್ಯವೇ? ಹೀಗೆ ...ಪರಿಸರವನ್ನು ಕಲುಷಿತಗೊಳಿಸುವುದನ್ನಾದರೂ ...ರೆಗೆ ಮಾಡಲು ಸಾಧ್ಯ? ಈಗಾಗಲೇ ಈ ...ಎಲ್ಲಾ ಕಡೆ ಹಳ್ಳಿಗರಿಂದ ತೀವ್ರ ಪ್ರತಿರೋಧಗಳು ...ವುದನ್ನು ನೋಡಿದ ಮೇಲೆ ನಾವು ...ದಾದರೂ ಏನು? ದಬ್ಬಾಳಿಕೆ, ಆಮಿಷಗಳ ಹಳ್ಳಿಗರ ಮನವೊಲಿಸಿ, ಆಗಾಗ ಜಾಗಗಳನ್ನು ...ಸುತ್ತಾ, ನಗರಗಳ ಕಸವನ್ನು ಅಲ್ಲಿ ...ವುದನ್ನು ಬಿಟ್ಟರೆ ಇನ್ನೇನು ಮಾಡಲಾಗಿದೆ?

...ಮೂಲಭೂತ ತೊಂದರೆ ಇರುವುದು ...ನಂತರ ನಾವು ಪಾಶ್ಚಿಮಾತ್ಯ ದೇಶಗಳ



ಮಾದರಿಯನ್ನು ಕಣ್ಣುಮುಚ್ಚಿ ಅನುಸರಿಸುತ್ತಿರುವುದರಲ್ಲಿ. ಆ ದೇಶಗಳ ಬಳಿ ಇರುವ ಸ್ಥಳಾವಕಾಶ, ಸಂಪನ್ಮೂಲಗಳು, ಅವರ ಜೀವನಶೈಲಿ ಮತ್ತು ಜನಸಂಖ್ಯೆಗೆ ಅವರ ಮಾದರಿ ಸೂಕ್ತವಿರಬಹುದು. ನಮ್ಮ ಪರಿಸ್ಥಿತಿಗೆ ಹೊಂದಿಕೆಯಾಗಬಹುದಾದ್ದನ್ನು ನಾವೇಕೆ ಹುಡುಕಿಕೊಂಡಿಲ್ಲ? ಅಂತಹ ದೇಶಗಳೂ ಕೂಡ ವಿಷಯುಕ್ತ ಕಸವನ್ನು ಸಮುದ್ರಗಳಲ್ಲಿ ಸುರಿದು ವಿಶ್ವಪರಿಸರಕ್ಕೆ ಭಾರೀ ಅಪಾಯವನ್ನೊಡ್ಡುವುದಕ್ಕೆ ಮುನ್ನುಡಿ ಹಾಡುತ್ತಿವೆ. ಅಮೆರಿಕಾ ಮತ್ತು ಜಪಾನ್‌ಗಳ ಪ್ಲಾಸ್ಟಿಕ್ ಕಸದಿಂದ ಶಾಂತಸಾಗರದಲ್ಲಿ "ಗ್ರೇಟ್ ಪ್ಯಾಸಿಫಿಕ್ ಗಾರ್ಬೇಜ್ ಪ್ಯಾಚ್" ಎಂದು ಕುಪ್ರಸಿದ್ಧವಾಗಿರುವ ಸ್ಥಳವೊಂದು ನಿರ್ಮಾಣವಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಮುಂದಾಗಬಹುದಾದ ಅನಾಹುತಗಳನ್ನು ತಪ್ಪಿಸಬೇಕೆಂದಿದ್ದರೆ ಎಲ್ಲಾ ದೇಶಗಳಿಗೂ ಈಗ ಉಳಿದಿರುವುದು ಎರಡೇ ಮಾರ್ಗಗಳು. ಒಂದು, ಪ್ರಕೃತಿಯಲ್ಲಿ ಸಹಜವಾಗಿ ಹಾಗೂ ತ್ವರಿತವಾಗಿ ಲೀನವಾಗದಂತಹ (ಪ್ರಮುಖವಾಗಿ ಪ್ಲಾಸ್ಟಿಕ್) ಮತ್ತು ಪ್ರಕೃತಿಗೆ ಅಪಾಯವನ್ನೊಡ್ಡುವ (ಪ್ರಮುಖವಾಗಿ ರಾಸಾಯನಿಕ) ಕಸದ ಉತ್ಪಾದನೆಯನ್ನು ತಕ್ಷಣದಿಂದ ಗಣನೀಯವಾಗಿ ಕಡಿಮೆ ಮಾಡುವುದು. ಎರಡು, ಪ್ರಕೃತಿಯಲ್ಲಿ ಲೀನವಾಗುವ ಕಸ ವಿಲೇವಾರಿಗೆ ಕೇಂದ್ರೀಕೃತ ವ್ಯವಸ್ಥೆಯನ್ನು ಮಾಡದೆ ಅದನ್ನು ಪ್ರಾದೇಶಿಕ ಮಟ್ಟದಲ್ಲಿ ಮರುಬಳಕೆ ಮಾಡುವುದು. ನಮ್ಮ ಸರ್ಕಾರೀ ಕಾರ್ಯಕ್ರಮದಲ್ಲಿ ಇಂತಹ ದೂರಗಾಮೀ ಚಿಂತನೆಗಳು ಎಲ್ಲಿದೆ?

ಎರಡನೆಯದಾಗಿ, ಸರ್ಕಾರೀ ಕಾರ್ಯಕ್ರಮ ಅಂದರೆ ನಮ್ಮ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಲೂಟಿಹೊಡೆಯುವ ಯೋಜನೆ ಎನ್ನುವುದು ಭಾರತದಲ್ಲಿ ಒಪ್ಪಿಕೊಂಡ ಮಾದರಿ. ಎಲ್ಲಿಯವರೆಗೆ ಸ್ವಚ್ಛತೆ ಆಯಾಯ ಪ್ರದೇಶದ ಜನರ ಜವಾಬ್ದಾರಿಯಾಗಿರುವುದಿಲ್ಲವೋ ಅಲ್ಲಿಯವರೆಗೆ "ಸ್ವಚ್ಛ ಭಾರತ" ಎನ್ನುವುದೂ ಕೂಡ "ಗರೀಬೀ ಹಟಾವೋ"ನಂತೆ ಮತ್ತೊಂದು ಗಿಮಿಕ್ ಆಗಿ ಉಳಿಯುವುದರಲ್ಲಿ ಸಂದೇಹವೇ ಇಲ್ಲ. ಸರ್ಕಾರ ಶೌಚಾಲಯಗಳಿಗಾಗಿ ಮೀಸಲಿಟ್ಟಿರುವ ಎರಡು ಲಕ್ಷ ಕೋಟಿಯಲ್ಲಿ ಕನಿಷ್ಠ ಅರ್ಧದಷ್ಟನ್ನಾದರೂ ನಮ್ಮ ಅಸ್ವಚ್ಛ ಕೈಗಳ ಸರ್ಕಾರೀ ವ್ಯವಸ್ಥೆ ತನ್ನದೇ ಆದ ರೀತಿಯಲ್ಲಿ ಸ್ವಚ್ಛ ಮಾಡಿರುತ್ತದೆ! ನಮ್ಮ ಜನರೂ ಕೂಡ ಯಾವುದೇ ಜವಾಬ್ದಾರಿಯನ್ನು ಹೊತ್ತುಕೊಳ್ಳದೆ ಹೀಗೆ ಸರ್ಕಾರದಿಂದ ಬರುವ ಹಣದಲ್ಲಿ ತಮ್ಮ ಪಾಲನ್ನು ಗಿಟ್ಟಿಸುವುದರಲ್ಲಿ ನಿರತರಾಗಿರುತ್ತಾರೆ.

ಮೂರನೆಯದು, ಶೌಚಾಲಯ ನಿರ್ಮಾಣವನ್ನು ಸರ್ಕಾರೀ ಕಾರ್ಯಕ್ರಮವನ್ನಾಗಿಸುವುದು ಅಪ್ರಬುದ್ಧವಾಗಿ ಯೋಚಿಸುವ ಭಾರತದ ರಾಜಕಾರಣಿಗಳಿಗೆ ಮಾತ್ರ ಸಾಧ್ಯ. ಶೌಚಾಲಯಗಳಿಲ್ಲದಿದ್ದಾಗ ಸ್ತ್ರೀಯರಿಗೆ ಬಹಳ ಅನಾನುಕೂಲವಾಗುವುದು ನಿಜ. ಹಾಗಂತ ಸರ್ಕಾರ ಏಕೆ ಶೌಚಾಲಯಗಳನ್ನು ನಿರ್ಮಿಸಿಕೊಡಬೇಕು? ನಮ್ಮ ಜನತೆಗೆ ಇದರ ಜವಾಬ್ದಾರಿ ಇರಬೇಕಲ್ಲವೇ? ಶೌಚಾಲಯ ಇಲ್ಲದ ಮನೆಗಳನ್ನು ಒಂದು ವರ್ಷದ ನಂತರ ಕೆಡವಲಾಗುತ್ತದೆ ಮತ್ತು ಇನ್ನು ಮುಂದೆ ಅಂತಹ ಮನೆಗಳನ್ನು ಕಟ್ಟುವಂತಿಲ್ಲ ಎಂದು ಕಾನೂನನ್ನು ಏಕೆ ರೂಪಿಸಬಾರದು? ಇದರಿಂದ ಆಗಬಹುದಾದ ಒಂದೇ ತೊಂದರೆ ಎಂದರೆ ನಮ್ಮ ರಾಜಕೀಯ ಪಕ್ಷಗಳ ಓಟ್‌ಬ್ಯಾಂಕ್‌ಗೆ ಭಾರೀ ಕನ್ನ ಬೀಳುವುದು ಮಾತ್ರ.

ಇಷ್ಟೇ ಅಲ್ಲ, ಇರುವ ಶೌಚಾಲಯಗಳನ್ನು ಶುದ್ಧೀಕರಿಸಲು ನಾವು ಅನುಸರಿಸುತ್ತಿರುವ ಮಾರ್ಗವಾದರೂ ಎಂತಹುದು? ದಲಿತರ ತಲೆಗಳ ಮೇಲೆ ಮಲವನ್ನು ಹೊರಿಸಿ ಊರ ಹೊರಗೆ ಸಾಗಿಸುವುದು, ಒಳಚರಂಡಿಗಳ ಮೂಲಕ ಊರಿನ ಪಕ್ಕದಲ್ಲಿ ಹರಿಯುತ್ತಿರುವ ನದಿಗಳಿಗೆ ಅದನ್ನು ಸೇರಿಸುವುದು ಮುಂತಾದವು ಅಲ್ಲವೇ? ಇದು ಯಾವ ನಾಗರಿಕ ಮಾದರಿ ಎಂದು ಸರ್ಕಾರ ಯೋಚಿಸಿದಂತಿಲ್ಲ.

ನಮ್ಮ ದೇಶದ ಎಷ್ಟೋ ಹಳ್ಳಿಗಳಲ್ಲಿ ಕುಡಿಯುವ ನೀರು ಸಿಗುವುದೇ ದುರ್ಭರವಾಗಿದೆ. ಇನ್ನು ಶೌಚಾಲಯಗಳ ಉಪಯೋಗಕ್ಕೆ ಸರ್ಕಾರ ನೀರನ್ನು ಎಲ್ಲಿಂದ ಸರಬರಾಜು ಮಾಡುತ್ತದೆ? ಬಯಲು ಪ್ರದೇಶಗಳಲ್ಲಿ ಮಲ ವಿಸರ್ಜಿಸುವ ಹಳ್ಳಿಗರು ಅಲ್ಲೇ ಇರುವ ಎಲೆಗಳಿಂದ ಒರೆಸಿಕೊಂಡು ಬರುವುದು 21ನೇ ಶತಮಾನದ ಭಾರತದಲ್ಲಿ ಅಪರೂಪವಲ್ಲ. ಇದು ಟಿಶ್ಯೂ ಪೇಪರ್‌ನ ಪ್ರಾದೇಶಿಕ ಮಾದರಿ ಅಂದುಕೊಳ್ಳಬಹುದು ಬಿಡಿ! ಇಂತಹ ಪರಿಸ್ಥಿತಿಯಲ್ಲಿ ನನ್ನ ಕುತೂಹಲವೆಂದರೆ ಕಟ್ಟಿಸಿರುವ ಶೌಚಾಲಯಗಳ ಸ್ವಚ್ಛತೆಯ ಜವಾಬ್ದಾರಿಯನ್ನೂ ಸರ್ಕಾರವೇ ಹೊತ್ತುಕೊಳ್ಳುವುದೋ ಹೇಗೆ ಎನ್ನುವುದು. ಶೌಚಾಲಯಗಳು ಗಬ್ಬೆದ್ದು ಹೋದಾಗ ನಿಧಾನವಾಗಿ ಜನ ಮತ್ತೆ "ಬಯಲು ಕಡೆಗೆ" ಅಥವಾ "ಚೆಟ್ಟದ ಕಡೆಗೆ" ಹೋಗುವ ತಮ್ಮ ಅಭ್ಯಾಸವನ್ನು ಮುಂದುವರೆಸುತ್ತಾರೆ. ಸ್ವಚ್ಛವಿರದ ಶೌಚಾಲಯಗಳಿಗಿಂತ ಬಯಲು ಪ್ರದೇಶ ಆರೋಗ್ಯದ ದೃಷ್ಟಿಯಿಂದ ಹೆಚ್ಚು ಸುರಕ್ಷಿತ ಎಂದು ನಮ್ಮ ಜನ ಶತಶತಮಾನಗಳ ಅನುಭವದಿಂದ ಕಂಡುಕೊಂಡಿದ್ದಾರೆ.

ಕಸವಿಲೇವಾರಿಗಿಂತ ನಮಗೆ ಕೂಡಲೇ ಬೇಕಾಗಿರುವುದು ನಮ್ಮ ಮಣ್ಣು ನೀರು ಗಾಳಿಗಳ ಶುದ್ಧತೆ. ಯಾರ ಕಣ್ಣಿಗೂ ಬೀಳದಂತೆ ಇವುಗಳಿಗೆ ಅಪಾಯಕಾರೀ ರೀತಿಯಲ್ಲಿ ನಾವು ವಿಷ ತುಂಬುತ್ತಿದ್ದೇವೆ. ಕಸದಂತೆ ಇದು ನಮ್ಮ ಕಣ್ಣೆದುರಿಗೆ ರಾಚುವುದಿಲ್ಲ. ಹಾಗಾಗಿ ಜನಸಾಮಾನ್ಯರಿಗೆ ಇದರ ಅಪಾಯಗಳ ಅರಿವೂ ಕೂಡ ಇಲ್ಲ. ದುರಂತವೆಂದರೆ ಜನರ ಓಟುಗಳು ನೆಲ ನೀರು ಗಾಳಿಯ ಸ್ವಚ್ಛತೆಯ ಮೇಲೆ ಆಧಾರಿತವಾಗಿಲ್ಲ ಎಂದ ಮೇಲೆ ರಾಜಕಾರಣಿಗಳೇಕೆ ಅದರ ಬಗೆಗೆ ಏಕೆ ಯೋಚಿಸುತ್ತಾರೆ?

ಎಲ್ಲಾ ರೀತಿಯ ಸ್ವಚ್ಛತೆಗಿಂತ ನಮಗೆ ಬಹಳ ತುರ್ತಾಗಿ ಅಗತ್ಯವಿರುವುದು ಬಸವಣ್ಣ ಹೇಳುವ ಅಂತರಂಗ ಶುದ್ಧಿ ಅಥವಾ ಗಾಂಧೀಜಿ ಹೇಳುವ ಆತ್ಮಶುದ್ಧಿ. ಕಾಂಗ್ರೆಸ್ ಅಧಿವೇಶನದಲ್ಲಿ ಕಕ್ಕಸ್ಸುಗಳನ್ನು ಶುಚಿಯಾಗಿಡುವ ಕಾಯಕದ ಮೂಲಕ ತಮ್ಮ ಆತ್ಮಶುದ್ಧಿಯ ಪ್ರಕ್ರಿಯೆಯನ್ನು ಗಾಂಧೀಜಿ ಸಾಂಕೇತಿಕವಾಗಿ ಆರಂಭಿಸಿದ್ದರು. ನಮ್ಮ ರಾಜಕಾರಣಿಗಳಿಂದ ಇಂತಹ ಆತ್ಮಶುದ್ಧಿಯನ್ನು ನಿರೀಕ್ಷಿಸುವ ಮೊದಲು ನಮ್ಮಲ್ಲಿ ಪ್ರತಿಯೊಬ್ಬರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಸ್ವಚ್ಛ ಭಾರತದ ಅಭಿಯಾನವನ್ನು ನಮ್ಮ ಅಂತರಂಗಳಿಂದ ಪ್ರಾರಂಭಿಸದಿದ್ದರೆ ಉಳಿಯುವುದೆಲ್ಲವೂ ಸರ್ಕಾರೀ ಪ್ರಹಸನ ಮಾತ್ರ.

● ನಡಹಳ್ಳಿ ವಸಂತ್, ಶಿವಮೊಗ್ಗ

---

...ನ್ನ ಚಿಕ್ಕ ಕೆರೆಯ ದಂಡೆಯ ಮೇಲೆ ಹುಲಿ ಒಂದು ಹಸುವನ್ನು ...ಟೆಯ ಹಿಂದಷ್ಟೇ ಕೊಂದು ಇನ್ನೂ ತಿನ್ನುತ್ತಾ ಇತ್ತು. ನಾನು ಅಲ್ಲಿ ...ಗಿ ಕಟ್ಟಿದ ಹೋರಿಯನ್ನು ಹಾಗೆಯೇ ಬಿಟ್ಟು ಜನರ ಹಿಂದೆಯೇ ...ಯ ಕಡೆ ದೌಡಾಯಿಸಿದೆ. ಒಬ್ಬ ಮಾರ್ಗದರ್ಶಿಯನ್ನು ಕರೆದುಕೊಂಡು ...ದ್ದ ಸ್ಥಳದ ಕಡೆ ಹೊರಟೆ.

...ಯವರಿಗೆ ಲಾಟೀನುಗಳನ್ನು ಆರಿಸಲು ಹೇಳಿದೆ. ರಸ್ತೆಯಲ್ಲಿ ಸಂಪೂರ್ಣ ... ಕಾರಣ ನನ್ನ ಟಾರ್ಚ್‌ನ್ನು ಬೆಳಗಿಸಿ ಹುಲಿಯಿದ್ದ ದಿಕ್ಕಿನತ್ತ ಹಿಡಿದು ...ದೆ. ಮುಂದುವರೆದಂತೆ ಒಂದು ಸಣ್ಣ ಘರ್ಜನೆಯ ಜೊತೆಗೆ "ವೂಫ್.." ...ಸದ್ದಿನೊಂದಿಗೆ ಹುಲಿ ನಮ್ಮ ಕಣ್ಣಿಗೆ ಬಿತ್ತು. ಸುಮಾರು 200 ಗಜ ... ಅದು ಕೆಂಪಾದ ಎರಡು ಕಣ್ಣುಗಳನ್ನು ನಮಗೆ ತೋರಿಸುತ್ತಿತ್ತು. ...ರೆಯ ದಂಡೆಯ ಮೇಲಿದ್ದುದರಿಂದ ನಾವಿದ್ದ ಸ್ಥಳದಿಂದ ಸ್ವಲ್ಪ ಎತ್ತರದಲ್ಲಿತ್ತು. ...ಬೆಳಕು ಬಂದ ದಿಕ್ಕಿನೆಡೆ ನೋಡುತ್ತಲೇ ಇದ್ದಂತೆ ನಾವು ನಿಶಬ್ದವಾಗಿ ...ಸೆಯತೊಡಗಿದೆವು. ಹಾಗೆಯೇ ಸುಮಾರು ನೂರು ಗಜ ನಡೆದು ...ಯ ಏರಿಯನ್ನು ಹತ್ತಿದೆವು.

...ದು ಘರ್ಜನೆ ಈಗ ಹೆಚ್ಚಾಗತೊಡಗಿತ್ತು. ಸುಮಾರು 100 ಗಜ ...ದ ಉಳಿಯುವಾಗ ನಾನು ಬಂದೂಕನ್ನು ಭುಜದ ಮಟ್ಟಕ್ಕೆ ತಂದು ... ಹಾರಿಸಲು ಸಿದ್ಧನಾಗುತ್ತಿದ್ದೆ. ಅಷ್ಟರಲ್ಲಿ ಧೈರ್ಯಗುಂದಿದ ಅದು ...ಡಾಗಿ ಮೂರು ನಾಲ್ಕು ನೆಗೆತದಲ್ಲಿ ದಂಡೆಯಿಂದ ಬಲಭಾಗಕ್ಕೆ ...ಣ್ಮರೆಯಾಯಿತು.

...ದ ಬಲಭಾಗಕ್ಕೆ ಟಾರ್ಚ್ ಬೆಳಕನ್ನು ಹಾಯಿಸುತ್ತಾ ಹಾಗೇ ಮುಂದುವರೆ ...ಲ್ಲಿ ಒಂದು ದೊಡ್ಡ ಆಲದಮರವಿತ್ತು. ಹುಲಿಗಳು ಸಾಮಾನ್ಯವಾಗಿ ... ಎತ್ತರಕ್ಕೆ ಹತ್ತುವುದಿಲ್ಲ. ಆದರೆ ಆಶ್ಚರ್ಯಕರವಾಗಿ ಈ ಹುಲಿ ... ಸುಮಾರು ಹದಿನೈದು ಅಡಿ ಎತ್ತರದಲ್ಲಿ ನಾವಿದ್ದ ಕೆರೆ ದಂಡೆಯ ... ಮರದ ಕವಲಿನಲ್ಲಿ ಕುಳಿತಿತ್ತು. ಆಗ ನಾನು ಅದರ ಆಕಾರವನ್ನು ... ನೋಡುವ ಸ್ಥಿತಿಯಲ್ಲಿದ್ದೆ. ಕಣ್ಣುಗಳ ಮಧ್ಯೆ ಎಚ್ಚರಿಕೆಯಿಂದ ಗುರಿ ... ಗುಂಡು ಹಾರಿಸಿದೆ. ಆಗ ಹುಲಿ ನೆಲಕ್ಕೆ ಬಿದ್ದ ದೊಡ್ಡ ಸದ್ದಿನೊಡನೆ ... ಕಿರುಚಿದ ಶಬ್ದವೂ ಕೇಳಿಬಂತು. ನಂತರ ಮೌನ ಆವರಿಸಿಕೊಂಡಿತು.

... ಟಾರ್ಚಿನ ಬೆಳಕನ್ನು ಕೆರೆಯ ಏರಿಯ ಕೆಳಗೆ ಹಾಯಿಸುತ್ತಾ ...ದೆ. ಆದರೆ ಆ ಪೊದೆಗಳ ಮಧ್ಯದಿಂದ ಯಾವುದೇ ಸದ್ದು ಕೇಳಿಬರಲಿಲ್ಲ.



ನನ್ನ ಗುಂಡು ಗುರಿ ಮುಟ್ಟಿದೆ ಎಂದು ನನಗೆ ಖಾತ್ರಿ ಇದ್ದುದರಿಂದ ನಾನು ಮರುದಿನ ಬೆಳಗ್ಗೆ ಬಂದು ಹುಡುಕಲು ನಿರ್ಧರಿಸಿದೆ. ತುಮಕೂರಿಗೆ ಹೋಗಿ ಮರುದಿನ ಬೆಳಗ್ಗೆ ಹುಲಿಯ ಶವವನ್ನು ನೋಡುವ ನಿರೀಕ್ಷೆಯಲ್ಲಿ ನಿದ್ದೆಹೋದೆ.

## ಹುಲಿಯ ಅಂತಿಮ ಹೋರಾಟ


ಮರುದಿನ ಬೆಳಗ್ಗೆ ಮಾರ್ಗದರ್ಶಿಯನ್ನು ಕರೆದುಕೊಂಡು ಕೆರೆಯ ಬಳಿ ಬಂದು ಎಚ್ಚರಿಕೆಯಿಂದ ದಂಡೆಯನ್ನು ಇಳಿಯುತ್ತಾ ಆಲದ ಮರದ ಬಳಿ ಬಂದೆವು. ಹುಲಿ ಮರದಿಂದ ಬಿದ್ದ ಸ್ಥಳದಲ್ಲಿ ರಕ್ತ ಚೆಲ್ಲಾಡಿದ್ದಲ್ಲದೆ ಮೂಳೆಯ ಚೂರು ಬಿದ್ದಿರುವುದು ಕಂಡಿತು. ಮರದ ಮೇಲೆ ಅದು ಕುಳಿತಿದ್ದ ಜಾಗದಲ್ಲೂ ರಕ್ತದ ಗುರುತುಗಳಿದ್ದವು. ನಾವು ರಕ್ತದ ಜಾಡನ್ನು ಹಿಡಿದು ಮುಂದುವರೆದಂತೆ ಹುಲಿಯ ತಲೆಗೆ ಗುಂಡೇಟು ಬಿದ್ದಿರುವುದು ಖಚಿತವಾಯಿತು. ಅದು ಕುರುಡಾಗಿರುವ ಸಾಧ್ಯತೆಯೂ ಇದ್ದು ಬಿದ್ದ ಏಟಿನ ಆಘಾತಕ್ಕೆ ವೃತ್ತಾಕಾರವಾಗಿ ಸುತ್ತಿರುವಂತೆ ಕಾಣುತ್ತಿತ್ತು. ಮುಂದೆ ಒಂದು ಸ್ಥಳದಲ್ಲಿ ಹುಲಿ ರಾತ್ರಿಯನ್ನು ಕಳೆದುದರ ಗುರುತಾಗಿ ರಕ್ತ ದೊಡ್ಡದಾಗಿ ಮಡುವುಗಟ್ಟಿತ್ತು. ಬೆಳಗಿನ ಹೊತ್ತಿಗೆ ರಕ್ತಸ್ರಾವ ನಿಂತಿದ್ದು ಅದು ಅಲ್ಲಿಂದ ಮುಂದೆ ಹೋದಂತೆ ಕಾಣುತ್ತಿತ್ತು. ಆ ಜಾಗದಿಂದ ರಕ್ತದ ಬಿಂದುಗಳ ಗುರುತು ದಟ್ಟವಾದ ... ಪೊದೆಗಳ ಕಡೆಗೆ ಹೋಗಿತ್ತು. ಸುಮಾರು ಇನ್ನೂರ ಅಡಿ ಉದ್ದವಿದ್ದ ಆ ಪೊದೆಗಳ ಸಮೂಹದ ಅಗಲ ಬೇರೆಬೇರೆ ಅಳತೆಯಲ್ಲಿತ್ತು.

ನಾವು ಈ ಪೊದೆಗಳನ್ನು ಒಂದು ಸುತ್ತುಹಾಕಿ ಹುಲಿ ಅದರಿಂದ ಹೊರಗೆ ಹೋಗಿಲ್ಲವೆಂದು ಖಚಿತಪಡಿಸಿಕೊಂಡೆವು. ಹುಲಿಯು ಈ ಪೊದೆಯೊಳಗೆ ಇರುವುದೇನೋ ನಿಜ. ಆದರೆ ಅದು ಜೀವಂತವಿದೆಯೋ ಅಥವಾ ಸತ್ತಿದೆಯೋ ಎನ್ನುವುದರ ಆಧಾರದ ಮೇಲೆ ನಮ್ಮ ಸಾವುಬದುಕುಗಳೂ ನಿಂತುಕೊಂಡಿತ್ತು.

ರಕ್ತದ ಜಾಡು ಪೊದೆಯೊಳಕ್ಕೆ ಹೋಗಿದ್ದ ಸ್ಥಳದಿಂದ ನಮ್ಮ ಹುಡುಕಾಟವನ್ನು ಮತ್ತೆ ಶುರುಮಾಡಿದೆವು. ಇಬ್ಬರೂ ಒಟ್ಟಾಗಿ ನಿಂತುಕೊಂಡು ಪೊದೆಗಳ ಕಡೆ ಕಲ್ಲನ್ನು ಬೀಸುತ್ತಾ ಹೊರಟೆವು. ನಾನು ಲಂಟಾನ ಪೊದೆಗಳ ಕಡೆ ಐದು ಗುಂಡುಗಳನ್ನೂ ಹಾರಿಸಿದೆ. ಆದರೆ ಪೊದೆಗಳಿಂದ ಯಾವುದೇ ಪ್ರತ್ಯುತ್ತರ ಬರಲಿಲ್ಲ. ಹೀಗೆ ಮುಕ್ಕಾಲು ದೂರವನ್ನು ಕ್ರಮಿಸಿದಾಗ ಪೊದೆಗಳ ಮಧ್ಯೆ ಇದ್ದ ಸುಮಾರು 12 ಅಡಿ ಎತ್ತರದ ಮರವೊಂದು ಕಂಡಿತು. ನನ್ನ ಜೊತೆಗಾರ ಸುತ್ತಲಿನ ಸ್ಥಳವನ್ನು ಸರಿಯಾಗಿ ನೋಡುವ ಉದ್ದೇಶದಿಂದ ಮರದ ಕಡೆ ನಡೆದು ಅದನ್ನು ಹತ್ತಲು ಶುರುಮಾಡಿದ. ಆಗ ಯಾವುದೇ ಮುನ್ಸೂಚನೆ ಇಲ್ಲದೆ ಒಂದೇ ಘರ್ಜನೆಯೊಂದಿಗೆ ಹೊರಬಂದ ಹುಲಿ ಅವನ ಕಡೆ ಆಕ್ರಮಣ ಮಾಡಿತು. ಆ ವ್ಯಕ್ತಿ ಭಯದಿಂದ ಕೂಗಾಡಲು ಪ್ರಾರಂಭಿಸಿದ. ಸುಮಾರು ಇಪ್ಪತ್ತು ಗಜ ದೂರವಿದ್ದ ನಾನು ತಕ್ಷಣ ಹುಲಿಯ ಕಡೆ ಮೂರು ಗುಂಡನ್ನು ಹಾರಿಸಿದೆ. ಹುಲಿ ಹಿಂದೆ ಹಾರಿ ಲಂಟಾನಾ ಪೊದೆಯೊಳಗೆ ಬಿತ್ತು. ಕೊನೆಗೂ ಈ ವಿಚಿತ್ರ ಏಕಾಂಗಿ ನರಪೀಡಕ ಹುಲಿ ಸತ್ತು ಹೋಯಿತು.

ಈ ಹುಲಿಗೆ ಸಾಕಷ್ಟು ವಯಸ್ಸಾಗಿದ್ದು ಅದರ ಹಲ್ಲುಗಳು ಮೊಂಡಾಗಿದ್ದವು. ಆದ್ದರಿಂದ ಸಾಕುಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು ಸಾಧ್ಯವಾಗುವಂತೆ ಮನುಷ್ಯರು ವಾಸಿಸುವ ಪ್ರದೇಶದ ಹತ್ತಿರಕ್ಕೆ ಅದು ಬಂದು ಸೇರಿಕೊಂಡಿತ್ತು. ಹಸಿವು ಮತ್ತು ವೃದ್ಧಾಪ್ಯದಿಂದಾಗಿ ಅದು ಬಹಳ ಬೇಗ ಆವೇಶಕ್ಕೊಳಗಾಗುತ್ತಿತ್ತು. ಸದ್ಯಕ್ಕೆ ಅದು ಮನುಷ್ಯರನ್ನು ಕೇವಲ ದ್ವೇಷಿಸುತ್ತಿದ್ದರೂ, ನಿಧಾನವಾಗಿ ನರಭಕ್ಷಕನಾಗಿ ರೂಪಾಂತರಗೊಳ್ಳುತ್ತಿತ್ತು ಎನ್ನುವುದರಲ್ಲಿ ನನಗೆ ಕಿಂಚಿತ್ತೂ ಅನುಮಾನವಿರಲಿಲ್ಲ. ನಾನು ರಾತ್ರಿ ಹೊಡೆದ ಗುಂಡು ಹುಲಿಯ ಮೂಗಿಗೆ ಬಡಿದು ಅಲ್ಲಿನ ಮೂಳೆಯನ್ನು ಮುರಿದಿದ್ದರೂ ಅದನ್ನು ಕೊಲ್ಲುವಷ್ಟು ಆಳವಾಗಿ ಮಿದುಳನ್ನು ಹೊಕ್ಕಿರಲಿಲ್ಲ. ಹಾಗಾಗಿ ಮಾರನೆಯ ದಿನ ನಾವು ಅದನ್ನು ... ರಾತ್ರಿಯೆಲ್ಲಾ ಸಾಕಷ್ಟು ರಕ್ತಸ್ರಾವವಾಗಿದ್ದರೂ ಅದು ನಿಧಾನವಾಗಿ ಚೇತರಿಸಿಕೊಂಡು ಬದುಕಿ ಉಳಿಯುವ ಸಾಧ್ಯತೆ ಇತ್ತು. ●

# ರೈತರ ಪುಸ್ತಕ ಲೋಕದಲ್ಲಿ ಒಂದಷ್ಟು ಹೊತ್ತು..




ರೈತರ ಪುಸ್ತಕಲೋಕ ಎಂದರೆ ಅಚ್ಚರಿ ಎನಿಸದಿರದು. ಏಕೆಂದರೆ ರೈತ ಮತ್ತು ಪುಸ್ತಕ ಎಂಬ ಎರಡು ಪದಗಳು ಒಂದೆಡೆ ಕಲ್ಪಿಸುವಾಗಲೇ ಒಂದು ಬಗೆಯ ವೈರುಧ್ಯ ಕಾಡಿತು. ನಮ್ಮ ದೇಶದಲ್ಲಂತೂ ರೈತ ಅತಿದೊಡ್ಡ ಅನಕ್ಷರಸ್ಥ ಸಮುದಾಯದ ಪ್ರತಿನಿಧಿ. ಸ್ವತಂತ್ರ ಭಾರತದ ಆದಿಭಾಗದಲ್ಲಂತೂ ಓದು ಬಲ್ಲವರು ಯಾರೂ ಕೃಷಿಯನ್ನು ವೃತ್ತಿಯಾಗಿ ಆರಿಸಿಕೊಂಡವರಲ್ಲ. ಇದೇ ಸಂಸ್ಕೃತಿ ಇಂದಿಗೂ ಬೆಳೆದು ಅತೀ ಕಡಿಮೆ ಓದಿದವ ಅಥವಾ ಓದು ತಲೆಗೆ ಹತ್ತದವನೆಂದು ಕರೆಯಿಸಿಕೊಂಡವರು ರೈತಾಪಿಗೆ ಇಳಿಯುತ್ತಾರೆ. ಅಂದಮೇಲೆ ಪುಸ್ತಕವೆಂದರೆ ಅಲರ್ಜಿಯುಳ್ಳವರೂ, ದೂರ ಉಳಿದವರೂ ರೈತರಾಗಿರಬೇಕಷ್ಟೆ. ಅಷ್ಟಕ್ಕೂ ಸಾಲದೆಂಬಂತೆ, ನಮ್ಮ ದೇಶಿಯ ಕೃಷಿ ತಂತ್ರಜ್ಞರೂ ಕೂಡ ರೈತ ಭಾಷೆಯಲ್ಲಿ ವ್ಯವಹರಿಸುವ ಪ್ರೀತಿಯನ್ನು ತೋರುವ ಧಾರಾಳಿಗಳಲ್ಲ, ರೈತರ ಕುರಿತ ಇವರ ಆಸಕ್ತಿಗಳು ಮೇಳಗಳ ವೈಭವದಲ್ಲೇ ಕಳೆದುಹೋಗಿವೆ. ಅಂದಮೇಲೆ ಇವರಿಂದ ರೈತರ ಪುಸ್ತಕಗಳನ್ನು ನಿರೀಕ್ಷಿಸುವುದಾದರೂ ಹೇಗೆ?

ಹಾಗೆಂದರೆ ಪುಸ್ತಕಗಳೇ ಇಲ್ಲ ಎಂದು ಹೇಳುತ್ತಿಲ್ಲ. ಸುಮಾರು 800ಕ್ಕೂ ಹೆಚ್ಚು ಪುಸ್ತಕಗಳು ಕೃಷಿ ಸಂಬಂಧಿತ ವಿಚಾರಗಳಲ್ಲಿ ಈವರೆಗೂ ಪ್ರಕಟಗೊಂಡಿದೆ. ನಮ್ಮ ರೈತರ ಒಟ್ಟಂದದಲ್ಲಿ ಇಂತಹ ಪುಸ್ತಕ ತಮ್ಮಲ್ಲಿ ಬೆಳಕು ಮೂಡಿಸಿದೆ ಎಂದು ಹೇಳುವ ಕೆಲಸವನ್ನು ನಮ್ಮವರ್‍ಯಾರು ಮಾಡಿಲ್ಲ ಎನ್ನುವುದು ನಾಚಿಕೆಗೇಡಿನ ಸಂಗತಿಯೇ ಸರಿ. ಬಹಳಷ್ಟು ಕೃಷಿ ವಿಜ್ಞಾನದ ಆಸಕ್ತರು, ಮೊದಲು ದಶಕಗಳಲ್ಲಿ ಸುಲಭ ಸಾಧ್ಯವಾದ ಸರ್ಕಾರಿ ಕೆಲಸದ ಆಸಕ್ತಿಯಿಂದ ಕೃಷಿ ಪರಿಣಿತರಾದರೇ ವಿನಃ ರೈತರನ್ನು ತಲುಪುವ ಆಸಕ್ತಿಯಿಂದಲ್ಲ. ಕೃಷಿಕರನ್ನೆ ನೇರವಾಗಿ ಓದುಗರನ್ನಾಗಿ ಆಲೋಚಿಸಿ ಗಮನಿಸಿ ಬರೆದಂತಹ ಪುಸ್ತಕಗಳೇ ತೀರ ಇತ್ತೀಚಿನವರೆಗೂ ಬರಲಿಲ್ಲ. ಪ್ರಕಟವಾದ ಪುಸ್ತಕಗಳೂ ಸಹ ರೈತನಲ್ಲಿ ಕ್ರಾಂತಿಯನ್ನುಂಟು ಮಾಡಲಿಲ್ಲ ಎಂಬುದು ಅಪ್ರಿಯವಾದರೂ ಸತ್ಯ. ಅದಕ್ಕೂ ಬದಲಾಗಿ ಕೃಷಿಯನ್ನೇ ಒಂದು ವೃತ್ತಿಯಾಗಿ ಅನಿವಾರ್ಯವಾಗಿ ನಿರ್ವಹಿಸುವರರೇ ಅಧಿಕ ವಿನಃ ಅಪೇಕ್ಷೆಯಿಂದ ಆಯ್ದುಕೊಂಡವರು ಅಪರೂಪ. ಕೃಷಿ ನಮ್ಮ ಸಮಾಜದಲ್ಲಿ ಅತ್ಯಂತ ಕೆಳಸ್ತರದ ವೃತ್ತಿಗಳಲ್ಲೊಂದು. ಸಣ್ಣ ಹಿಡುವಳಿದಾರರನ್ನು ಹೀನಾಯವಾಗಿ ಕಂಡ ಪರಂಪರೆ ಕೃಷಿ ವಿಜ್ಞಾನದ್ದು. ಸಣ್ಣ ರೈತರು ಎಂದರೆ ದೊಡ್ಡ ಸಂಖ್ಯೆ ರೈತರು ಎಂಬ ಭಾವನೆಯನ್ನೇ ಕೃಷಿ ನೀತಿ ಶಾಸ್ತ್ರಜ್ಞರೂ ಪರಿಣಿತರೂ ಸ್ವಾತಂತ್ರ್ಯೋತ್ತರದಲ್ಲೂ ಅರಿತವರಲ್ಲ. ವಸಾಹತುಶಾಹಿ ಕಲಿಕೆಯಿಂದ, ಆಳುವ ವರ್ಗದ ಸೋಗಿಗೆ ತಂತ್ರಜ್ಞಾನವನ್ನು ರೂಪಿಸುವ, ಅದನ್ನೇ ಸಾಕ್ಷಾತ್ಕಾರದ ಮಾದರಿ ಎಂದೇ ಹೇಳಿದ ಸಂದರ್ಭದಿಂದ ರೈತಪರ ನಿರೀಕ್ಷೆಗಳು ಕಡಿಮೆಯೆ. ಸಣ್ಣ ಹಿಡುವಳಿಗಳೇ ರೈತೋದ್ಯಮಕ್ಕೆ ಮಾರಕ ಎಂಬವರು. ಶೇ. 90 ಕ್ಕೂ ಹೆಚ್ಚು ಜನರ ಬದುಕುವ ಹಕ್ಕನ್ನೇ ನಿಕೃಷ್ಟವಾಗಿ ಕಂಡ ಮನಸ್ಸು ಪುಸ್ತಕ ರೂಪಿಸುವುದಾದರೂ ಹೇಗೆ?


ಇಂತಹ ನೇರ ಆರೋಪದ ಮಾತುಗಳಿಂದ ಪುಸ್ತಕಗಳು ರೈತರ ಪರವಾಗಿಲ್ಲವೇ ಇಲ್ಲ ಎಂಬ ವಿಚಾರವನ್ನು ಮಾತ್ರ ಹೇಳುತ್ತಿಲ್ಲ, ಜತೆಗೆ ವಾಸ್ತವವಾಗಿ ರೈತನಿಗೆ ಎಂತಹ ಪುಸ್ತಕ ಬೇಕು ಎಂಬ ಕಲ್ಪನೆಯೇ ಅರ್ಥವತ್ತಾಗಿ ವಿಕಾಸಗೊಳ್ಳಲಿಲ್ಲ, ಎಂಬುದನ್ನೂ ಕೂಡ. ಇಂತಹ ಪುಸ್ತಕ ಪ್ರಪಂಚದ ವಿಕಾಸದ ಅವಶ್ಯಕತೆಗಳನ್ನು ಚರ್ಚಿಸುವುದಕ್ಕೂ ಮುನ್ನ ಸ್ವಲ್ಪ ಕ್ರಾಂತಿ ಎಬ್ಬಿಸಲು ಕಾರಣವಾದ ಪುಸ್ತಕಗಳ ಉದಾಹರಣೆಗಳನ್ನು ಪರಿಚಯಿಸುವುದು ಇಲ್ಲಿನ ಉದ್ದೇಶ.

## ಒಂದು ಹುಲ್ಲಿನ ಕ್ರಾಂತಿ

1984 ರಲ್ಲಿ 'ಒಂದು ಹುಲ್ಲಿನ ಕ್ರಾಂತಿ' ಎನ್ನುವ ಪುಸ್ತಕ ಭಾರತದ ರೈತರ ಬದುಕಿನಲ್ಲಿ ಆಸೆ ಹೊತ್ತವರಲ್ಲಿ ಕ್ರಾಂತಿಯ ಕಿಡಿಯನ್ನು ಹಚ್ಚಿತು. ಜಪಾನಿನ ಕೃಷಿ ತಜ್ಞ ಮಾಸುನಾಬು ಫುಕುವೊಕಾ ಎಂಬುವರು 1978 ರಲ್ಲಿ ರಚಿಸಿದ ಪುಸ್ತಕ ನಿಜಕ್ಕೂ ರೈತರಲ್ಲಿ ಕ್ರಾಂತಿಯ ಅಲೆ ಎಬ್ಬಿಸಿದ್ದು, ನಂತರ ಹಲವಾರು ಬಾರಿ ಮರುಮುದ್ರಣಗೊಂಡಿದೆ. ರೈತರಿಗಾಗಿ ಪುಸ್ತಕ ಎನ್ನುವ ಸಂಸ್ಕೃತಿಯನ್ನೇ ಹುಟ್ಟುಹಾಕಿದ ಕೀರ್ತಿ ಈ ಪುಸ್ತಕದ್ದೇ ಎಂದರೆ ಯಾವುದೇ ಉತ್ಪ್ರೇಕ್ಷೆಯಲ್ಲ. 'ಒಂದು ಹುಲ್ಲಿನ ಕ್ರಾಂತಿ' ಪುಸ್ತಕವನ್ನು ಮೊದಲು ನಮ್ಮ ದೇಶಕ್ಕೆ ಪರಿಚಯಿಸಿದ್ದು ಮಧ್ಯಪ್ರದೇಶದ ರಸೂಲಿಯಾ ಎಂಬಲ್ಲಿ ಕೃಷಿಯ ಜತೆ ಅನುಸಂಧಾನ ಮಾಡುತ್ತಿದ್ದ ಪ್ರತಾಪ್ ಅಗರ್‌ವಾಲ್ ಎಂಬ ಓರ್ವ ಸಮಾಜಶಾಸ್ತ್ರಜ್ಞರು. ಅಂಚೆಯಲ್ಲಿ ಅದನ್ನು ಪಡೆದ ಕ್ಷಣದಿಂದ ತೆರೆದು ಓದತೊಡಗಿದ ಅವರಿಗೆ ಸಂಜೆಯಾದದ್ದೇ ತಿಳಿಯಲಿಲ್ಲ ಎಂದು ಆ ಕೃತಿಯ ಹೆಗ್ಗಳಿಕೆ ಕುರಿತು ವ್ಯಾಖ್ಯಾನಿಸಿದ್ದಾರೆ. ಅದನ್ನು ಕನ್ನಡಕ್ಕೆ ಅನುವಾದಿಸಿ ಪರಿಚಯಿಸಿದವರು ಮೇಲುಕೋಟೆಯ ಸಂತೋಷ ಕೌಲಗಿ ಅವರು. ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ಇದರ ಪ್ರಕಾಶಕರು. ಕೃಷಿಯನ್ನು ನಿಸರ್ಗಕ್ಕೆ ಹತ್ತಿರವಾಗಿ ಚರ್ಚಿಸಿದ್ದ ಅಮೂಲ್ಯ ಪುಸ್ತಕ ಇದು. ಈಗಾಗಲೇ ಇದರ ಹಲವಾರು ಬಗೆಯ ಪರಿಚಯವೂ ಅನೇಕ ರೀತಿಯಲ್ಲಿ ಆಗುತ್ತಿದೆ.

## ಆಗ್ರಿಕಲ್ಚರಲ್ ಟೆಸ್ಟ್‌ಮೆಂಟ್

1940ರ ದಶಕದಲ್ಲೇ ಭಾರತೀಯ ಅನುಭವದಿಂದ, ಭಾವನೆಗಳು ತುಂಬಿದ ಕೃಷಿ ವಿಚಾರಗಳ ಪುಸ್ತಕವೊಂದು ಬ್ರಿಟಿಷ್ ಲೇಖಕನಿಂದ ಹೊರಬಂದಿತ್ತು. ರೈತರ ಅದ್ಭುತ ಮಹತ್ವಾಕಾಂಕ್ಷೆಗಳ ಕನಸುಗಳನ್ನು ಬೆಳೆಸುವಂತಹ ಹೊಸ ಕನಸುಗಳನ್ನು ಕಟ್ಟುವ ಸಾಧ್ಯತೆ ಇದ್ದ ಈ ಪುಸ್ತಕ ರೈತರಿಗಿರಲಿ, ಕೃಷಿ ವಿಜ್ಞಾನದ ವಿದ್ಯಾರ್ಥಿಗಳಿಗೂ 1980 ರ ದಶಕದವರೆಗೂ ಅರಿವಿಗೆ ಬರಲಿಲ್ಲ. 1990 ರ ದಶಕದಲ್ಲಿ ರೈತರು ತಮ್ಮ ಅಸಾಂಪ್ರದಾಯಿಕ ಬೆಳೆಯ ಪದ್ಧತಿಗಳತ್ತ ವಾಲತೊಡಗಿದಾಗ, ಅಂತಹ ಪರ್ಯಾಯ ಮನಸ್ಸನ್ನು ಬೆಂಬಲಿಸಬಲ್ಲ ಆಯಾಮದ ಈ ಪುಸ್ತಕ ದೇಶಾದ್ಯಂತ ಪ್ರಚಾರಕ್ಕೆ ಬಂತು. ಮಧ್ಯಪ್ರದೇಶದಲ್ಲಿ ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸರ್ ಅಲ್ಬರ್ಟ್ ಹೋವರ್ಡ್ ಎಂಬ ವಿಜ್ಞಾನಿ ಇದರ ಲೇಖಕರು. ರೈತರ ನೆಮ್ಮದಿಯ ಕನಸುಗಳು ಬಿತ್ತಬಲ್ಲ ವಿಶ್ವಾಸವುಳ್ಳ ಈ ಪುಸ್ತಕವೂ ಅದಾವ ಮಾಯೆಯಿಂದಲೋ 3-4 ದಶಕಗಳ ಕಾಲ ರೈತರಿಂದ ವಂಚಿತವಾಗಿತ್ತು! ಸಾವಯವ ಕೃಷಿಯ ಹರಿಕಾರರೂ ಆದ ಈ ವಿಜ್ಞಾನಿಯೇ ಇದೇ ಕೃತಿಯ ಮೂಲಕವೇ ಆರೋಗ್ಯಕರ ಮತ್ತು ಸುಸ್ಥಿರವಾದ ಆಹಾರ ಉತ್ಪಾದನೆಯ ಚಿಂತನೆಗಳನ್ನು ಪ್ರತಿಪಾದಿಸಿದ್ದರು. ಕೃಷಿಯ ಪರಿಸರವನ್ನು ವೈಜ್ಞಾನಿಕವಾಗಿ ಹಾಗೂ ಸಮರ್ಥವಾಗಿ ಚರ್ಚಿಸಿದ್ದ ಅಪೂರ್ವ ಕಥಾನಕ. ಅದೃಷ್ಟವಶಾತ್ ಇದು 'ಹೀಗೊಂದು ಕೃಷಿ ಸಂಹಿತೆ'ಯಾಗಿ ಕನ್ನಡಕ್ಕೂ ಬಂದಿದೆ. ಕರ್ನಾಟಕದಲ್ಲಿಯೂ ರೈತರಿಗೂ ಪುಸ್ತಕ ಪ್ರಪಂಚ ಎನ್ನುವುದಿದೆ, ಎಂಬ ಚಿಂತನೆಗೆ ಅಮೂಲ್ಯವಾದ ತಳಹದಿಯನ್ನು ಹಾಕಿದ್ದೇ ಈ ಪುಸ್ತಕಗಳು.




## ರೈತರಿಗಾಗಿ ಪುಸ್ತಕ

ವಿಕಾಸ, ವಾಸ್ತವ ಮತ್ತು ಪರಂಪರೆ ಮೊದಲ ಮಾತುಗಳಲ್ಲಿ ರೈತರಿಗಾಗಿ ನಮ್ಮವರದೇ ಆದ ಪುಸ್ತಕಗಳು ಬಂದಿಲ್ಲ ಎಂದು ನೇರವಾಗಿ ಹೇಳಿದ ಮೇಲೆ ವಿಕಾಸವಾದರೂ ಎಂತಹುದು? ಇಂತಹ ಆಲೋಚನೆಗಳು ನಿಜಕ್ಕೂ 1970ರ ದಶಕದಲ್ಲಿ ಮೊದಲು ಆರಂಭಗೊಂಡವು. ಆದರೂ ಆಗಿನ ಹಸಿರುಕ್ರಾಂತಿಯ ದೌಡುಗಳು ಮಾತ್ರ ಕೇವಲ ಉತ್ಪಾದನೆಯಲ್ಲೇ ಮುಖ್ಯ ಗುರಿಯಾಗಿಟ್ಟುಕೊಂಡು ರೈತರ ಆಕರ್ಷಣೆಗೆ ಮೊದಲಾಗಿದ್ದವು. ಹಾಗಾಗಿ ಕೇವಲ ಗೊಬ್ಬರಗಳು, ಅಧಿಕ ಇಳುವರಿ ತಳಿಗಳು ಮುಂತಾದ ಹೆಸರಿನಲ್ಲಿ ಹೊಸ ಹೊಸ ಪರಿಕರಗಳ ಪರಿಚಯಿಸುವ ವಿವರದ ಪುಸ್ತಕ ಮತ್ತು ಬರಹಗಳಷ್ಟೇ ಮುಖ್ಯವಾಗಿದ್ದವು. ರಾಸಾಯನಿಕ ಗೊಬ್ಬರ, ಬೀಜ ಕೀಟನಾಶಕ ಮುಂತಾದವುಗಳು ರೂಪದಲ್ಲಿ ರೈತರನ್ನು ಹೊಸ ತಂತ್ರಜ್ಞಾನಗಳೆಂದು ಪರಿಚಯಿಸಬೇಕಿತ್ತು, ಅಲ್ಲದೆ ಇವೇ ಆಹಾರದ ಉತ್ಪಾದನೆಯ ಪ್ರಮುಖ ಸಾಧನಗಳು ಎಂದು ಆಧುನಿಕ ಕೃಷಿ ಪದ್ಧತಿಯ ಕಲಿಕೆಯಲ್ಲೂ ಸೇರಿದ್ದವು. ಕಳೆದ ಶತಮಾನದ ಪ್ರಮುಖ ಬೆಳವಣಿಗೆಯಾಗಿ ಗುರುತಿಸಲಾದ ಈ ತಂತ್ರಜ್ಞಾನಗಳ ಅವಸರದ ನಡೆಗಳೇ ಮುಖ್ಯವಾಗಿದ್ದವು. ಕೃಷಿ ಜ್ಞಾನಕ್ಕೂ ಅತ್ಯಂತ ಬೇಗ ಎಂದರ್ಥದಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಬೆಂಬಲಿಸುವ ಪುಸ್ತಕಗಳಾದವು. ಇವು ಯಾವುವೂ ಸಹ ಕ್ರಾಂತಿಕಾರಕ ಎನ್ನುವಂತಹ ಸಾಧ್ಯತೆಗೆ ತಲುಪಲೇ ಇಲ್ಲ.

## ಕೃಷಿ ಜ್ಞಾನ ಪ್ರದೀಪಿಕೆ

ನಮ್ಮ ಸಂಸ್ಕೃತಿಯ, ಪರಿಸರದ ಒಂದು ಸಂದರ್ಭವನ್ನು ಇಲ್ಲಿ ಪ್ರಸ್ತಾಪಿಸಲೇ ಬೇಕು. 'ಕೃಷಿ ಜ್ಞಾನ ಪ್ರದೀಪಿಕೆ' ಎಂಬ ಕನ್ನಡದ ಕೃಷಿ ಪ್ರಾಯೋಗಿಕ ಜ್ಞಾನದ ಪುಸ್ತಕವೊಂದನ್ನು ಘನಮಠ ಶಿವಯೋಗಿಗಳು 1879 ರಲ್ಲಿ ರಚಿಸಿದ್ದರು. ಇದನ್ನು ನಮ್ಮ ಪರಂಪರೆಯ ಹಳೆಯ ತಲೆಮಾರಿನ ದಾಖಲೆಯಾಗಿ ಮತ್ತು ದೇಸಿ ಕೃಷಿ ತಂತ್ರಜ್ಞಾನದ ದಾಖಲೆ ಎಂದು ಗುರುತಿಸುವಂತಾಯಿತೆ ವಿನಃ ರೈತರನ್ನು ತಲುಪುವ ಮಟ್ಟದಲ್ಲಿ ಅರಿವಾಗಲಿಲ್ಲ, ದೇಸೀಯ ಕೃಷಿ ಚಿಂತನೆಗಳ ಜ್ಞಾನದ ಹುಡುಕಾಟಗಳ ಇತಿಹಾಸದಲ್ಲಿ ಕನ್ನಡದ ಒಂದು ಅತ್ಯಮೂಲ್ಯ ಮಾದರಿ ಇದು ಎಂದರೆ ಆಶ್ಚರ್ಯವಲ್ಲ. ಇದೊಂದು ದಾಖಲಾರ್ಹ ಪುಸ್ತಕವಾಯಿತೆ ಹೊರತು ರೈತರ ಪುಸ್ತಕವಾದದ್ದರ ಬಗ್ಗೆ ಒಮ್ಮತವಿಲ್ಲ. ಹಸಿರುಕ್ರಾಂತಿಯ ಫಲವೆಂಬಂತೆ, ಹೊಸ ಹೊಸ ಗೊಬ್ಬರ, ರಸಾಯನಿಕಗಳು, ರೈತ ಪದ್ಧತಿಗಳು, ಕಂಪನಿ ಪ್ರಚೋದಿತ ಆವಿಷ್ಕಾರಗಳು ರೈತನ ಮನೆಯ ಬಾಗಿಲು ತಟ್ಟಬೇಕಿತ್ತು. ಈ ಕಾರಣದಿಂದ ಪ್ರಚಾರವನ್ನೇ ಪ್ರಬಲವಾಗಿಟ್ಟುಕೊಂಡು ಮತ್ತು ಜನರಲ್ಲಿ ಅರಿವಿನ ಸಾಧನೆಗೆ ಕೈಹಾಕಿದ್ದರಲ್ಲಿ ಕೃಷಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗವೂ ಒಂದು. ಈಗಾಗಲೇ ನೂರಾರು ಕೃಷಿ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿದ ಇದು ಕೃಷಿಯ ಕಲಿಕೆಯನ್ನು ಮೂಲ ಉದ್ದೇಶವಾಗಿಟ್ಟುಕೊಂಡು ಪುಸ್ತಕಗಳನ್ನು ಹೊರತಂದಿದೆ ಮತ್ತು ಇವು ರೈತರ ಪುಸ್ತಕಗಳಾಗಲೇ ಇಲ್ಲ, ಇವು ಗ್ರಾಮೀಣ ಕೃಷಿ ಆಸಕ್ತರ ಕಲಿಕೆಗೆ, ಕೃಷಿ ವಿಜ್ಞಾನವೆಂಬ ವಿಶ್ವವಿದ್ಯಾಲಯದ ಪದವಿ ಪತ್ರಗಳಾಗಿ ರೂಪಗೊಂಡವು. ಈ ಬಗೆಯ ಬರವಣಿಗೆಗಳು, ವಿಜ್ಞಾನದ ಆಮದುಗಳಾದವು. ಏಕೆಂದರೆ ನಮಗೆ ವಿಜ್ಞಾನವೇ ಆಮದಾದ ಪರಂಪರೆ. ಅಂದಮೇಲೆ ಅದರ ಕುರಿತ ಎಲ್ಲಾ ಜ್ಞಾನಶಿಸ್ತುಗಳ ವಿಚಾರಗಳೂ ಆಮದಾದವೇ. ಹಾಗಾಗಿ ಅವು ಆರಂಭವಾದದ್ದು ಭಾಷಾಂತರಗಳಿಂದ. ಕೃಷಿ ಸಂಬಂಧಿತ ಪುಸ್ತಕಗಳೂ ಕನ್ನಡಕ್ಕೆ ಅನುವಾದಗೊಂಡ 'ಒಂದು ಹುಲ್ಲಿನ ಕ್ರಾಂತಿ'ಯಾಗಲಿ, 'ಹೀಗೊಂದು ಕೃಷಿ ಸಂಹಿತೆ'ಯಾಗಲಿ ಜನಪರ ರೈತರ ಪರವಾದ ವಿಶ್ವಾಸಗಳಿಂದ ರೈತರ ಪುಸ್ತಕಗಳಾದವು. ಆದರೆ ಬೇರೆ ಅನುವಾದಗಳು ಮತ್ತು ಅದೇ ಪಾಶ್ಚಾತ್ಯ ವಿಜ್ಞಾನ ಅನುವಾದದ ಆಮದುಗಳಾದವು. ಬಹುಶಃ ಈ ಪುಸ್ತಕ ಪರಂಪರೆಯನ್ನು ದೇಸೀಯ ಅವಶ್ಯಕತೆಯಂತೆ ಅಥವಾ ರೈತ ಅವಶ್ಯಕತೆಯಂತೆ ಭಾವಿಸಿದಂತೆ ಕಾಣುತ್ತಿಲ್ಲ. ಹಾಗಾಗಿ ಪ್ರಕಟಗೊಂಡ ಪುಸ್ತಕಗಳು ತಂತ್ರಗಳನ್ನು ಕಲಿಸುವ ಹಳಸಲು ಸಾಮಗ್ರಿಗಳನ್ನು ಒಳಗೊಂಡಿವೆ. ಅಂತಹ ನೂರು ಪುಸ್ತಕಗಳಲ್ಲಿ 80 ರಷ್ಟು ಕೇವಲ ಬಳಕೆದಾರರನ್ನು ಹೆಚ್ಚಿಸುವ ಅಥವಾ ಬಳಸುವ ಸಾಮಗ್ರಿ ಉತ್ಪಾದಕರಿಗೆ ಮಾತ್ರವೇ ಲಾಭ ತುಂಬಿಸಿಕೊಡುವ ಮಾದರಿಯವು.

ಆಧುನಿಕ ಕೃಷಿ ಪರಂಪರೆಯೇ ಕೃಷಿಯ ಒಳಸುರಿಗಳ ಉತ್ಪಾದಕರನ್ನು ಲಾಭದಾಯಕವಾಗಿಸುವ ಆಸಕ್ತಿಯುಳ್ಳದ್ದು. ಹಾಗಾಗಿ ಈಗಲೂ ನಾವು ಅತ್ಯಂತ ಜನಪರವಾದ ಕೃಷಿ ಚಿಂತಕರನ್ನು ಹೆಸರಿಸಿ ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಈ ಮೊದಲ ಆರಂಭದಲ್ಲಿ ಉಲ್ಲೇಖಿಸಿದಂತೆ ಸಣ್ಣ ರೈತರ ಪದ್ಧತಿಗಳನ್ನೇ ನಿಷ್ಪ್ರಯೋಜಕ ಎಂದು ಆಧುನಿಕತೆಯ ಕಡೆಗಿನ ಒತ್ತಡ ಭಾರತೀಯ ಪರಂಪರೆಗೆ ಅತಿಯಾಯಿತು. ಇದೇ ಮಾದರಿಯನ್ನೇ ಅನುಸರಿಸಿದ ಅಮೆರಿಕಾದಂತಹ ರಾಷ್ಟ್ರದಲ್ಲಿ ಸಣ್ಣ ರೈತರ ಪರವಾದ ಜನಪರವಾದ ಪುಸ್ತಕಗಳು 1980ರ ಮೊದಲೇ ಪ್ರಕಟವಾಗಿವೆ ಎಂದರೆ ಭಾರತೀಯ ಕೃಷಿ ಚಿಂತಕರು, ಕೃಷಿ ವಿಜ್ಞಾನಿಗಳು, ರೈತರ ಪರವೆಂದುಕೊಂಡ ಶಾಸ್ತ್ರಜ್ಞರು ತಾವು ಏನೂ ಮಾಡಿಲ್ಲ ಎಂದು ತಲೆತಗ್ಗಿಸಬೇಕಾಗುತ್ತದೆ. ಹಾಗಾದರೆ ಅದ್ಯಾವ ಪುಸ್ತಕ ಅಲ್ಲಿ ಸಣ್ಣ ರೈತರ ಪರವಾದ ಪ್ರಪಂಚವನ್ನು ವಿವರಿಸಿತ್ತು? ಅಂತಹದ್ದೊಂದು ಆಗಿತ್ತು

## ಸಣ್ಣ ರೈತರ ಪುಸ್ತಕ

'ಐದು ಎಕರೆ ಮತ್ತು ಸ್ವಾತಂತ್ರ್ಯ' (Five A and Indepedence) ಎಂಬ ಪುಸ್ತಕ ಎಂ.ಜಿ.ಕೈನ್ಸ್ ಎಂಬ ಕೃಷಿ ತಂತ್ರಜ್ಞರು ಸಣ್ಣ ಹಿತಾಸಕ್ತಿಯಿಂದ 1935ರ ಫೆಬ್ರವರಿಯಲ್ಲೇ ಪ್ರಕಟ ಅಂದರೆ ಸುಮಾರು 80 ವರ್ಷಗಳಿಗೂ ಮೊದಲೇ ಚಿಂತನೆಗಳು ಪಾಶ್ಚಾತ್ಯರಲ್ಲೇ ಮೊಳೆತಿದ್ದವು. ಈ ಪ್ರಕಟಗೊಂಡ ಮೊದಲ 7 ವರ್ಷದಲ್ಲಿ 14 ಮರುಮುದ್ರಣ ಕಂಡಿತೆಂದರೆ, ರೈತ ಪುಸ್ತಕ ಆಲೋಚಿಸಬೇಕಿದೆ. ಇಂದು ಚಿಂತಿಸಬೇಕಿದೆ. ರೈತರಿಗೇನು ಮಾಡಿದ್ದೇವೆ? ನಮ್ಮ ಇಂದಿನ ರಷ್ಟು ಕೃಷಿ ವಿಜ್ಞಾನಿಗಳು ಈ ಮೂರು ಪುಸ್ತ ನಿಸ್ಸಂಶಯವಾಗಿ ಓದಿರಲು ಸಾಧ್ಯವಿಲ್ಲ ಅಥವಾ ದಿರಲೂ ಸಾಧ್ಯವಿದೆ. ನಮ್ಮ ರೈತ ಮತ್ತು ಪುಸ್ತಕ ಎರಡು ಅಗಾಧತೆಯ ಪ್ರಾತಿನಿಧಿಕ ಪದಗಳನ್ನು ಅ ಲ್ಲಿಟ್ಟು ನೋಡುವಾಗ ನಮ್ಮ ಪುಸ್ತಕ ರಚನೆಗಳು ರೈತರ ಪರವಾಗಿಲ್ಲ ಎಂಬ ಅಂಶ ಗಮನೀಯವ

ಈ ಐದು ಎಕರೆಯ ಸ್ವತಂತ್ರ ಬದುಕಿನ ಅಮೆರಿಕಾದಂತಹ ದೇಶದಲ್ಲೇ 5 ಎಕರೆ ಸ್ವತಂತ್ರ ಬ ಕೊಡಮಾಡುವುದನ್ನು ಹೃದಯಕ್ಕೇ ನಾಟುವಂತೆ, ವೈಜ್ಞಾನಿಕವಾಗಿ ಚರ್ಚಿಸುತ್ತದೆ. ಬೆಳೆಯ ಎಲ್ಲ ಮಜಲ ಸುಮಾರು 52 ಅಧ್ಯಾಯಗಳಿಂದ ಚರ್ಚಿಸುವ ಸುಮಾರು 800 ಪುಟಗಳ ಮಾಹಿತಿಯನ್ನು ನೀ ಇದೇನು ಯಾರೊಬ್ಬ ದಾರ್ಶನಿಕ ಬರೆದ ಹೊತ್ತಿ ಕೃಷಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ಕೊಲಂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಕೈನ್ಸ್ ಲೇಖನಿಯಿಂದ ಒಡಮೂಡಿದ ಪುಸ್ತಕ. ಇದೇ ಮತ್ತೆ ಕೆಲವು ರೈತರ ಪ್ರಿಯವಾದ /ಪರವಾದ ಪುಸ್ ನೋಡಿ.

1. ನಮಗೊಂದು ಹೊಲ ಬೇಕು.
2. ನಿಮ್ಮ ಹಣ್ಣನ್ನು ನೀವೇ ಬೆಳೆಯಿರಿ.
3. ನಮ್ಮ ರಕ್ಷಣೆಗೆ ಆಹಾರ ಹೊದಿಕೆ, ಇ

ಇಂತಹ ಸಾಧ್ಯತೆಗಳನ್ನು ನಾವಿನ್ನೂ ನಮ್ಮ ದೇ ಲೇಖನಿಯಲ್ಲಿ ಕಾಣಬೇಕಿದೆ. ಇದೇ ಸಂದ ಮತ್ತೊಂದು ಪುಸ್ತಕವನ್ನು ನೆನಪಿಸಬೇಕಿದೆ. ಅದರ ಬ ಒಂದಷ್ಟು ವಿಚಾರವನ್ನು ಹೇಳಬೇಕಿದೆ. ಅದು ಮತ್ತು ನಾಗರಿಕತೆ ಎಂಬ ಕೃತಿ. ಎಡ್ವರ್ಡ್ ಎಂಬುವರು ಅದರ ರಚನೆಕಾರರು. 1968-69 ಸಾಲಿನಲ್ಲಿ ಕೃಷಿ ವಿಶ್ವವಿದ್ಯಾಲಯದ ಗ್ರಂಥಾಲ ಹೊಕ್ಕ ಈ ಪುಸ್ತಕ 1980ರ ದಶಕದವರೆಗೂ ಕಣ್ಣಿಗೂ ಆಕರ್ಷಣೀಯವಾಗಲೇ ಇಲ್ಲ. ನೇರ ಸಂಬಂಧಿಸಿಲ್ಲವೆನ್ನಿಸಿದರೂ ಎಲ್ಲಾ ಮಣ್ಣು ಪುಸ್ತಕಗಳ ಜತೆಯಲ್ಲೇ ಈ ಪುಸ್ತಕವೂ ಮಣ್ಣು ಹಿ ಕುಳಿತಿರುತ್ತಿತ್ತು. ಮಣ್ಣು ಮತ್ತು ಮನುಷ್ಯನ ಸಂಬಂಧವನ್ನು ಅತ್ಯಂತ ದಾರ್ಶನಿಕವಾಗಿ ಚರ್ಚಿಸು ಬಹುಪಾಲು ಎಲ್ಲಾ ಮಣ್ಣು ವಿಜ್ಞಾನದ ವಿದ್ಯಾ ತಲುಪಿಲ್ಲ ಎಂದರೆ ರೈತರಿಗಾಗಿ ಪುಸ್ತಕಗಳನ್ ರಚಿಸಬೇಕು?

'ರೈತರಿಗಾಗಿ ಪುಸ್ತಕ' ಎಂಬ ಆಲೋ ಸುಳಿದಾಡುವ ಸಂಗತಿಗಳಿವು. ಅದಲ್ಲದೆ ಕೃಷಿ ಪುಸ್ತಕ ಪರಂಪರೆ ಎಂದಿದ್ದರೆ ಒಂದಷ್ಟು ವಿವರವಾದ ಸಂಗತಿಗಳಿರುತ್ತಿದ್ದವು. ಕೃಷಿ ವಿಜ್ಞಾನ ರೈತರ ವಿಜ್ಞಾನ ಆಗುವಲ್ಲಿಯ ಎಡವಟ್ಟುಗಳಿಂದ ತ್ತಿದೆ. ಈ ನಿಟ್ಟಿನ ಯೋಚನೆಗಳಲ್ಲಿ ಹೀಗೆ ಬೇಕಾಯಿತು. ವಿಜ್ಞಾನದ ಜನಪರತೆಯನ್ನು ಕೃಷಿ ವಿ ಇನ್ನೂ ಅರಿತಿಲ್ಲ ಎನ್ನುವುದಲ್ಲದೆ, ಜನಪರವಾಗಿರ ಕೌಶಲ್ಯ ಬಹುಪಾಲು ಕೃಷಿ ವಿಜ್ಞಾನಿಗಳಿಗಿಲ್ಲ ನಿರ್ವಿವಾದ. ಒಬ್ಬ ಅನಕ್ಷರಸ್ಥ ಅಥವಾ ಕಡಿಮೆ ಸಮುದಾಯವನ್ನು ತಲುಪುವ ಮಾದರಿಯ ಆಲೋ ಇಲ್ಲದಿರುವುದೇ ರೈತರ ಪರವಾದ ಸಾಹಿತ್ಯ ಸಾಧ್ಯವಾಗಿಲ್ಲದಿರುವುದು.

ಇಷ್ಟರ ಮಧ್ಯೆ ನೂರಾರು ಪುಸ್ತಕಗಳು ಆಸಕ್ತಿಯಿಂದ, ಸರ್ಕಾರಗಳ ನಿಲುವುಗಳಿಂದ ಪ್ರಕಟ ಇವೆಲ್ಲವೂ ಬೆಳೆಗಾರರ ಅವಶ್ಯಕತೆಗಳನ್ನೇ ಪ್ರಮ ಚರ್ಚಿಸುವ, ಉಪದೇಶ ನೀಡುವ ಪುಸ್ತಕಗಳು. ವನ್ನು ಹಂಚುವ ನೆಪದಲ್ಲಿ ಪ್ರಕಟಗೊಂಡವು. ಇ ನೆಮ್ಮದಿಯ ಕನಸುಗಳನ್ನು ಬಿತ್ತಬಲ್ಲ ಪುಸ್ತ ಈಗ ಪರಿಸ್ಥಿತಿ ಬದಲಾಗಿದ್ದು, ಎರಡನೇ ಸಂತತಿ ಸಮುದಾಯ ನಮ್ಮ ಮುಂದಿದೆ. ಇವರಲ್ಲಿ ಬ ಜನರು ಬರೀ ಅಕ್ಷರಸ್ಥರೇ ಅಲ್ಲ, ಚೆನ್ನಾಗಿ ಓದಿಕ ಇದೇ ಕಾರಣದಿಂದಾಗಿ ರೈತರಲ್ಲಿ ನೆಮ್ಮದಿಯ ಬಿತ್ತುವ ಪುಸ್ತಕಗಳನ್ನು ಒದಗಿಸುವ ಬೃಹತ್ ಇದೆ.

ಯೋಗೇಶ್ ಮಾಸ್ಟರ್

## ಪುರಾಣದ ಹೂರಣ

# ಬ್ರಹ್ಮನ ಭೋಗಮಾರ್ಗ ವರ್ಸಸ್ ಶಿವನ ಯೋಗಮಾರ್ಗ

ಪ್ರಕೃತಿ ಸಹಜವಾದ ಸಾವನ್ನು ಗೆಲ್ಲುವವರ ಅಥವಾ ಮೃತ್ಯುತತ್ವವನ್ನು ತಮ್ಮ ತತ್ವದಿಂದ ಹಾದುಹೋಗುವವರ ...ವರ ಉದಾಹರಣೆ ನಮ್ಮ ಸೈದ್ಧಾಂತಿಕ ದೃಷ್ಟಿಯಲ್ಲಿ ...ಳಿಯದೇ ಉಳಿಯುತ್ತದೆ.

ತನಗೆ ಎದುರಾಗುವ ಸಾವನ್ನು ತಾನು ಗೆಲ್ಲುವುದು ...ರ್ಕಂಡೇಯನದೊಂದು ರೀತಿಯದಾದರೆ, ತನ್ನ ...ರೆಯಿಂದ ಆಜ್ಞೆಯ ಪ್ರಕಾರ ಮೃತ್ಯುವಿನ ಮುಖಕ್ಕೆ ...ದರಾಗಿ, ಅದರೊಡನೆ ಸಂವಹನ ನಡೆಸಿ, ಮೃತ್ಯುವಿನ ...ಸ್ಯಗಳನ್ನು ತಿಳಿದುಕೊಳ್ಳುವ ನಚಿಕೇತನದು ಇನ್ನೊಂದು ... ಹಾಗೆಯೇ ತನಗಾಗಿಯಲ್ಲದೇ ತನ್ನ ಪ್ರೀತಿಪಾತ್ರರನ್ನು ...ತ್ಯುಮುಖದಿಂದ ಬಿಡಿಸುವ ಸಾವಿತ್ರಿಯದು ಮತ್ತೊಂದು ... ಈ ಮೂವರದ್ದೂ ಮೃತ್ಯುವನ್ನು ಎದುರಿಸುವ ...ವದೇ ಆದಂತಹ ವಿಧಾನಗಳು.

### ಪ್ರಕೃತಿ ಮತ್ತು ಸಾವು

...ಪ್ರಕೃತಿಯ ತತ್ವಗಳನ್ನು ಮೀರುವುದು ಮತ್ತು ಪ್ರಕೃತಿಯ ...ಗಳನ್ನು ಅಂಕೆಯಲ್ಲಿಡುವುದು ಈ ಎರಡೂ ಬೇರೆ ...ರೆ. ಪ್ರಕೃತಿಯನ್ನು ಅಧೀನದಲ್ಲಿಟ್ಟುಕೊಂಡು ...ಗಿಸುವಾಗ ಸಹಜವಾಗಿ ಸದಾ ಸೃಷ್ಟ್ಯಾತ್ಮಕವಾಗಿಯೇ ... ಸಾವನ್ನು ಇಲ್ಲವಾಗಿಸಿಕೊಳ್ಳುವುದು ಬ್ರಹ್ಮಮಾರ್ಗ. ...ಪ್ರಕೃತಿಯನ್ನು ಒಲಿಸಿಕೊಂಡು ಅದರೊಂದಿಗೇ ...ವಾಗಿ, ಶೃಂಗಾರವಾಗಿ ಅಥವಾ ರಮಣೀಯವಾಗಿ ...ರ್ಧ ಪುರುಷವಾಗಿ ಇನ್ನರ್ಧ ಪ್ರಕೃತಿಯೊಂದಿಗೆ ಒಂದಾಗಿ ...ರ್ಣವಾಗಿ, ಮೃತ್ಯುವಿನ ಪರಿಧಿಯಾಚೆ ಸಾಗುವುದು ...ಮಾರ್ಗ. ಶಿವನ ಮಾರ್ಗವು ಯೋಗ ಮಾರ್ಗವೂ ...ತ ಹೌದು. ಯೋಗವೆಂಬುದರ ವ್ಯುತ್ಪತ್ತಿಯೇ ಯುಜ್ ...ವಾಗಿರುವುದು. ಸೇರು, ಐಕ್ಯ ಎಂದೇ ಅದರ ಅರ್ಥ.

ಒಬ್ಬ ವ್ಯಕ್ತಿಯ ಲೌಕಿಕ ಗುರುತಿಸಿಕೊಳ್ಳುವಿಕೆಯು ಪ್ರಕೃತಿಯಲ್ಲಿ ಯಾವುದೇ ರೀತಿಯ ಪಾಕ್ಷಿಕ ಪರಿಣಾಮ ಬೀರುವುದಿಲ್ಲ, ಅವನು ಅರಸನಾಗಿರಲಿ, ದಾಸನಾಗಿರಲಿ, ಉತ್ತಮ ಕುಲದವನೆನಿಸಿಕೊಂಡಿರಲಿ, ಅತ್ಯಂಜನೆಂದು ಶೋಷಿತನಾಗಿರಲಿ, ಪ್ರಕೃತಿಯ ನಿಯಮಗಳಿಗೆ ಅವನು ಬದ್ಧನೇ. ಹುಟ್ಟಬೇಕು ಎಂಬ ಆಯ್ಕೆ ಇಲ್ಲದಿದ್ದರೂ. ವೃದ್ಧಾಗುವುದು ಬೇಡದಿದ್ದರೂ. ಸಾಯಬೇಕು ಇಷ್ಟವಿಲ್ಲದಿದ್ದರೂ.

ಅರಸ, ಕುಲೀನ, ಬಲ್ಲಿದ ಯಾವುದೇ ಅಂತಸ್ತು, ಸ್ಥಾನಮಾನದ ಗುರುತುಗಳು ಅಹಂಗಳ ಸಂಕೇತವಾಗಿದ್ದು, ಪ್ರಕೃತಿಯ ವಸ್ತುಗಳನ್ನು ಭೋಗಿಸಲು ಹಾತೊರೆಯುತ್ತಾನೆ. ಶತರೂಪಳನ್ನು ಬಲಾತ್ಕರಿಸುವ ಬ್ರಹ್ಮತತ್ವವದು, ಅಹಂ! ಚೈತನ್ಯದೊಡನೆ ತಾನರ್ಧವೆಂದು ಅರಿತಿದ್ದು, ಇನ್ನರ್ಧವನ್ನು ಗೌರವಪೂರ್ವಕವಾಗಿ ಆಹ್ವಾನಿಸಿ ತನ್ನಿರುವನ್ನು ಪೂರ್ಣಗೊಳಿಸಿಕೊಳ್ಳುವ ಶೈವಮಾರ್ಗವದು, ಆತ್ಮ!

ಲೌಕಿಕರಾಗಿದ್ದ ವೈದಿಕರನ್ನು ಆತ್ಮ ತತ್ತ್ವದ ಕಡೆಗೆ ಸೆಳೆದಿದ್ದೇ ಶೈವಸಿದ್ಧಾಂತ.

ಯೋಗಿಗಳ, ಶೈವ ಸಿದ್ಧಾಂತಿಗಳ ತಂತ್ರ ಸಾಧನೆಯಲ್ಲಿ ಸ್ತ್ರೀ ಪಾತ್ರ ಬಹು ಮುಖ್ಯ. ಮಾತ್ರವಲ್ಲ ಅದಿಲ್ಲದೇ ಸಾಧನೆಯೇ ಅಪೂರ್ಣ. ಸ್ತ್ರೀ ಎಂಬ ಸತ್ವಕ್ಕೆ ಯಾವುದೇ ಜಾತಿ, ವರ್ಣ, ವರ್ಗಗಳ ಭೇದವಿಲ್ಲ.

### ಲಜ್ಜಾಗೌರಿ

ಭೂಮಿಯ ಫಲವತ್ತತೆಯನ್ನು ಸಂಕೇತಿಸುವ, ಮಾತೃತ್ವದ ಪ್ರಾಧಾನ್ಯತೆಯನ್ನು ಅನುಮೋದಿಸುವ ಲಜ್ಜಾಗೌರಿಯ ತೊಡೆಗಳನ್ನು ಅರಳಿಸಿಕೊಂಡು ಕಾಲುಗಳನ್ನು ಮೊಳಕಾಲಲ್ಲಿ ಮಡಿಸಿ ಯೋನಿಯನ್ನು ತೋರಿಸಿಕೊಂಡು ಕುಳಿತಿರುವ ವಿಗ್ರಹಗಳನ್ನು ನೋಡಿದಾಗ, ನಿರ್ಲಜ್ಜವಾಗಿರುವ ಈ ಶಿಲ್ಪಕ್ಕೆ ಲಜ್ಜಾಗೌರಿಯೆಂದೇಕೆ ಕರೆದರು ಎಂದು ಬಹು ಯೋಚಿಸುತ್ತೇನೆ.

ಪುರುಷನೂ ಮಗುವಿನ ಜನನಕ್ಕೆ ಕಾರಣನು ಎಂಬ



ಆಚರಿಸುತ್ತಿದ್ದವರು ಈ ತಂತ್ರಸಾಧಕರಿಗೆ ಲಭ್ಯವಾಗುತ್ತಿರಲಿಲ್ಲ. ಆಗ ಅವರು ವೇಶ್ಯೆಯರನ್ನೇ ಆಶ್ರಯಿಸಬೇಕಾಗುತ್ತಿತ್ತು. ಶಿವ ಮತ್ತು ಶಕ್ತಿಯ ಐಕ್ಯ ಸಾಧನೆ ಮಾಡುತ್ತಿದ್ದಂತಹ ತಾಂತ್ರಿಕ ಪುರುಷ ಸಾಧಕರಿಗೆ ಸಹಜವಾಗಿಯೇ ಹೆಣ್ಣಿನ ಕುರಿತು, ಆಕೆಯ ಯೋನಿಯ ಬಗ್ಗೆ ಗೌರವ ಭಾವನೆಯಿತ್ತು. ಅದರಲ್ಲೂ ಅವರ ಅತ್ಯಗತ್ಯವಾದ ಮೈಥುನಕ್ಕೆ ಸಮ್ಮತಿಸುತ್ತಿದ್ದ ವೇಶ್ಯೆಯರ ಮೇಲೆ ಅವರಿಗೆ ಖಂಡಿತವಾಗಿಯೂ ಗೌರವವಿತ್ತು. ಹಾಗೆಯೇ ಅವರು ಸಾಧನೆಯ ಸಮಯದಲ್ಲಿ ವೇಶ್ಯೆಯನ್ನು ಕೂಡುವ ಮುನ್ನ ಆಕೆಯ ಯೋನಿಯನ್ನು ಪೂಜಿಸುತ್ತಿದ್ದ ಕ್ರಮವೂ ವಿವಿಧ ಗ್ರಂಥಗಳಲ್ಲಿ ಉಲ್ಲೇಖವಾಗಿವೆ. ಆಕೆಯನ್ನು ಕೂಡುವ ಆ ಸಾಧನೆಯ ಕ್ರಮದ ತಾತ್ವಿಕ ದೃಷ್ಟಿ ಅಥವಾ ಭಾವದಂತೆ ಸಾಧಕ ಸಾಕ್ಷಾತ್ ಶಿವನೇ ಅಥವಾ ಶಂಕರನೇ ಆದ ಪಕ್ಷದಲ್ಲಿ ಸಾಧನೆಯ ಸಮಯದಲ್ಲಿ ಯೋನಿಯನ್ನು ಕರಣವನ್ನಾಗಿ ಆತನಿಗೆ ಒದಗಿಸುವ ಹೆಣ್ಣು ಅಥವಾ ವೇಶ್ಯೆ ಸಾಕ್ಷಾತ್ ದೇವಿ ಅಥವಾ ಗೌರಿಯಾಗಿರುತ್ತಿದ್ದಳು. ಆ ಹೆಣ್ಣಿನಲ್ಲಿ ಯಾವುದೇ ವರ್ಣಭೇದವಿರಲಿಲ್ಲ. ಸ್ತ್ರೀ ಎಂದರೆ ಸ್ತ್ರೀ ಅಷ್ಟೇ. ಆದರೂ ಮಾತಂಗಿಯೇ ಮೊದಲಾದ ಪಂಚಮ ವರ್ಣದ ಸ್ತ್ರೀಯರ ಉಲ್ಲೇಖಗಳು ತಂತ್ರ ಸಾಧನೆಯ ಗ್ರಂಥಗಳಲ್ಲಿ ಕಾಣುತ್ತದೆ. ಅದೂ ಕೂಡ ಲೌಕಿಕ ಸುಖಾಪೇಕ್ಷೆಗೆ ಅಲ್ಲ ಎಂಬುದರ ನೇರ ಸೂಚಕವಾಗಿ ಲಜ್ಜಾಗೌರಿಯ ಮುಖದ ಸ್ಥಳದಲ್ಲಿ ಅರಳಿರುವ ತಾವರೆಯನ್ನು ಮೂಡಿಸುತ್ತಿದ್ದರು.


ಮರಾಠಿಯಲ್ಲಿಯೂ ಲಂಜೆ, ಲಂಜಾ ಪದಗಳಿಗೆ ವ್ಯಭಿಚಾರಿಣಿ ಎಂಬ ಅರ್ಥವಿದೆ. ಸಂಸ್ಕೃತದಲ್ಲಿ ಲಜ್ಜಾ ಮತ್ತು ಲಂಜಿಕಾ ಎಂಬ ಪದಗಳಿಗೆ ವೇಶ್ಯೆ ಮತ್ತು ಲಕ್ಷ್ಮಿ ಎಂದು ಅರ್ಥಗಳಿವೆ. ಅದೇರೀತಿ ತೆಲುಗಿನಲ್ಲಿಯೂ ಲಂಜಾ ಎಂದರೆ ಸೂಳೆಯೆಂದೇ ಅರ್ಥ.


### ಯೋನಿ ಪೂಜೆಯ ಪಳಿಯುಳಿಕೆ

ತಂತ್ರ ಸಾಧಕನಾದ ಪುರುಷನಿಂದ ಆಧ್ಯಾತ್ಮಿಕ ಸಾಧನೆಗೆ ಪೂಜೆಗೊಳಗಾಗುತ್ತಿದ್ದ ವೇಶ್ಯೆಯು ಅವನಿಗೆ ಆಗ ಶಕ್ತಿ ರೂಪಿಣಿಯಾದ ಕಾರಣದಿಂದ ಲಜ್ಜಾಗೌರಿಯಾದಳು. ಅವಳು ಯೋನಿಪೂಜೆಗೊಳಗಾಗುವ ಭಂಗಿ ಪುರಾತನ ವಿಶ್ವಯೋನಿಯ ಮಾತೃಪ್ರಧಾನ ತತ್ವಕ್ಕೂ, ತಾಂತ್ರಿಕ ಪುರುಷರ ಆರಾಧ್ಯ ವಸ್ತುವಿಗೂ ಪ್ರತಿಮೆಯಾಯಿತು. ನಾನೊಮ್ಮೆ ನಮ್ಮ ಸಾಹಿತಿ ಮಿತ್ರರೊಬ್ಬರಿಂದ ಈ ಯೋನಿ ಆರಾಧನೆಗೆ ಸಂಬಂಧಪಟ್ಟ ವಿಷಯವೊಂದನ್ನು ಕೇಳಲ್ಪಟ್ಟೆ. ಮಂಡ್ಯ ಕಡೆಯ ಒಂದು ಗ್ರಾಮದಲ್ಲಿ, ನಮ್ಮ ಕವಿಮಿತ್ರರಾದ ಎಲ್.ಎನ್.ಮುಕುಂದ್ ರಾಜ್ ಅವರ ಪರಿಚಿತರೊಬ್ಬರ ಮನೆಯಲ್ಲಿ ವಯಸ್ಸಾದ ಕುಟುಂಬದ ಹಿರಿಯ, ಯಾವುದೇ ಒಳ್ಳೆಯ ಕೆಲಸಕ್ಕೆ ಹೋಗುವ ಮುನ್ನ ತನ್ನ ಹೆಂಡತಿಯ ಯೋನಿಯನ್ನು ದರ್ಶಿಸಿ, ಸ್ಪರ್ಶಿಸಿ, ನಮಸ್ಕರಿಸಿಕೊಂಡು ಹೋಗುವವರೆಂದು. ಇದೊಂದು ಯೋನಿಯಾರಾಧನೆಯ ಪಳಿಯುಳಿಕೆಯೆಂದು ನಾನು ಭಾವಿಸುತ್ತೇನೆ.


### ಶೈವತತ್ತ್ವದಲ್ಲಿ ಬ್ರಹ್ಮಾಂಡವೆಂಬುದಿಲ್ಲ, ಪ್ರಕೃತಿ ಇದೆ

ಬ್ರಹ್ಮಾಂಡವು ಬ್ರಹ್ಮರ ಸೃಷ್ಟಿ. ಎಷ್ಟೆಷ್ಟು ಅಹಂಪೂರಿತ ಸ್ವ-ಪ್ರತಿಷ್ಠೆಯ ವ್ಯಕ್ತಿಗಳಿದ್ದಾರೋ ಅಷ್ಟಷ್ಟು ಬ್ರಹ್ಮಾಂಡಗಳಿವೆ. ಬ್ರಹ್ಮನ ಸೃಷ್ಟಿಯೇ ಸ್ತ್ರೀ ಸ್ಥಾನವನ್ನು ನಿರಾಕರಿಸಿರುವಂತದ್ದು. ಪುರುಷ ಸ್ವರೂಪವಾದ ವಿಷ್ಣುವಿನ ಹೊಕ್ಕಳಿಂದ ಪುರುಷ ಸ್ವರೂಪವೇ ಆಗಿರುವ ಬ್ರಹ್ಮನು ಹುಟ್ಟುತ್ತಾನೆ. ಆದರೆ ಅದರ ಅಹಂಕಾರದ ಶಿರವನ್ನು ಶಿವನು ಕತ್ತರಿಸುತ್ತಾನೆ.



















...ಬ್ರಹ್ಮ ಪ್ರಕೃತಿಯ ಸ್ವರೂಪವಾದ ಶತರೂಪವನ್ನು ...ತ್ಕಾರದಿಂದ ತನ್ನವಳನ್ನಾಗಿಸಿಕೊಳ್ಳಲು ಹೋಗುತ್ತಾನೆ. ... ಅತ್ಯಾಚಾರದ ಪ್ರಯತ್ನ. ಆದರೆ, ಪ್ರಕೃತಿಯನ್ನು ...ಧಿಸುತ್ತಾ, ಒಲಿಸಿಕೊಳ್ಳುತ್ತಾ ಮಿಲನ ಮಹೋತ್ಸವವನ್ನು ...ಸುವ ಪ್ರಯತ್ನ ಯೋಗಿಗಳದ್ದು. ಈ ಚೈತನ್ಯವು ಆ ...ನ್ಯದೊಡನೆ ಸಮ್ಮತಿಯಿಂದ ಸಮ್ಮಿಲಿತವಾಗುವ ವಿಚಾರ ... ಮತ್ತು ಪುರುಷರದ್ದು. ಶಿವ ಮತ್ತು ಶಕ್ತಿಯರದ್ದು. ...ಈ ಮಾನುಷ ಚೈತನ್ಯವನ್ನು ಆತ್ಮ ಎಂದು ನೇರವಾಗಿ ...ಮುತ್ತೇವೆ. ವ್ಯಕ್ತಿಯನ್ನು ಶಕ್ತಗೊಳಿಸುವ ಪ್ರಯತ್ನವಿದು. ...ವರೆ ಪ್ರಕೃತಿಯಲ್ಲಿಯೂ ಚೈತನ್ಯಕ್ಕೆ ಆಕಾರವಿಲ್ಲ, ಅದು ...ವುದೇ ವಿಕೃತಿಗೆ ಒಳಗಾಗುವುದಿಲ್ಲ, ಅದನ್ನು ನಾಶ ...ಡಲಾಗುವುದಿಲ್ಲ, ಸೃಷ್ಟಿಸಲಾಗುವುದಿಲ್ಲ, ಅದು ...ತರವಾಗಿ ಪ್ರವಹಿಸುತ್ತಲೇ ಇರುವಂತಹ ಒಂದು ಹರವು. ...ಾಗಿ ತನ್ನತನವನ್ನು ಭೋಗಾಭಿಲಾಷೆಗೊಳಗಾಗುವ ... ಶರೀರದೊಂದಿಗೆ ಗುರುತಿಸಿಕೊಳ್ಳುವ ಬದಲು ...ಶಿಕವಾದಂತಹ ಚೈತನ್ಯದೊಡನೆ ಗುರುತಿಸಿಕೊಳ್ಳು...ಿಂದ ಸಾವಿಲ್ಲದ, ಕೇಡಿಲ್ಲದ, ರೂಪಿಲ್ಲದ ಚೈತನ್ಯದ ...ಯೇ ನಾವಾಗುತ್ತೇವೆಂಬ ಪರಿಕಲ್ಪನೆ.

...ಲ್ಲಿ ಪ್ರಜ್ಞಾಪೂರ್ವಕವಾಗಿ ಯಾವುದರೊಂದಿಗೆ ...ತಿಸಿಕೊಳ್ಳುತ್ತೇವೆಂಬುದೇ ಪರಮಾಪ್ತ ವಿಷಯ.

ವಿಷಯವು ಅರಿವಿಗೆ ಬರುವ ಮುನ್ನ ಹೆರುವುದು ಸ್ತ್ರೀಯ ಸ್ವಾಭಾವಿಕ ಪ್ರಕ್ರಿಯೆ ಎಂದು ಭಾವಿಸಿದ್ದ ಆದಿಮ ಕಾಲದಲ್ಲಿ ಯೋನಿಯೇ ಜೀವ ಸೃಷ್ಟಿಯ ಮೂಲ ಎಂದು ಭಾವಿಸಿದ್ದರು. ಆಗ ಯೋನಿಯನ್ನು ಅತ್ಯಂತ ಮಾನ್ಯತೆಯಿಂದ ಕಾಣುತ್ತಿದ್ದರು. ಮಾತೃ ಪ್ರಧಾನ ಕುಟುಂಬ ಪದ್ಧತಿ ಆಗಿಂದಲೇ ಆರಂಭವಾಗಿತ್ತು. ಶಿಶುವಿನ ಜನನಕ್ಕೆ ಪುರುಷನ ಕೊಡುಗೆಯೂ ಮನವರಿಕೆಯಾದ ಮೇಲೆ ಪುರುಷನ ಅಂಗವಾದ ಶಿಶ್ನಕ್ಕೂ ಮಾನ್ಯತೆ ದೊರಕಿತು. ಯೋನಿ ಮತ್ತು ಶಿಶ್ನ ಈ ಎರಡೂ ಲಿಂಗಗಳಿಗೆ ಮಾನ್ಯತೆ ದೊರೆತಾದ ಮೇಲೆ ತಂತ್ರವಿದ್ಯೆಯು ತಾತ್ವಿಕವಾಗಿ ಇನ್ನೂ ಮುಂದುವರೆದಿತ್ತು. ಸ್ತ್ರೀ-ಪುರುಷರ ಸಮಾಗಮದಿಂದ, ಯೋನಿ ಮತ್ತು ಲಿಂಗಗಳ ಕೂಟದಿಂದ ಉಂಟಾಗುವ ಶಕ್ತ್ಯೋತ್ಪನ್ನದ ವೈಶಿಷ್ಟ್ಯವನ್ನೂ, ಪ್ರಾಧಾನ್ಯತೆಯನ್ನೂ ಕಂಡುಕೊಂಡರು. ತಂತ್ರಸಾಧಕರು ಸ್ಮಶಾನವಾಸಿಗಳಾಗಿದ್ದವರು, ಸಂಸಾರಿಗಳಲ್ಲದವರು, ತಮ್ಮ ಸಾಧನೆಗಳಲ್ಲಿ ಅವಶ್ಯವಾಗಿ ಒಂದಾದ ಮೈಥುನವನ್ನು ಪಡೆಯಲು ತಮ್ಮ ಜೊತೆಗೆ ಕೂಡಲು ಮುಕ್ತವಾಗಿ ಸಮ್ಮತಿಸುವಂತಹ ಹೆಣ್ಣನ್ನು ಅವಲಂಬಿಸಲೇಬೇಕಾಗಿತ್ತು. ಆಗ ವಿವಾಹ ಪದ್ಧತಿಯಲ್ಲಿ ಬಂಧಿತರಾದಂತವರು ಅಥವಾ ಕನ್ಯತ್ವದ ಪಾವಿತ್ರ್ಯತೆಯನ್ನು

ಕುಂಡಲಿನಿ ಶಕ್ತಿಯು ಲೌಕಿಕದಿಂದ ಅಲೌಕಿಕವಾದಂತಹ ಸಾಫಲ್ಯವನ್ನು ಪಡೆಯುವ ಅಥವಾ ಕಾಮ ಎಂಬ ಸಹಜ ಮೂಲ ವಾಸನೆಯಿಂದ ಸಮಾಧಿ ಎಂಬ ನಿಷ್ಕಾಮಪೂರ್ಣ ಸ್ಥಿತಿಯನ್ನು ಪಡೆಯುವ ಶಕ್ತಿ ಸಂವಹನದ ಮಾರ್ಗವು ಏಳು ಚಕ್ರಗಳನ್ನು ಅಥವಾ ಶರೀರದಲ್ಲಿರುವ ಕೇಂದ್ರಗಳನ್ನು ಹಾದು ಹೋಗಬೇಕಾಗುತ್ತದೆ ಎಂದು ತಂತ್ರ ಸಾಧನೆ ಅಥವಾ ರಾಜಯೋಗವು ಹೇಳುತ್ತದೆ. ಶರೀರದಲ್ಲಿರುವ ಆ ಶಕ್ತಿ ಕೇಂದ್ರಗಳೆಂದರೆ ಲೈಂಗಿಕಾಂಗದ ಕೇಂದ್ರದಲ್ಲಿ ಬೇರಿನ ಹಾಗಿರುವ ಮೂಲಾಧಾರ ಚಕ್ರ. ನಂತರ ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಮತ್ತು ಕೊನೆಯದಾಗಿ ಸಹಸ್ರಾರ ಚಕ್ರವೆಂಬ ಅಂತಿಮ ಕೇಂದ್ರ. ಅಲ್ಲಿಗೆ ಯೋಗ ಸಾಧನೆಯ ಸಂಪೂರ್ಣ ಸಿದ್ಧಿ. ಆ ಸಹಸ್ರಾರವನ್ನು ಅರಳಿರುವ ಕಮಲದ ಸಂಕೇತದ ಮೂಲಕ ಬಿಂಬಿಸುತ್ತಾರೆ.

ಪುರುಷನೊಬ್ಬ ತಾನೇ ಶಿವನಾಗಿ ತೊಡಗುವ ಈ ಯೋಗ ಸಾಧನೆಗೆ ಅಗತ್ಯವಿರುವ ಮೈಥುನಕ್ಕೆ ಒದಗುವ ವೇಶ್ಯೆಯು ಕೇವಲ ಲೌಕಿಕ ಉಪಭೋಗದ ವಸ್ತುವಲ್ಲ, ಬದಲಿಗೆ ಪಾರಮಾರ್ಥ ಸಾಧನೆಯಾದ ಸಹಸ್ರಾರಕ್ಕೆ ತಲುಪಲಗತ್ಯವಿರುವಂತಹ ಶಕ್ತಿಯ ಭಾಗ.

ಲಂಜೆ ಎಂಬ ಪದಕ್ಕೆ ವೇಶ್ಯೆ ಎಂಬ ಅರ್ಥವಿದೆ.


ಅದರ ಕಪಾಲವನ್ನು ಹಿಡಿಯುತ್ತಾನೆ. ಅದರಲ್ಲಿ ಉಣ್ಣುತ್ತಾನೆ. ಬ್ರಹ್ಮಕಪಾಲವನ್ನು ಹಿಡಿಯುವ ಶಿವ ಅಹಂ ನಾಶದ, ಆತ್ಮದ ನಿಲುವನ್ನು ಪ್ರತಿಪಾದಿಸುವ ಪ್ರತಿಮೆ.

ಸ್ತ್ರೀ ವಿರೋಧ - ಅಂದರೆ ಪ್ರಕೃತಿಗೆ ವಿರೋಧವಾಗಿರುವುದು - ಎಷ್ಟು ಮುಂದುವರಿಯುತ್ತದೆ ಎಂದರೆ, ಲಕ್ಷ್ಮಿಯು ನಾರಾಯಣನ ಕಾಲ ಬಳಿ ಕುಳಿತುಕೊಂಡು ಸೇವೆ ಮಾಡುವವಳಾಗುತ್ತಾಳೆ. ಶಿವನಿಗೆ ತೊಡೆಯ ಮೇಲೆ ಕುಳಿತುಕೊಳ್ಳುವವಳಾಗುತ್ತಾಳೆ. ಬ್ರಹ್ಮತತ್ವದಲ್ಲಿ ತನ್ನಿಂದಲೇ ಶತರೂಪ ಅಥವಾ ಸರಸ್ವತಿಯನ್ನು ಹುಟ್ಟಿಸುವುದಿದೆ. ಬೈಬಲ್ಲಿನ ಆದಿಕಾಂಡದಲ್ಲಿ ಪುರುಷನ ಪಕ್ಕೆಲುಬಿನಿಂದ ಸೆಕೆಂಡ್ ಸೆಕ್ಸ್ ಆಗಿ ಸ್ತ್ರೀ ಹುಟ್ಟಿದಳಂತೆ. ವಿಷ್ಣು ಇನ್ನೂ ಮುಂದುವರಿದು ತಾನೇ ಸ್ತ್ರೀಯೂ ಆಗುತ್ತಾನೆ, ಸಂತಾನವನ್ನೂ ಹೊಂದುತ್ತಾನೆ.

ಈ ಲೇಖನದ ಉದ್ದೇಶವು ಶೈವ ಪರಂಪರೆಯ ಪ್ರತಿಪಾದನೆಯಲ್ಲ, ಆದರೆ ವೈಷ್ಣವ, ಬ್ರಹ್ಮ ಮತ್ತು ಶೈವ ಸಿದ್ಧಾಂತಗಳ ಬಗ್ಗೆ ಒಂದು ವಿಶ್ಲೇಷಣೆಯಷ್ಟೇ.

ಶೈವ ಪದ್ಧತಿಯಲ್ಲಿ ಸ್ತ್ರೀಗೆ ಇರುವ ಮಾನ್ಯತೆ ಮತ್ತು ಸ್ತ್ರೀಕೃತಿಯ ಬಗ್ಗೆ ಇರುವ ಧೋರಣೆಗಳ ಬಗ್ಗೆ ಇನ್ನು ಹೇಳಬೇಕಾಯ್ತು.

# ರಸಿಕ ಕತೆಗಳನ್ನು ಕೊಟ್ಟ ಪೂರ್ವಿಕರಿಗೆ ಏನನ್ನಬೇಕು




ಆಧುನಿಕ ಸಮಾಜದ ವಿಕಾರಗಳಲ್ಲಿ ಒಂದಾದ ಹನಿ-ಟ್ರ್ಯಾಪ್ (ಅರ್ಥಾತ್ ಜೇನು-ಬಲೆ) ನಲ್ಲಿ ಅಧಿಕಾರಸ್ಥ ಮತ್ತು ಹಣವಂತ ಗಂಡಸರನ್ನು ಲೈಂಗಿಕ ಆಸೆ ತೋರಿಸಿ ಬಲೆಗೆ ಬೀಳಿಸಿ ಸುಲಿಯುವುದು. ಆದರೆ ಪುರಾಣಕಾಲದಲ್ಲೂ ಈ ಥರ ಕೆಲಸವನ್ನು ದೇವರೆನಿಸಿಕೊಂಡವರೇ ಮಾಡುತ್ತಿದ್ದರು. ಮಹಿಷಾಸುರನನ್ನು ದುರ್ಗಾ ದೇವಿ, ಚಂಡ-ಮುಂಡರನ್ನು ಚಾಮುಂಡಿ, ನರಕಾಸುರನನ್ನು ಸತ್ಯಭಾಮೆ, ಭಸ್ಮಾಸುರನನ್ನು ಮೋಹಿನಿ, ಅಸುರರನ್ನು ಸಮುದ್ರಮಂಥನದಲ್ಲಿ ಹುಟ್ಟಿದ ದೇವಿಯರು... ಹೀಗೆ ಹೆಣ್ಣು ದೇವರುಗಳೇ ರಾಕ್ಷಸರನ್ನು ಹನಿ-ಟ್ರ್ಯಾಪ್ ಮಾಡಿ ಸಂಹರಿಸಿದ್ದು ನಿಜವೆನಿಸುತ್ತಿದೆ. ಹನಿ-ಟ್ರ್ಯಾಪ್ ಸ್ಪೆಷಲಿಸ್ಟ್‌ಗಳಾದ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆ ಮುಂತಾದವರು ಇಂದ್ರನ ಶಾಶ್ವತ ಪೇ-ರೋಲ್‌ನಲ್ಲಿ ಇದ್ದರು. ಇಂತಹ ರಸಿಕ ಕಥೆಗಳನ್ನು ಪವಿತ್ರ ಪುರಾಣ ಎಂದು ಸಮಾಜದ ಮೇಲೆ ಹೇರಿದ ನಮ್ಮ ಪೂರ್ವಜರಿಗೆ ಏನನ್ನಬೇಕೋ!

ಕೆಲವು ಚಾಣಾಕ್ಷರು ಮಹಾಭಾರತ ಮತ್ತು ರಾಮಾಯಣಗಳನ್ನು ಕೇವಲ ಸಾಹಿತ್ಯಿಕ ಕುತೂಹಲದಿಂದ ಓದಬೇಕೇ ಹೊರತು ಅವುಗಳಲ್ಲಿ ಬರುವ ಪಾತ್ರಗಳನ್ನು ಮತ್ತು ಘಟನೆಗಳನ್ನು ವಿಮರ್ಶಿಸುವುದು ಸರಿಯಲ್ಲ ಎಂದು ವಾದಿಸುತ್ತಿದ್ದಾರೆ. ನಿಜವಾಗಿ ಈ ಧಾರ್ಮಿಕ ಗ್ರಂಥಗಳು ಕೇವಲ ಸಾಹಿತ್ಯಿಕ ಮೌಲ್ಯ ಮಾತ್ರ ಹೊಂದಿದ್ದರೆ ಪರವಾಗಿರಲಿಲ್ಲ. ಆದರೆ ಈ ಪುರಾಣ ಕಥೆಗಳನ್ನು ನಮ್ಮ ದೇಶದ ಹೆಚ್ಚಿನ ಜನರು ನಿಜವಾಗಿ ನಡೆದ ಇತಿಹಾಸ ಎಂದು ಪರಿಗಣಿಸಿ ಅವುಗಳಲ್ಲಿ ಬರುವ ಕಾಲ್ಪನಿಕ ಪಾತ್ರಗಳು ನಿಜವಾದ ದೇವರು ಎಂದು ಪರಿಗಣಿಸುತ್ತಿರುವುದೇ ಮೂಲ ಸಮಸ್ಯೆ. ಈ ಪುರಾಣಗಳು ಸಮಾಜವನ್ನು ಹಿಂದಕ್ಕೆ ನೂಕುತ್ತಿವೆ ಮತ್ತು ಜಾತಿ ಅಥವಾ ಲಿಂಗದ ಆಧಾರದಲ್ಲಿ ಸಮಾಜದ ಶೋಷಣೆಗೆ ಅನುವು ಮಾಡಿಕೊಡುತ್ತಿವೆ ಹಾಗೂ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿವೆ. (ಇದು ಎಲ್ಲಾ ಧರ್ಮಗಳ ಪುರಾಣ ಗ್ರಂಥಗಳಿಗೂ ಅನ್ವಯ).

ಅಷ್ಟೇ ಅಲ್ಲ, ಈ ಕಾಲ್ಪನಿಕ ಪಾತ್ರಗಳ ಹೆಸರಲ್ಲಿ ಮಠ-ದೇವಸ್ಥಾನಗಳನ್ನು ಸ್ಥಾಪಿಸಿ ಅವುಗಳನ್ನು ಸಾಮಾಜಿಕ ಮತ್ತು ರಾಜಕೀಯ ಅಧಿಕಾರದ ಕೇಂದ್ರವನ್ನಾಗಿ ಮಾಡಲಾಗಿದೆ. ಈ ದೇವರ ಹೆಸರಲ್ಲಿ ನೀತಿಗೆಟ್ಟ ಆಸೆಬುರುಕ ಜನರು ಲಾಭದಾಯಕ ಮಠದ ಸ್ವಾಮೀಜಿ ಅಥವಾ ಧರ್ಮದರ್ಶಿಗಳಾಗಿ ವೇಷ ಧರಿಸಿದ್ದಾರೆ. ಇಂಥವರು ಎಷ್ಟೇ ದೊಡ್ಡ ಅಪರಾಧ ಮಾಡಿದರೂ ಜನರು ಇವರನ್ನು ಕ್ಷಮಿಸಿ ಬಿಡುತ್ತಾರೆ. ಇದಕ್ಕೆ ಇತ್ತೀಚಿನ ತಾಜಾ ಉದಾಹರಣೆಯೆಂದರೆ - ಗಾಯಕಿಯ ಅತ್ಯಾಚಾರ ಕೇಸಿನಲ್ಲಿ ಉತ್ತರ ಕನ್ನಡದ ಸ್ವಾಮೀಜಿ ಮತ್ತು ಉಜಿರೆ ಸೌಜನ್ಯ ಕೊಲೆ ಕೇಸಿನಲ್ಲಿ ನನ್ನ ಜಿಲ್ಲೆಯ ಒಂದು ದೇವಸ್ಥಾನಕ್ಕೆ ಸಂಬಂಧಪಟ್ಟ ಜೈನ ಕುಟುಂಬದ ಕೆಲವು ನೀಚ ರೇಪಿಸ್ಟ ಹುಡುಗರು ಸುಲಭವಾಗಿ ಕಾನೂನಿನ ಕೈಯಿಂದ ನುಣುಚಿಕೊಳ್ಳುತ್ತಿರುವುದು.

ಸಮಾಜವನ್ನು ಶತಮಾನಗಳಿಂದ ಪ್ರಬಲರು ನಯವಾಗಿ ಶೋಷಿಸಲು ಅನುವು ಮಾಡಿಕೊಟ್ಟಿರುವ ಇಂತಹ ಪೌರಾಣಿಕ ಕಥನ ಕಾವ್ಯ ಸಾಹಿತ್ಯಗಳು ಎಷ್ಟೇ ಸುಂದರವಾಗಿದ್ದರೂ ಅವು ಈಗಿನ ಕಾಲಕ್ಕೆ ಅನುಗುಣವಾಗಿ ವಿಮರ್ಶೆಗೆ ಒಳಗಾಗಲೇಬೇಕು. ಇದರಿಂದ ಪ್ರಬಲ ಜಾತಿಯ ಜನರ ಧಾರ್ಮಿಕ ಭಾವನೆಗಳಿಗೆ ನೋವಾಗುತ್ತದೆ ಎಂಬ ಮಾತ್ರಕ್ಕೆ ಈ ಪ್ರಬಲರು ಪೌರಾಣಿಕ ಪಾತ್ರಗಳ ಹೆಸರಲ್ಲಿ ನಡುವ ಶೋಷಣೆಯನ್ನು ವಿಮರ್ಶೆಗೊಳಪಡಿಸದೇ ಸುಮ್ಮನೆ ನೋಡಿಕೊಂಡಿರುವ ಕಾಲ ಮುಗಿದುಹೋಗಿದೆ.

*- ವೀರಪ್ಪ ದಿ.ಎನ್. ಮಡಿಕೇರಿ*





## ಸಿ.ಟಿ.ರವಿಯ ಬಫೂನ್ ಪಟಾಲಂ

ಸಿ.ಟಿ.ರವಿ ಯಾನೆ ಸೀಟಿಎಗ್ಗೆ ರವಿ ಮತ್ತು ಆತನ ಪಟಾಲಂ ಗೌರಿ ಲಂಕೇಶ್ ವಿರುದ್ಧ ಸಲ್ಲಿಸಿದ ದೂರಿನ ವಿವರ ಓದಿ ಪೆದ್ದ ಗುಂಡನ ಜೋಕ್ ಓದಿದಾಗ ಬರುವಂತಹ ಜೋರು ನಗುಬಂತು. ಈ ಜನರ ಬೌದ್ಧಿಕ ದಾರಿದ್ರ್ಯಕ್ಕೆ ಏನು ಹೇಳಬೇಕು? ಸಮಾಜದ ಬಗ್ಗೆ ಬಹಳ ಕಾಳಜಿ ಇರುವಂತೆ ನಟಿಸುವ ಸಿ.ಟಿ.ರವಿಯ ಸಂಘ ಪರಿವಾರವು ಕಂಬಾಲಪಲ್ಲಿಯ ದಲಿತ ಜೀವಗಳಿಗೆ ಅನ್ಯಾಯವಾದಾಗ ಎಲ್ಲ ರಂಧ್ರಗಳನ್ನು ಮುಚ್ಚಿ ಕೂತಿದ್ದೇಕೆ? ಸಾಬರ ಭೂತ ತೋರಿಸಿ ದಲಿತರ ಓಟು ಕದಿಯುವ ಸಿ.ಟಿ.ರವಿಯಂತಹವರು ಹಿಂದೂಗಳಿಂದಲೇ ದಲಿತರ ಕಗ್ಗೊಲೆಯಾಗುವಾಗ ಎಲ್ಲಿ ಅಡಗಿ ಕೂತಿರುತ್ತಾರೆ? ಖಾಪ್ ಪಂಚಾಯತಿಗಳು ಹೆತ್ತವರೇ ತಮ್ಮ ಮಕ್ಕಳನ್ನು ಕೊಲ್ಲಲು ತೀರ್ಪು ನೀಡುವಾಗ ಸಿ.ಟಿ.ರವಿಯ ಬಿಜೆಪಿಗಳಿಗೆ ಕಣ್ಣು ಕಿವಿ, ಬಾಯಿಗಳು ಯಾಕೆ ಕೆಲಸ ಮಾಡುವುದಿಲ್ಲ? ಈ ಕೋಮು ಕ್ರಿಮಿಗಳ ಮುಕುಳಿಗೆ ಕಾನೂನಿನ ಲಾತ ಬೀಳದೆಹೋದರೆ ನಮ್ಮ ಸಮಾಜವನ್ನು ಇವು ಸಂಪೂರ್ಣ ಗಬ್ಬೆಬ್ಬಿಸುತ್ತವೆ.

*- ರವಿಕುಮಾರ್, ಹಾಸನ*

## ಸರ್ಜಾ ಅವರನ್ನು ನಾವೆಲ್ಲರೂ ಬೆಂಬಲಿಸಬೇಕು



ರಾ.ಸೋಮನಾಥರವರು ಬರೆದ 'ಕಾನ್ವೆಂಟ್ ಮಾಫಿಯಾ ವಿರುದ್ಧ ಅಭಿಮನ್ಯು' ಎಂಬ ವಿಶಿಷ್ಟ ಚಿತ್ರ ಲೇಖನ ಓದಿ ತುಂಬಾ ಖುಷಿಯಾಯಿತು. ಸಾಮಾಜಿಕ ಸಮಸ್ಯೆಯ ವಿರುದ್ಧ ಹೋರಾಡುವ, ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಕೊಡುವ ಅರ್ಹ ಚಿತ್ರಕ್ಕೆ ನಮ್ಮ ಪತ್ರಿಕೆ ಯಾವಾಗಲೂ ಬೆಂಬಲ ನೀಡುತ್ತದೆ, ಪ್ರಚಾರ ಮಾಡುತ್ತದೆ ಎಂಬುದಕ್ಕೆ ಈ ಲೇಖನವೇ ಸಾಕ್ಷಿ.

ಯಾವುದೇ ಸಂದೇಶ ನೀಡದ, ಕೇವಲ ರಿಮೇಕ್ ಚಿತ್ರಗಳನ್ನು ಮಾಡುತ್ತ ಕೋಟಿ ಕೋಟಿ ದುಡಿಯುತ್ತಿರುವ ಸ್ಟಾರ್ ನಟರಿಗೆ ನಟ ಅರ್ಜುನ್ ಸರ್ಜಾ ಮಾದರಿಯಾಗಬೇಕು. ಬಡವರಿಗೆ - ಅದರಲ್ಲೂ ದಲಿತರಿಗೆ - ಶಾಪವಾಗಿರುವ ಕಾನ್ವೆಂಟ್ ಮಾಫಿಯಾ ಬಗ್ಗೆ ಚಿತ್ರ ಮಾಡಿ ಜಾಗೃತಿ ಮೂಡಿಸಿರುವ ಸರ್ಜಾರ ಪ್ರಯತ್ನವನ್ನು ನಾವೆಲ್ಲಾ ಈ ಚಿತ್ರವನ್ನು ನೋಡುವ ಮೂಲಕ ಪ್ರೋತ್ಸಾಹಿಸಬೇಕು. ಆಗ ಮಾತ್ರ ಈ ರೀತಿಯ ಉತ್ತಮ ಚಿತ್ರಗಳು ಮತ್ತಷ್ಟು ತೆರೆಗೆ ಬರಲು ಸಾಧ್ಯವಾಗುತ್ತದೆ.

*- ಲಕ್ಷ್ಮೀಕಾಂತ ಮಿರಜಕರ, ಶಿಗ್ಗಾಂವ*

## ಬಾಳಿಕುಂದ್ರಿಯೂ, ವೈದಿಕ ಚಿಂತನೆಯೂ

ವಿಶ್ವಹಿಂದೂ ಪರಿಷತ್ ಇದೇ ಮೊದಲ ಬಾರಿಗೆ ನವದೆಹಲಿಯಲ್ಲಿ ಜಾಗತಿಕ ಹಿಂದೂ ಜಾಗೃತಿಯ ಉದ್ದೇಶದಿಂದ ಮಹಿಳಾ ಹಿಂದೂ ಸಮಾವೇಶ ನಡೆಸುತ್ತಿದೆ. ಈ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಬೆಂಗಳೂರಿನ ಜಯದೇವ ಇನ್‌ಸ್ಟಿಟ್ಯೂಟ್‌ನ ವೈದ್ಯೆ ಡಾ. ವಿಜಯಲಕ್ಷ್ಮೀ ಬಾಳಿಕುಂದ್ರಿ, "2007 ರ ಮಂಗಳೂರಿನ ಪಬ್ ಮೇಲೆ ದಾಳಿ ನಡೆಯುವ ಮುನ್ನ ಯುವಕರೊಂದಿಗೆ ಪಾರ್ಟಿ ಮಾಡುತ್ತಿದ್ದ 9 ಯುವತಿಯರಲ್ಲಿ 5 ಹುಡುಗಿಯರು ನಂತರ ಗರ್ಭಿಣಿಯರಾಗಿದ್ದಾರೆ. ಆದರೆ ಇದಕ್ಕೆ ಯಾವ ಮಾಧ್ಯಮಗಳೂ ಪ್ರಚಾರ ಕೊಡಲಿಲ್ಲ" ಎಂದು ಹೇಳಿದ್ದಾರೆ.

ಬಾಳಿಕುಂದ್ರಿಯವರಿಗೆ ಪಬ್ ದಾಳಿಯ ಐದು ಹುಡುಗಿಯರು ಗರ್ಭಿಣಿಯಾಗಿದ್ದು ಗೊತ್ತಾಗಿದ್ದು ಹೇಗೆ? ಆ ಸಂತ್ರಸ್ತ ಹುಡುಗಿಯರು ಯಾರು ಎಂದು ಮಂಗಳೂರಿನ ಪೊಲೀಸರಿಗೂ ಗೊತ್ತಿಲ್ಲ, ಆದರೂ ಬಾಳಿಕುಂದ್ರಿಗೆ ಅವರ ಪರಿಚಯ ಮತ್ತು ವಿಳಾಸ ಸಿಕ್ಕಿದ್ದು ಹೇಗೆ?

ಆ ಯುವತಿಯರ ಬಗ್ಗೆ ಇಂತಹದೇ ಕೊಳಕು ಕಥೆಯನ್ನು ಬಾಳಿಕುಂದ್ರಿಯವರು ಹೇಳುತ್ತಿರುವುದು ಅಸಹ್ಯಕರವಾಗಿದೆ. ಹಿಂದಿನ ನಾಲ್ಕು ಸಾವಿರ ವರ್ಷಗಳಿಂದ ಆರ್ಯನ್ ಮನಸ್ಥಿತಿಯವರು ತಮಗೆ ಆಗದವರ ಬಗ್ಗೆ ಮಾಡಿದ್ದು ಇಂತಹದ್ದೇ ಕೊಳಕು ಕಥೆ ಕಟ್ಟುವ ನೀಚ ಕೆಲಸವನ್ನು.

ಅಮಾಯಕ ದ್ರಾವಿಡ ಬುಡಕಟ್ಟು ಜನರು ದುಷ್ಟ ಆರ್ಯರ ವಿರುದ್ಧ ತಿರುಗಿ ಬಿದ್ದರೆಂದು ಆ ಬುಡಕಟ್ಟು ಜನಾಂಗದವರಿಗೆ ರಾಕ್ಷಸ-ಅಸುರ-ಹೆಣ್ಣುಬಾಕ ಎಂಬ ಪಟ್ಟ ಕಟ್ಟಿ ಅವರ ಚಾರಿತ್ರ್ಯಹರಣ ಮಾಡಿ, ಆರ್ಯರ ಹೆಂಗಸರ



ಮೂಲಕ ಆ ದ್ರಾವಿಡ ನೇತಾರರ ಕೊಲೆ ಮಾಡಿಸಿ, ತಾವು ಧರ್ಮ ಉದ್ಧಾರ ಮಾಡಿದ್ದೇವೆ ಎಂದು ಸುಳ್ಳು ಕಥೆ ಕಟ್ಟಿದರು. ಅಂದಿನಿಂದ ಇಂದಿನವರೆಗೂ ವೈದಿಕರ ಈ ಕೊಳಕು ಬುದ್ಧಿ ಬದಲಾಗಿಲ್ಲ ಎಂಬುದಕ್ಕೆ ಡಾ. ಬಾಳಿಕುಂದ್ರಿಯೇ ಜೀವಂತ ಸಾಕ್ಷಿ.

*- ವೀರಪ್ಪ ದಿ. ನಾಯ್ಕ್, ಮಂಗಳೂರು*

## ದಾರಿ ಕಾಣದಾಗಿದೆ ರಾಘವೇಶಗೆ?

ತನ್ನ ಭದ್ರಕೋಟೆಯಲ್ಲಿ ಅಡಗಿ ಕೂತು ಕಾನೂನಿನ ಕಣ್ಣಿಗೆ ನಯವಾಗಿ ಈತನಕ ಮಣ್ಣೆರಚುತ್ತಿದ್ದ ದೇಶದ ಅತ್ಯಂತ ಬಲಾಢ್ಯ ದೇವಮಾನವರಲ್ಲೊಬ್ಬನಾದ ರಾಮ್‌ಪಾಲ್‌ನನ್ನು ಕಾಪಾಡಲು ಯಾರಿಗೂ ಸಾಧ್ಯವಾಗಲಿಲ್ಲ. ತಾನು ದೇವರ ಅವತಾರವೆಂದದ್ದನ್ನು ನಂಬಿದ್ದ ತನ್ನ ಕೆಲ ಮೂಢ ಅನುಯಾಯಿಗಳ ಸಾವನ್ನು ಹೊರತುಪಡಿಸಿದರೆ ಆ ದೇವಪುರುಷನಿಂದ ಏನನ್ನೂ ಮಾಡಿಕೊಳ್ಳಲಾಗಲಿಲ್ಲ. (ಅದೂ ಕೇಂದ್ರದಲ್ಲಿ ಹಿಂದೂತ್ವವಾದಿ ಪ್ರಖರ ಬಲಪಂಥೀಯ ಸರಕಾರವಿದ್ದಾಗ) ಇದು ಈ ದೇಶದಲ್ಲಿ ವೇಸ್ಟ್‌ಬಾಡಿಗಳಾಗಿ ಬದುಕುತ್ತಿರುವ ಅನೇಕಾನೇಕ ದೇವಮಾನವರಿಗೆಲ್ಲ ಒಂದು ಪಾಠ.

ಕರ್ನಾಟಕದಲ್ಲೂ ಅನೇಕಾನೇಕ ದೇವಮಾನವಗಳಿದ್ದಾರೆ. ಅದರಲ್ಲಿ ಸದ್ಯಕ್ಕೆ ತನ್ನ ಮಹತ್ಕಾರ್ಯಕ್ಕಾಗಿ ಸುದ್ದಿಯಲ್ಲಿರುವಾತನೆಂದರೆ ಸಿ(ಸ)ಕ್ಸ್ ಪ್ಯಾಕ್ ರಾಘವೇಶ ಸ್ವಾಮಿ (ಹಳೆಯ ದಢೂತಿ ದೇಹ ಈಗಿಲ್ಲ). ದೇಶದಲ್ಲಿ ದೊಡ್ಡ ಸಂಚಲನವನ್ನೇ ಉಂಟುಮಾಡಿದ ದೆಲ್ಲಿಯ ನಿರ್ಭಯಾ ಪ್ರಕರಣದ ಬಳಿಕ ಮಹಿಳಾ ದೌರ್ಜನ್ಯ ಹಾಗು ಅತ್ಯಾಚಾರ ಕುರಿತ ಕಾನೂನು ಮತ್ತಷ್ಟು ಬಿಗಿಗೊಂಡಿದೆ. ರಾಜ್ಯದಲ್ಲಿ ಎಡಪಂಥೀಯ ಮೌಢ್ಯ ವಿರೋಧಿ ವಿಚಾರಧಾರೆಯ ಸರಕಾರವಿದ್ದೂ ಕೂಡ ರಾಘವೇಶನ ವಿರುದ್ಧ ಕೇಸು ಹಾಕಿದ ಹೆಣ್ಣನ್ನು ತತ್‌ಕ್ಷಣ ಬಂಧಿಸಲಾಯಿತೇ ವಿನಃ ಅತ್ಯಾಚಾರ ಆರೋಪಕ್ಕೊಳಗಾದ ರಾಘವ ಇನ್ನೂ ಹೊರಗಿರುವುದು ವಿಚಿತ್ರವಾಗಿದೆ.

ಸದ್ಯಕ್ಕೆ ತನಿಖೆ ವೈಜ್ಞಾನಿಕ ರೀತಿಯಲ್ಲಿ ಸಾಗಿದೆ. ಪ್ರೇಮಲತಾರ ಬಟ್ಟೆಯಲ್ಲಿನ ವೀರ್ಯದ ಕಲೆಯ ಕುರಿತಾಗಿ ಈಗ ಫೋರೆನ್ಸಿಕ್ ವರದಿ ಬಂದಿದೆ. ಆದರೆ ರಾಘವೇಶನ ವಕೀಲರು ಹಾಗು ಬೆಂಬಲಿಗರು ರಾಘವೇಶನ ದೈಹಿಕ (ಲೈಂಗಿಕ) ಪರೀಕ್ಷೆಗಾಗಿ ತಕರಾರು ಎತ್ತುತ್ತಿದ್ದಾರೆ. ದೇವಮಾನವ ಸ್ವಾಮಿಯಾದ ಆತ "ಊರ್ಧ್ವರೇತ"ನಂತೆ. ಅರ್ಥಾತ್ ವೀರ್ಯವನ್ನು ತಲೆಗೇರಿಸಿಕೊಂಡವನು ಎಂದರ್ಥ. ವೀರ್ಯವನ್ನು ತಲೆಗೇರಿಸಿಕೊಳ್ಳೋದೆಂದರೆ ಅದೆಂಥಾ ಟೆಕ್ನಿಕಪ್ಪಾ? ಬಹುಶಃ ಈ ರೀತಿ ತಲೆಗೇರಿಸಿಕೊಳ್ಳುವಾಗ ಪ್ರೇಮಲತಾ ಬಟ್ಟೆಗೆ ಈ ವೀರ್ಯ ಆಚಾನಕ್ಕಾಗಿ ಸಿಡಿದಿರಬಹುದೇನೋ? ಹಾಗಾಗಿ ಫೊರೆನ್ಸಿಕ್ ತನಿಖೆಯಲ್ಲಿ ವೀರ್ಯದ ಸಾಮ್ಯತೆ ಸಾಬೀತಾದರೂ ಅದು ಲೈಂಗಿಕ ಕ್ರಿಯೆಯಿಂದಲೇ ಬಂದದ್ದು ಎನ್ನಲಾಗದು ಎನ್ನುವ ವಾದ ಮುಂದೆ ರಾಘವನ ಚೇಲಾಗಳು ಹೂಡಲೂಬಹುದು!

ಅದೇನೇ ಇರಲಿ ಒಂದೊಂದೇ ಸುಳ್ಳು ಹೇಳುತ್ತಲೇ ಈ ರಾಘವನ ಪಡೆ ಮತ್ತಷ್ಟು ಇಕ್ಕಟ್ಟಿಗೆ ಸಿಲುಕುತ್ತಾ ಸಾಗುತ್ತಿದೆ. ದಾರಿ ಕಾಣದಾಗಿದೆ ರಾಘವೇಶನೆ? ಈ ಕೊಳಕು ಹಾದಿ ಬೇಕಿತ್ತಾ ಭೋಗಿವರ್ಯನೇ..? ಎಂದು ಈ ಚೇಲಾಗಳೇ ಇದೀಗ ಜೋಲು ಮುಖ ಹೊತ್ತು ಹಾಡತೊಡಗಿರುವುದಂತೂ ನಿಜ.

*- ಅವಿನಾಶ್ ಎಮ್.ಎಸ್. ನೆಲ್ಲಿಕಾರ್*

ವಿಡಂಬಾರಿ ಬಗ್ಗೆ ಬಂದ ಲೇಖನ (ಡಿಸೆಂಬರ್ 3, 2014) ಮನ ಕಲಕುವಂತಾಗಿತ್ತು. ನನಗೇ ದೊಡ್ಡ ಕಷ್ಟ ಇರೋದು ಎಂದು ಯೋಚಿಸುತ್ತಿದ್ದ ಸಂದರ್ಭದಲ್ಲಿ ಈ ಲೇಖನ ಓದಿ ಸ್ಫೂರ್ತಿ ಮೂಡಿತು. ರಾಜ್ಯೋತ್ಸವ ಪ್ರಶಸ್ತಿ ಬಂದ ನಂತರದಲ್ಲಾದರೂ ಈ ಕರ್ಮಯೋಗಿಯ ಬಾಳಲ್ಲಿ ಹರುಷ ತುಂಬಿ ಬರಲಿ ಎಂದು ಹಾರೈಸುವ. ಈ ಲೇಖನವನ್ನು ಬರೆದ ನಹುಶರವರಿಗೆ ಧನ್ಯವಾದಗಳು.

*- ಕುಮಾರ ಗೆಜ್ಜಗಾರುಗುಪ್ಪೆ*

ಅಸುರ ಎಂಬ ಪದದ ಅರ್ಥ ಬೇರೇನೂ ಅಲ್ಲ, ಸುರೆಯನ್ನು ಅರ್ಥಾತ್ ಮದ್ಯಪಾನವನ್ನು ಮಾಡದವನು ಎಂದು. ಭಾರತದ ಮೂಲನಿವಾಸಿಗಳಾದ ದಸ್ಯುಗಳು (ನಾಗ ಜನಾಂಗ) ಸುರೆಯನ್ನು ಕುಡಿಯುತ್ತಿರಲಿಲ್ಲ ಮತ್ತು ಅದನ್ನು ಅವರು ತೀವ್ರವಾಗಿ ವಿರೋಧಿಸುತ್ತಿದ್ದರು. ಈ ಕಾರಣಕ್ಕಾಗಿ ಸುರೆಪಾನಪ್ರಿಯ ವೈದಿಕ ಆರ್ಯರು ಇಲ್ಲಿನ ಮೂಲನಿವಾಸಿಗಳನ್ನು ಅಸುರರೆಂದು ಕರೆದರು.

ನೇರ ಮತ್ತು ದಿಟ್ಟತನದ ಬರಹದಲ್ಲಿ ಗೌರಿ ಲ
ಪತ್ರಿಕೆ ತನ್ನ ಹಳೆಯ ಛಾಪು ಉಳಿಸಿಕೊಂಡಿದೆ.

*- ಅಭಿನಂದನ, ಸೂ*


ಕಂಡಹಾಗೆಯಲ್ಲಿ 'ಗಲ್ಲಿನ ಮುಂದೆಯೂ
ತೋರಿದ ತರುಣ' (ನವೆಂಬರ್ 12, 2014) ಲ
ತುಂಬಾ ಚೆನ್ನಾಗಿತ್ತು, ನಾನು ಓದುತ್ತಿದ್ದೇನೆ ಎನ್
ಗೊತ್ತಾಗಲಿಲ್ಲ. ಬದಲಾಗಿ ಆ ಹುಡುಗಿ ನನ್ನ ಪ
ಕೂತು ತನ್ನ ಕತೆ ಹೇಳುತ್ತಿದ್ದಳು ಎನ್ನಿಸಿತು. ಅ
ಓದುತ್ತಾ ನಿಜಕ್ಕೂ ಕಣ್ಣು ತೇವ ಆದವು.

*- ಯುಸೂಫ್, ಬಬ*

ನವೆಂಬರ್ 5, 2014 ರ ಸಂಚಿಕೆ ಅದ್ಭುತ
ಮೂಡಿಬಂದಿದೆ. ಕಂಡಹಾಗೆ ಸಂಪಾದಕೀಯಕ್ಕಾಗಿ
ವಿಶೇಷ ಧನ್ಯವಾದಗಳು. ಅಸುರ ಬಗ್ಗೆ ಶೀರ್ಷಿಕೆ
ನಿಜಕ್ಕೂ ರಂಜಿಸಿ ಮುಂದಿನ ಹೋರಣಕ್ಕಾಗಿ ಪ್ರಚೋ
ನಮ್ಮವರಿಗೂ ಹೆಗ್ಗಳಿಕೆಯ ಮತ್ತು ಹಿರಿಮೆಯ
ಇದೆ ಎಂದು ಅರ್ಥವಾಯಿತು.

*- ಬಿ.ಜೆ. ಕುಶಾಲ, ಕೊ*

ಸಗಣಿ ಸ್ವಾಮಿ ಒಬ್ಬ ಹುಟ್ಟು ವಂಚಕ, ಪಕ್ಕಾ
ಮತ್ತು ಹೆಣ್ಣುಬಾಕ. ಗೋಮಾತೆಯ ಹೆಸ
ಬಡಬಡಿಸುತ್ತಾ ಅದೆಷ್ಟು ಮಾತೆಯರನ್ನು
ಮುಕ್ಕಿದ್ದಾನೋ ಈ ಭಂಡ ಸ್ವಾಮಿ. ಕಾವ
ವಿಟಪುರುಷನೀತ. ಸ್ವಾಮಿ ಆಗಿರುವುದಕ್ಕೆ ನಾಲಾ
ಅವನ ಸಮುದಾಯದವರು ಇನ್ನೂ ಯಾಕೆ ಈ



ಅಟ್ಟಾಡಿಸಿ ಓದ್ದೋಡಿಸದೇ ಸುಮ್ಮನಿದ್ದಾರೋ?

ಭಟ್ಟ ಮತ್ತು ಲಫಂಗ ಕೇಂದ್ರ ಮಂತ್ರಿ ಒಬ್
ಈ ಹೋರಿಯನ್ನು ಬಚಾವು ಮಾಡಲು ನವರಂಗಿ
ಆಡುತ್ತಿರುವುದು ಬ್ರಾಹ್ಮಣರಲ್ಲೇ ಹೇಸಿಗೆ ತರಿಸಿದೆ. ಬೆ
ಸಂದರ್ಭಗಳಲ್ಲಿ ಅನವಶ್ಯಕವಾಗಿ ಹಿತವಚನವ ಬೋ
ಆದರೆ ಗುಟ್ಟಾಗಿ ನೀರಾ ರಾಡಿಯಾ ಜೊತೆ
ಆಡುವ ಕಳ್ಳ ಮಂತ್ರಿ ಈಗ ಯಾಕೆ ತನ್ನ ನವರಂಧ್ರ
ಮುಚ್ಚಿಕೊಂಡು ಕುಳಿತಿದ್ದಾನೆ? ರಾಮಕೃಷ್ಣರೆಲ್ಲಾ
ಆದರೂ ಅಥವಾ ರಾಮರಸ ಹೀರುತ್ತಾ ತಮ್ಮ ಅಂ
ಗಳಲ್ಲಿ ಲಲನೆಯರೊಂದಿಗೆ ಚಕ್ಕಂದ ಆಡುತ್ತಿದ್ದಾ
ಧಿಕ್ಕಾರವಿರಲಿ ಇಂಥ ಶನಿ ಸಂತಾನಕ್ಕೆ.

*- ಓದುಗ, ಎಸ್‌ಎಂಎಸ್ ಮ*

ಇಂದು ಲಂಕೇಶ್ ಪತ್ರಿಕೆಯ ಪ್ರತಿಯೊ
ಖರೀದಿಸಿ ಓದಿದೆ. ಇಷ್ಟು ದಿನ ಕೇವಲ ಗ್ರಂಥಾಲ
ಸಹಜ ಕುತೂಹಲಕ್ಕೆ ಅಷ್ಟೇ ಪತ್ರಿಕೆಯನ್ನು ಗಮನಿ
ಕೊಂಡು ಓದುವಂತಹ ಆಸಕ್ತಿಯನ್ನು ಕೆರಳಿಸಿದ್ದು ಪ
ಕಂಡ ವಸ್ತುನಿಷ್ಠ ಮಾಹಿತಿಗಳು. ಪತ್ರಿಕೆ ಧೋರಣೆ
ಬದಲಾಗದಿರಲಿ.

*- ಜಗದೀಶ ಬೋಳೆಗಾಂವ, ಸಾಲ*

ಶಶಿಧರ್ ಹೆಮ್ಮಾಡಿಯವರ 'ಹಿಟ್ಲರ್
ಶ್ರದ್ಧಾಂಜಲಿ' ಕಾವ್ಯ ಮಾರ್ಮಿಕವಾಗಿ
ಅರ್ಥಪೂರ್ಣವಾಗಿಯೂ ಇತ್ತು.


*- ಸುರೇಶ್ ಅಂಗಡಿ,*

ಸಮಾನ ಶಿಕ್ಷಣದ ಬಗ್ಗೆ ವಾಸು ಅವರು
ಸರಣಿ ಲೇಖನ ಮಾಲೆ ಬಹಳ ಸಮಯೋಚಿತ
ಮತ್ತು ಅಗತ್ಯವಾಗಿತ್ತು. ಮುಂದಕ್ಕೆ ಚಲಿಸ
ಸಮಾಜವನ್ನು ಆಳುವ ವರ್ಗಗಳು ಕುತಂತ್ರದಿಂದ
ಮತ್ತೆ ರಾಜಪ್ರಭುತ್ವದ ಕಡೆಗೆ ತೆಗೆದುಕೊ
ಹೋಗುತ್ತಿರುವುದು ಸರ್ವಥಾ ಸರಿಯಲ್ಲ. ವ
ವೈಚಾರಿಕ, ಸಮಾನ ಶಿಕ್ಷಣ ಪದ್ಧತಿ ಜಾರಿಗೆ ಬಾರದಿ
ಸಹ ಜನರ ಅಜ್ಞಾನಕ್ಕೆ ಕಾರಣವಾಗಿದೆ.
ಉತ್ತಮ ಪ್ರಜಾತಂತ್ರ ಜಾರಿಗೆ ಈ ರೀತಿಯ
ಮತ್ತು ವಾಗ್ವಾದಗಳನ್ನು ಹೆಚ್ಚೆಚ್ಚು ಹುಟ್ಟು ಹಾಕ

*- ಮುತ್ತುರಾಜ್,*

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದ
ಪ್ರತಿಕ್ರಿಯೆಗಳನ್ನು 9980331427 ನಂಬ
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸ

# ಸುಶ್ಮಿತಾ ಸೇನ್ ಸವಾಲಿಗೆ ಅಮಿತಾಬ್ ಬಚ್ಚನ್ ಜವಾಬ್



ಕಾರಣಾಂತರಗಳಿಂದ ಒಂದಿಷ್ಟು ಕಾಲ ತ್ರರಂಗದಿಂದ ದೂರವುಳಿದು ಮತ್ತೆ 1996ರಲ್ಲಿ ನಟಿಸಲು ಪಕ್ತಿ ತೋರಿದ ಅಮಿತಾಬ್ ಬಚ್ಚನ್ ಅವರನ್ನು ಸುಶ್ಮಿತಾ ನ್ ಗೌರವ ಸಂದರ್ಶಕಿ ರೂಪದಲ್ಲಿ 'ಸಿನಿ ಬ್ಲಿಜ್'ಗಾಗಿ ದರ್ಶಿಸಿದ್ದರು. ಅದನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ...

ಪ್ರಶ್ನೆ: ನೀವು ಸ್ವಲ್ಪ ಕಾಲ ಯಾವುದೇ ಚಿತ್ರಗಳಲ್ಲಿ ಟಿಸದೆ ಸುಮ್ಮನಿದ್ದಿರಿ. ಇದಕ್ಕೆ ಕಾರಣ ನಿಮ್ಮ ಒಡೆತನದ ಮಿತಾಬ್ ಬಚ್ಚನ್ ಕಾರ್ಪೊರೇಶನ್ ಲಿಮಿಟೆಡ್ .ಬಿ.ಸಿ.ಎಲ್)' ಕಂಪನಿಯನ್ನು ಬಲಪಡಿಸುವ ಉದ್ದೇಶವ್ರೋ ಥವಾ ನಟನೆಗೆ ತುಸು ವಿಶ್ರಾಂತಿ ನೀಡುವ ಉದ್ದೇಶವ್ರೋ?

ಅಮಿತಾಬ್: ಒಂದು ವಿರಾಮ ತೆಗೆದುಕೊಂಡಿದ್ದೆನಷ್ಟೇ, ಗೆ ಆ ವಿರಾಮದ ಅಗತ್ಯವಿತ್ತು.

ಪ್ರಶ್ನೆ: ಒಬ್ಬ ಸ್ಟಾರ್ ಆದವನು ಅಭಿಮಾನಿ ಭಟ್ಟಂಗಿತನಕ್ಕೆ ಬಲಿಯಾಗುತ್ತಾನಂತೆ, ಹೌದಾ?

ಅಮಿತಾಬ್: ನನ್ನ ಪ್ರಕಾರ ಹೇಳುವುದಾದರೆ ಲೆಬ್ರಿಟಿಗಳು ಅಭಿಮಾನಿಗಳಿಗೆ ಅಚ್ಚುಮೆಚ್ಚಿನವರಾಗಿರುತ್ತಾರೆ. ತಹ ಅಭಿಮಾನಿಗಳು ಕಣ್ಣಿಗೆ ಬೀಳದ ದಿನ ನಾನೂ ತ ಅವರನ್ನು ಮಿಸ್ ಮಾಡಿಕೊಳ್ಳುತ್ತೇನೆ ಅನ್ನದಿದ್ದರೆ ಮಾತು ಅಪ್ರಮಾಣಿಕವಾದೀತು.

ಪ್ರಶ್ನೆ: ನೀವು ಮತ್ತೆ ಚಿತ್ರಗಳಲ್ಲಿ ನಟಿಸಲು ನಿರ್ಧರಿಸಿರು ದಕ್ಕೆ ಮುಖ್ಯ ಕಾರಣ ಇದೇ ಅಭಿಮಾನಿಗಳೋ ಅಥವಾ ತ್ರಗಳಲ್ಲಿ ತಳುಕುಬಳುಕಿನ ಸುಂದರಿಯರು ನಿಮ್ಮನ್ನು ತ್ತುವರಿಯುತ್ತಾರೆ ಎಂದೋ?

ಅಮಿತಾಬ್: ಅಂತಹ ಯಾವ್ರೊಬ್ಬ ತಳುಕು ಬಳುಕಿನ ಬದರಿಯರೂ ಈವರೆಗೆ ನನ್ನನ್ನು ಸುತ್ತುವರಿಯಲಿಲ್ಲ ಲ್ಲೋದೇ ಬೇಜಾರಿನ ಸಂಗತಿ!

ಪ್ರಶ್ನೆ: ಐ ವಿಲ್ ಜಸ್ಟ್ ಇಗ್ನೋರ್ ದಟ್! ಈಗ ತ್ತೆ ನಟಿಸುವ ಮೂಲಕ ಅದೇ ಹಳೆಯ ಧೂಳು ಡಿದ ಸ್ಟುಡಿಯೋಗಳಿಗೆ ವಾಪಸ್ಸಾಗುತ್ತಿದ್ದೀರಿ, ನ್ನಿಸುತ್ತಿದೆ?

ಅಮಿತಾಬ್: ಇಟ್ಸ್ ಫೈನ್, ನನಗೆ ಯಾವ ಕ್ಷೇಂತರವೂ ಇಲ್ಲ, ಮತ್ತೆ ಎಂದಿನಂತೆ ಉತ್ಸಾಹದಿಂದ ಸ ಮಾಡಲು ಇಚ್ಛಿಸುತ್ತೇನೆ.

ಪ್ರಶ್ನೆ: ನಿಮ್ಮ ಪುನರಾಗಮನದ ಬಗ್ಗೆ ಯಾರಾದರು ಪಸ್ವರ ಎತ್ತಿದರೆ ಹೇಗೆ ಪ್ರತಿಕ್ರಿಯಿಸುತ್ತೀರಿ?

ಅಮಿತಾಬ್: ನಿಮ್ಮ ಮಾತಿನ ಅರ್ಥವೇನು?

ಪ್ರಶ್ನೆ: ಅಂದರೆ, ನಿಮ್ಮ ಹೊಸ ಸಿನಿಮಾ, ಪಾತ್ರ, ವಿಷಗಳಿಗೆ ಸಂಬಂಧಪಟ್ಟಂತೆ ಸಂಭವಿಸಬಹುದಾದ ವಾದಗಳಿಗೆ ಸಿದ್ಧರಿದ್ದೀರಾ?

ಅಮಿತಾಬ್: ಅದೆಲ್ಲ ನಾವು ಹೇಗೆ ಕೆಲಸ ಮಾಡುತ್ತೇವೆ ನ್ನೋದರ ಮೇಲೆ ನಿಂತಿದೆ... ಅದೆಲ್ಲ ಆಯಾಯ ಭಿಪ್ರಾಯಗಳಿಗೆ ಬಿಟ್ಟಿದ್ದು.

ಪ್ರಶ್ನೆ: ನೀವು ಮತ್ತೆ ವಾಪಸಾಗುತ್ತಿರುವ ಈ ದಿನಗಳಲ್ಲಿ ದೆಷ್ಟೋ ಯುವನಟರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ವರ ನಡುವಿನ ಸ್ಪರ್ಧೆಯ ಬಗ್ಗೆ ಹೇಳಿ...

ಅಮಿತಾಬ್: ಈ ಯುವನಟರಿಗೆ ಸಿಗಬೇಕಾದ ಸ್ಥಾನ ಸಿಕ್ಕಿದೆ. ಹಾಗೆಯೇ ನನಗೂ ಇರಬೇಕಾದ ಸ್ಥಾನ ನನಗಿದೆ. ಚಿತ್ರರಂಗದಲ್ಲಿ ಇರಬೇಕೋ, ಬೇಡವೋ ಅನ್ನೋದನ್ನು ನಿರ್ಧರಿಸುತ್ತಾರೆ.

ಪ್ರಶ್ನೆ: ದಿಲೀಪ್ ಕುಮಾರ್, ಅಮೀರ್ ಖಾನ್ ಥರ ವು ಕೂಡ ಇಂತಿಷ್ಟೇ ಚಿತ್ರಗಳಲ್ಲಿ ನಟಿಸಬೇಕು, ಇಂಥದ್ದೇ ತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಅನ್ನುವ ಕಟ್ಟುಪಾಡುಗಳನ್ನೂ ಗೆ ನೀವೇ ಹಾಕಿಕೊಂಡಿದ್ದೀರಾ?

ಅಮಿತಾಬ್: ಇತರ ನಟರಿಗೆ ಚಾಯ್ಸ್ ಇದೆ, ನನಗಿಲ್ಲ, ಂದರೆ ನನ್ನನ್ನು ನೋಡಲೆಂದು ಕಾತರಿಸುವ ಜನ ಸ್ಯೆ ಕಡಿಮೆ!

ಪ್ರಶ್ನೆ: ಇವತ್ತಿಗೂ ನೀವು 'ನಂಬರ್ ಒನ್ ಕ್ರೌಡ್ ಲ್ಲರ್' ಎಂಬ ಭರವಸೆ ಉಳಿಸಿಕೊಂಡಿದ್ದೀರಿ. ಈ ಜನಪ್ರಿಯತೆಯನ್ನು ಮುಂದಿನ ದಿನಗಳಲ್ಲಿ ಹೇಗೆ ಉಳಿಸಿಕೊಳ್ಳಬಲ್ಲಿರಿ?

ಅಮಿತಾಬ್: ನಿಮ್ಮ ಈ ಮಾತನ್ನು ನಾನು ಒಪ್ಪುವುದಿಲ್ಲ, ನಾನು ನಂಬರ್ ಒನ್ ಕ್ರೌಡ್ ಪುಲ್ಲರ್ ಅಲ್ಲ.


ಪ್ರಶ್ನೆ: ಈ ವಿಚಿತ್ರ ಆಕರ್ಷಣೆಯ ಬಗ್ಗೆ ನೀವು ಯಾವತ್ತಾದರೂ ವಿಶ್ಲೇಷಣೆ ಮಾಡಿದ್ದುಂಟಾ?

ಅಮಿತಾಬ್: ನಾನು ಇಷ್ಟು ಮಾತ್ರ ಹೇಳಬಲ್ಲೆ, ಈ ಆಕರ್ಷಣೆಯ ಬಗ್ಗೆ ನನಗೆ ನಂಬಿಕೆ ಇಲ್ಲ.

ಪ್ರಶ್ನೆ: ಅಮಿತ್ ಜೀ, ಪ್ರತಿ ಸಂಜೆ ನೂರಾರು ಜನ ನಿಮ್ಮನ್ನು ಜಸ್ಟ್ ನೋಡುವ ಸಲುವಾಗಿಯೇ ನಿಮ್ಮ ಮನೆಯ ಮುಂದೆ ನೆರೆದಿರುತ್ತಾರೆ!

ಅಮಿತಾಬ್: ಇದಕ್ಕೆ ಮುಖ್ಯ ಕಾರಣ ನನ್ನ ಮನೆ ಇರುವ ಲೊಕೇಶನ್ ಅಂಥದ್ದು! ಅಲ್ಲಿ ಜನ ಗುಂಪು ಸೇರಲು ನಾನಂತೂ ಕಾರಣನಲ್ಲ, ನನ್ನದು ಕಾರ್ನರ್ ಬಂಗಲೆ. ಅಲ್ಲಿ ದೇವಸ್ಥಾನ, ಜುಹೂ ಬೀಚ್, ಸಿನಿಮಾ ಟಾಕೀಸ್ ಇರುವುದರ ಜೊತೆಗೆ ಅದೊಂದು ಪಾಪ್ಯುಲರ್ ಮೀಟಿಂಗ್ ಪಾಯಿಂಟ್. ಹಾಗಾಗಿ ಅಲ್ಲಿ ಜನ ಗಿಜಿಗಿಜಿ ಅನ್ನುತ್ತಾರಷ್ಟೇ.

ಪ್ರಶ್ನೆ: ಪ್ರತಿ ಭಾನುವಾರದ ಸಂಜೆ ನಿಮ್ಮ ಮನೆಯ ಮುಂದೆ ನಾನು ವೇಗವಾಗಿ ಕಾರು ಚಲಾಯಿಸಿಕೊಂಡು ಹೋಗುವಾಗ ನಾನು ಟ್ರಾಫಿಕ್ ಸಮಸ್ಯೆಯನ್ನು ಎದುರಿಸುತ್ತೇನೆ. ಯಾಕೆಂದರೆ ಜನ ನಿಮ್ಮನ್ನು ನೋಡಿ ಕಣ್ತುಂಬಿಕೊಳ್ಳಲು ಅಲ್ಲಿ ಅಭಿಮಾನದಿಂದ ನೆರೆದಿರುತ್ತಾರೆ. ನಿಮ್ಮ ಆಗಮನಕ್ಕಾಗಿ ತುದಿಗಾಲಿನಲ್ಲಿ ನಿಂತು ಕಾಯುತ್ತಿರುತ್ತಾರೆ. ಇದಕ್ಕೆ ನೀವೇ ಏನಾದರೂ ಪರಿಹಾರ ಹುಡುಕಬೇಕು...



ಅಮಿತಾಬ್: ನಿಮಗೊಂದು ವಿಷಯ ಗೊತ್ತಾ, ನನ್ನ ಮನೆಯೊಳಕ್ಕೆ ಹೋಗಲು ನನಗೇ ಅಲ್ಲಿ ಸಮಸ್ಯೆ!

ಪ್ರಶ್ನೆ: ನಿಮ್ಮನ್ನು ನೋಡಲು ಜನ ಯಾಕೆ ಅಷ್ಟು ಕಾತರಿಸುತ್ತಾರೆ?

ಅಮಿತಾಬ್: ನಾನು ಆರಡಿ, ಎರಡಿಂಚು ಎತ್ತರವಿದ್ದೇನಲ್ಲಾ... ಆ ಕಾರಣಕ್ಕೆ ನನ್ನನ್ನು ನೋಡಲು ಬಯಸಬಹುದು!

ಪ್ರಶ್ನೆ: ನೀವು ಯಾವಾಗಲೂ ಹೇಳುತ್ತಿರುತ್ತೀರಿ, ನಿಮ್ಮ ಮಕ್ಕಳ ಜೊತೆ ಹೆಚ್ಚು ಸಮಯ ಕಳೆಯಲು ಸಾಧ್ಯವಾಗುತ್ತಿಲ್ಲ ಅಂತ. ಹಾಗಾದರೆ ಕಳೆದ ಐದು ವರ್ಷಗಳಲ್ಲಿ ಅವರಿಗೆ ಅಂತ ಒಂದಿಷ್ಟು ಸಮಯ ಮೀಸಲಿಡಲು ನಿಮ್ಮಿಂದ ಸಾಧ್ಯವಾಯಿತಾ?

ಅಮಿತಾಬ್: ಅದು ನನ್ನ ಬದುಕಿನ ದೊಡ್ಡ ವಿಷಾದ. ಯಾವುದನ್ನು ಕಳೆದುಕೊಂಡೆನೋ ಅದನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ, ನನ್ನ ಮಕ್ಕಳ ಬೆಳವಣಿಗೆಯ ಜೊತೆಗೆ ಕಳೆಯುವ ಕ್ಷಣಗಳನ್ನು ನಾನು ನಿಜಕ್ಕೂ ಮಿಸ್ ಮಾಡಿಕೊಂಡೆ.

ಪ್ರಶ್ನೆ: ನಿಮ್ಮ ಮಡದಿ ಜಯಾ, ಮನೆಗೆ ಸಂಬಂಧಿಸಿದ ವಿಷಯಗಳು, ಸಮಸ್ಯೆಗಳು ಮುಂತಾದವುಗಳ ಕುರಿತು ನಿಮ್ಮೊಂದಿಗೆ ಚರ್ಚಿಸುತ್ತಾರಾ?

ಅಮಿತಾಬ್: ನಾನು ಯಾವಾಗಲೂ ಬ್ಯುಸಿ ಇರುತ್ತೇನೆ ಎಂಬುದು ಜಯಾಗೆ ಗೊತ್ತು, ನಾನು ನನ್ನ ಕೆಲಸಗಳಲ್ಲಿ ಹೇಗೆ ಬ್ಯುಸಿ ಇರುತ್ತೇನೋ ಹಾಗೆಯೇ ಜಯ ಕೂಡ ತನ್ನದೇ ಆದ ಕೆಲಸಗಳಲ್ಲಿ ಬ್ಯುಸಿ ಇರುತ್ತಾಳೆ. ಮನೆ ಎಂದಮೇಲೆ ಗಂಡ ಹೆಂಡತಿ ಇಬ್ಬರೂ ಸೇರಿ ಕೂತು ಚರ್ಚಿಸಿ ನಿವಾರಿಸಿಕೊಳ್ಳಬೇಕಾದ ಒಂದಿಷ್ಟು ಸಣ್ಣಪುಟ್ಟ ಸಮಸ್ಯೆಗಳಿರುತ್ತವೆ. ನಾವಿಬ್ಬರೂ ಅಂತಹ ಸಂದರ್ಭ ಬಂದಾಗ ಸಮಯ ಹೊಂದಿಸಿಕೊಂಡು ಪರಸ್ಪರ ಮಾತಾಡಿಕೊಳ್ಳುತ್ತೇವೆ.

ಪ್ರಶ್ನೆ: ಒಬ್ಬ ಸ್ಟಾರಾಗಿ ಜನಪ್ರಿಯತೆ ಹೊಂದಿರುವ ನೀವು ಒಬ್ಬ ಆರ್ಡಿನರಿ ಮನುಷ್ಯನಂತೆ ಬದುಕಲು ಕಷ್ಟವಾಗುತ್ತದೆ ಅಲ್ಲವೇ?

ಅಮಿತಾಬ್: ಆದರೆ ನಾನು ಯಾವಾಗಲೂ ಒಬ್ಬ ಆರ್ಡಿನರಿ ಮನುಷ್ಯನಂತೆಯೇ ಬದುಕುತ್ತಿದ್ದೇನೆ.

ಪ್ರಶ್ನೆ: ರಸ್ತೆ ಬದಿಯಲ್ಲಿ ನಿಂತು ತಿಂದ ನೆನಪುಗಳಿವೆ?

ಅಮಿತಾಬ್: ಖಂಡಿತ, ನಾನು ಈಗಲೂ ರಸ್ತೆ ಬದಿಗಳಲ್ಲಿ ತಿನ್ನುತ್ತೇನೆ. ಚೌಪಾಟಿಗೆ ಹೋಗಿ ಭೇಲ್ ಪುರಿ ತಿನ್ನುವುದು, ತಾರ್ಡಿಯೋನಲ್ಲಿ ಮೊಟ್ಟೆಯಿಂದ ತಯಾರಿಸಿದ ತಿನಿಸುಗಳನ್ನು ತಿನ್ನುವುದು... ಇತ್ಯಾದಿಗಳು ಈಗಲೂ ನನ್ನ ದಿನಚರಿಯಲ್ಲಿವೆ.

ಪ್ರಶ್ನೆ: ನೀವು ಯಾವ ಹೊತ್ತಿನಲ್ಲಿ ಅಲ್ಲಿಗೆ ಹೋಗುತ್ತೀರಿ? ನಾನು ನಿಮ್ಮನ್ನು ಹಿಂಬಾಲಿಸಬಯಸುತ್ತೇನೆ...

ಅಮಿತಾಬ್: ಹಿಂಬಾಲಿಸೋದು ಯಾಕೆ? ಜೊತೆಯಲ್ಲೇ ಬರಬಹುದು!

ಪ್ರಶ್ನೆ: ಬಹುಶಃ ನೀವು ಮಧ್ಯರಾತ್ರಿಯಲ್ಲೇ ಹೋಗಬಹುದು, ಅದೂ ಮಾರುವೇಷದಲ್ಲಿ...

ಅಮಿತಾಬ್: ನಾನೇಕೆ ಮಾರುವೇಷದಲ್ಲಿ ಹೋಗಲಿ? ನಿಮ್ಮ ಇಡೀ ಬದುಕನ್ನು ದೇಶದ ಜನರನ್ನು ರಂಜಿಸಲೆಂದೇ ಕಳೆಯುವಾಗ ಅದೇ ಜನ ನಿಮ್ಮನ್ನು ಗುರ್ತಿಸಿದರೆ, ಮಾತಾಡಿಸಿದರೆ ತಪ್ಪೇನು? ನೆವರ್! ಎಲ್ಲ ನಟರೂ ಜನ ತಮ್ಮನ್ನು ಗುರುತಿಸಲಿ ಅಂತಲೇ ಬಯಸುತ್ತಾರೆ.

ಪ್ರಶ್ನೆ: ಸಿನಿಮಾ ನೋಡಲೋ ಅಥವಾ ಡಿನ್ನರಿಗೋ ನೀವು ಮತ್ತು ನಿಮ್ಮ ಮಡದಿ ಕೊನೆಯಬಾರಿ ಒಟ್ಟಿಗೆ ಹೋಗಿದ್ದು ಯಾವಾಗ?

ಅಮಿತಾಬ್: ಭಾರತದಲ್ಲಿ ತುಂಬಾ ದಿನಗಳಾಯಿತು. ವಿದೇಶಗಳಿಗೆ ಹೋದಾಗ ಒಂದಿಷ್ಟು ರೆಸ್ಟೋರೆಂಟ್‌ಗಳಲ್ಲಿ ಊಟ ಮಾಡಿದ್ದುಂಟು. ಜಯಾ ಕೂಡ ಈ ವಿಷಯದಲ್ಲಿ ಥೇಟು ನನ್ನ ಹಾಗೆಯೇ- ಹೊರಗೆ ಸುತ್ತಲು ಆಕೆಗೂ ಅಷ್ಟೇನೂ ಆಸಕ್ತಿ ಇಲ್ಲ.

ಪ್ರಶ್ನೆ: ನೀವು ನ್ಯೂಯಾರ್ಕಿನಲ್ಲಿ ಕಾರ್ ರೇಸಿನಲ್ಲಿ ಬ್ಯುಸಿಯಾಗಿದ್ದಿರಿ ಅಂತ ಕೇಳಿಪಟ್ಟಿದ್ದೇನೆ. ಇದು ಹೊಸ ಹವ್ಯಾಸನಾ?

ಅಮಿತಾಬ್: ನನಗೆ ನ್ಯೂಯಾರ್ಕಿನಲ್ಲಿ ಒಂದಿಷ್ಟು ಸ್ನೇಹಿತರಿದ್ದಾರೆ, ಅದರಲ್ಲೂ ಕಾರ್ ರೇಸಿನಲ್ಲಿ ಆಸಕ್ತಿ ಇರುವಂಥವರು. ಅವರು ತಮ್ಮ ಜೊತೆಯಲ್ಲಿ ನನ್ನನ್ನೂ ಕರೆದುಕೊಂಡು ಹೋಗುತ್ತಾರೆ. ಐ ಕ್ವೈಟ್ ಎಂಜಾಯ್ಡ್ ದಟ್!

ಪ್ರಶ್ನೆ: ಜಯಾ ಯಾವುದೋ ಐತಿಹಾಸಿಕ ಕಥಾವಸ್ತುವುಳ್ಳ ಟಿವಿ ಸೀರಿಯಲ್‌ನಲ್ಲಿ ನಟಿಸುತ್ತಿದ್ದಾರೆ ಅಲ್ವಾ?

ಅಮಿತಾಬ್: ಹೌದು, ಇದರ ಬಗ್ಗೆ ಯಾವುದೋ ಪತ್ರಿಕೆಯಲ್ಲಿ ಓದಿದ್ದೆ.


ಪ್ರಶ್ನೆ: ಯೂ ಮೀನ್, ಅವರು ನಿಮಗೆ ಈ ಬಗ್ಗೆ ಹೇಳಿರಲೇ ಇಲ್ವಾ?

ಅಮಿತಾಬ್: ಆಗಾಗ ಒಬ್ಬರಿಗೊಬ್ಬರು ಸರ್ಪ್ರೈಸ್ ಕೊಟ್ಟುಕೊಳ್ಳುವುದರಲ್ಲಿ ನಮಗೆ ಒಂಥರಾ ಖುಷಿ.

ಪ್ರಶ್ನೆ: ಅಂದರೆ ಈಗ ಇಬ್ಬರೂ ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗುತ್ತಿದ್ದೀರಿ ಅಂತಾಯ್ತು...

ಅಮಿತಾಬ್: ನಾಟ್ ಅಟ್ ಆಲ್!

ಪ್ರಶ್ನೆ: ಒಂದು ವೇಳೆ ನಿಮ್ಮ ಮಗಳು ಶ್ವೇತ ಚಿತ್ರಗಳಲ್ಲಿ ನಟಿಸಲು ಬಯಸಿದರೆ ಒಪ್ಪುತ್ತೀರಾ?



ಅಮಿತಾಬ್: ಅದು ಮಗಳಿರಬಹುದು ಅಥವಾ ಮಗ ಇರಬಹುದು, ಅದು ಅವರವರಿಗೆ ಬಿಟ್ಟ ವಿಚಾರ. ಅವರು ನಟಿಸಲು ಮುಂದಾದರೆ ನಾನಂತೂ ತಡೆಯುವುದಿಲ್ಲ.

ಪ್ರಶ್ನೆ: ನೀವು ಅನೇಕ ಬಾರಿ ನಟಿಯರಿಗೆ ಸಂಬಂಧಿಸಿದಂತೆ ಬಿಸಿಬಿಸಿ ಚರ್ಚೆಗೆ ಗುರಿಯಾಗಿದ್ದಿರಿ. ಇದರಿಂದ ನಿಮ್ಮ ಕೆರಿಯರ್ ಅಥವಾ ನಿಮ್ಮ ಕೌಟುಂಬಿಕ ಬದುಕಿನ ಮೇಲೆ ಅಡ್ಡ ಪರಿಣಾಮ ಉಂಟಾಗಿದ್ದುಂಟಾ?

ಅಮಿತಾಬ್: ಅಂಥದ್ದೇನೂ ಆಗಲಿಲ್ಲ.

ಪ್ರಶ್ನೆ: ನೀವೀಗ ಮತ್ತೆ ವಾಪಸಾಗಿದ್ದೀರಿ. ಈಗ ಮತ್ತೆ ಕೆಲವು ನಟಿಯರೊಂದಿಗೆ ಬೆರೆಯಲು ಬಯಸುತ್ತೀರಾ?

ಅಮಿತಾಬ್: ನರಕದಲ್ಲೂ ಸಾಧ್ಯವಿಲ್ಲ!

ಪ್ರಶ್ನೆ: ಈ ಪುರುಷಪ್ರಧಾನ ಇಂಡಸ್ಟ್ರಿಯಲ್ಲಿ ನನ್ನಂತಹ ಇನೋಸೆಂಟ್ ಹುಡುಗಿ ಹೇಗೆ ನಿಭಾಯಿಸಿಕೊಂಡು ಹೋಗಬೇಕು. ಸಲಹೆ ಕೊಡಿ...

ಅಮಿತಾಬ್: ಜಸ್ಟ್ ರಿಮೈನ್ ಇನೋಸೆಂಟ್!

ಪ್ರಶ್ನೆ: ನಾನು ಕೂಡ ನಿಮ್ಮಂತೆ ನೋಡಲು ಎತ್ತರ ಕಾಣುತ್ತೀನಿ. ನನ್ನ ಹೈಟಿಗೆ ಕೆಲವೇ ಕೆಲವು ಹೀರೋಗಳು ಮಾತ್ರ ಮ್ಯಾಚ್ ಆಗ್ತಾರೆ. ಏನು ಮಾಡೋದು?

ಅಮಿತಾಬ್: ನನ್ನ ಜೊತೆ ನಟಿಸಲು ಶುರು ಮಾಡಿಕೊಳ್ಳಿ!

ಪ್ರಶ್ನೆ: ನಿಮ್ಮ ಜೊತೆ ಒಂದು ಚಿತ್ರದಲ್ಲಿ ನಟಿಸುವಾಸೆ. ನನ್ನೊಂದಿಗೆ ಒಂದು ರೊಮ್ಯಾಂಟಿಕ್ ಪಾತ್ರದಲ್ಲಿ ನಟಿಸುತ್ತೀರಾ?

ಅಮಿತಾಬ್: ಪ್ರಯತ್ನಿಸೋಣ... ರೋಮ್ಯಾಂಟಿಕ್ ಪಾತ್ರದಲ್ಲಿ ನಟಿಸಬೇಕೋ, ಬೇಡವೋ ಅಂತ ನಿರ್ಧರಿಸೋದು ನಿರ್ದೇಶಕರಿಗೆ ಬಿಟ್ಟಿದ್ದು. ಅಂದಹಾಗೆ ನಿಮ್ಮ ಅಪ್ಪನ ಪಾತ್ರ ನನಗೆ ಹೊಂದುವುದರಲ್ಲಿ ಅನುಮಾನವಿಲ್ಲ!

ಪ್ರಶ್ನೆ: ನಿಮಗೆ ಮುಂದಿನ ಜನ್ಮದಲ್ಲಿ ಪತ್ರಕರ್ತರಾಗಿ ಹುಟ್ಟುವ ಬಯಕೆ ಅಂತ ಎಲ್ಲೋ ಓದಿದ್ದ ನೆನಪು. ಯಾಕೆ ಅಂತ ಬಯಕೆ?

ಅಮಿತಾಬ್: ನಾನು ಪತ್ರಕರ್ತನಾದಾಗ ಹೇಳುತ್ತೇನೆ.

ಪ್ರಶ್ನೆ: ಅದು ಯಾವಾಗ?

ಅಮಿತಾಬ್: ನನ್ನ ಮುಂದಿನ ಜನ್ಮದಲ್ಲಿ, ನಿಸ್ಸಂದೇಹವಾಗಿ!

● ಹೃದಯಶಿವ

## ಅಡ್ಡಡ್ಡ ಉದ್ದುದ್ದ ಮಲಗಿದ ಅಂಬರೀಶ



'ಅಂಬರೀಶ' ಚಿತ್ರವು ಬಿಡುಗಡೆ ಆಗಲಿದೆ ಎಂಬ ಒಂದೇ ಒಂದು ಕಾರಣಕ್ಕೆ ಕಳೆದ ವಾರ ಆ ಚಿತ್ರದ ಎದುರು ತೆರೆಗೆ ಬರಲು ಯಾವ ಚಿತ್ರವೂ ಧೈರ್ಯ ತೋರಲಿಲ್ಲ. ಕಳೆದ ಒಂದು ವರ್ಷದಿಂದೀಚೆಗೆ ಯಾವೊಂದು ದರ್ಶನ್ ಚಿತ್ರ ಬಿಡುಗಡೆಯಾಗದಿದ್ದದ್ದು ಅಂಬಿ-ದರ್ಶನ್ ಕಾಂಬಿನೇಶನ್ ಇದ್ದದ್ದು ಹಾಗೂ 'ಅಂಬರೀಶ' ಎಂಬ ಟೈಟಲ್ ಈ ತರದ ಅಧ್ಯಾಯಕ್ಕೆ ಕಾರಣವಾಗಿತ್ತು. 'ಅಂಬರೀಶ' ಈ ವರ್ಷದ ಸೂಪರ್ ಹಿಟ್ ಚಿತ್ರವಾಗುತ್ತೆ ಅಂತಹ ದೊಡ್ಡ ಚಿತ್ರವನ್ನು ಎದುರುಹಾಕಿಕೊಂಡು ಯಾಕೆ ಬರಬೇಕು ಎಂದು ನಿರ್ಧರಿಸಿದ ಒಂದಿಷ್ಟು ನಿರ್ಮಾಪಕರು ಲಾಸ್ಟ್ ವೀಕ್ 'ಅಂಬರೀಶ' ಜೊತೆ ತಮ್ಮ ಚಿತ್ರಗಳನ್ನು ರಿಲೀಸ್ ಮಾಡಲು ಹಿಂದೇಟು ಹಾಕಿದರು. ಆದರೆ ಆದದ್ದೇನು? ಬರೀ ಅಬ್ಬರ, ಗಲಾಟೆ, ಕಿರುಚಾಟ, ಪರಚಾಟ, ಲಾಜಿಕ್ ಇಲ್ಲದ ಡೈಲಾಗ್ಸ್ ಇತ್ಯಾದಿ ಗಿಮಿಕ್‌ಗಳಿಂದಲೇ ತುಂಬಿಹೋಗಿರುವ 'ಅಂಬರೀಶ' ಅಡ್ಡಡ್ಡ ಉದ್ದುದ್ದ ಪಾಚಿಕೊಂಡಿದೆ. ತಮ್ಮ ಹಿರಿ ಗುರು ಅಂಬಿ ಮತ್ತು ಮರಿ ಗುರು ದರ್ಶನ್ ಒಟ್ಟಿಗೆ ನಟಿಸಿರುವ ಈ ಚಿತ್ರವನ್ನು ನೋಡಲು ಉತ್ಸಾಹದಿಂದ ಥಿಯೇಟರ್‌ಗೆ ಬಂದ ಅಮಾಯಕ ಅಭಿಮಾನಿ ನಿರಾಶೆಯಿಂದ ತಲೆ ಮೇಲೆ ಕರ್ಚೀಫ್ ಹಾಕಿಕೊಂಡು ವಾಪಾಸ್ ಮನೆಗೆ ಹೋಗಿದ್ದಾನೆ. ಇದರಿಂದ ಕನ್ನಡ ಚಿತ್ರರಂಗದ ಮಂದಿ ಕಲಿಯಬೇಕಿರುವ ಪಾಠವೆಂದರೆ ಯಾವುದೇ ಹೀರೋ ಇದ್ದರೂ ಕತೆ ಡಬ್ಬಾ ಥರ ಇದ್ದರೆ ಜನ ಆ ಚಿತ್ರವನ್ನು ಮೂಸಿಯೂ ನೋಡುವುದಿಲ್ಲ ಎಂಬುದನ್ನು. ಇನ್ನಾದರೂ ದರ್ಶನ್ ತರಹದ ನಟರು ಇಂತಹ ಗಿಮಿಕ್‌ಗಳನ್ನೆಲ್ಲ ಬಿಟ್ಟು ಗಟ್ಟಿ ಕತೆ ಇರುವ ಚಿತ್ರಗಳಲ್ಲಿ ನಟಿಸುವ ಮೂಲಕ ಇನ್ನಷ್ಟು ಕಾಲ ಗಟ್ಟಿಯಾಗಿ ಗಾಂಧಿನಗರದಲ್ಲಿ ನಿಲ್ಲುವಂತಾಗಲಿ ಅನ್ನೋದು ನಮ್ಮ ಆಶಯ. ಈ ಮಾತನ್ನು ಪ್ರತ್ಯೇಕವಾಗಿ ಅಂಬರೀಶ್ ಅವರಿಗೂ ಹೇಳಬೇಕಿಲ್ಲ ಅಲ್ಲವೇ?

## ನಮೋ ವರ್ಸಸ್ ಮಂಡ್ಯ

'ನಮೋ ಭೂತಾತ್ಮ' ಮತ್ತು 'ಲವ್ ಇನ್ ಮಂಡ್ಯ' ಈ ವಾರ ಬಿಡುಗಡೆಯಾಗುತ್ತಿರುವ ಚಿತ್ರಗಳು. ಕೋಮಲ್ ಅಭಿನಯದ 'ನಮೋ ಭೂತಾತ್ಮ' ತಮಿಳಿನ 'ಯಾಮಿರುಕ್ಕುಂ ಭಯಮೇ' ಎಂಬ ಹಾರರ್ ಕಾಮಿಡಿ ಚಿತ್ರದ ರಿಮೇಕ್ ಆಗಿದ್ದು ಈ ಚಿತ್ರದಲ್ಲಿ ನಗೆ ಮತ್ತು ಭಯ ಒಟ್ಟೊಟ್ಟಿಗೆ ಬೆಸೆದುಕೊಂಡಿವೆಯಂತೆ. ಇನ್ನು ಸತೀಶ ಅಭಿನಯದ 'ಲವ್ ಇನ್ ಮಂಡ್ಯ' ಮಂಡ್ಯ ಬ್ಯಾಕ್ ಡ್ರಾಪ್ ನಲ್ಲಿ ನಡೆಯುವ ಲವ್ ಸ್ಟೋರಿ. ಈವರೆಗೆ ಸುಮಾರು ಆರು ನೂರು ಹಾಡುಗಳಿಗೆ ನೃತ್ಯ ಸಂಯೋಜನೆ ಮಾಡಿರುವ ಮುರಳಿ ಇದೇ ಮೊದಲ ಬಾರಿಗೆ 'ನಮೋ...' ಮೂಲಕ ನಿರ್ದೇಶಕರಾಗಿದ್ದರೆ, ಗ್ಯಾಪಲ್ಲಿ ಒಂದಿಷ್ಟು ಹಾಡುಗಳನ್ನು ಬರೆದುಕೊಂಡು



ಅಸಿಸ್ಟೆಂಟ್ ಡೈರೆಕ್ಟರಾಗಿ ಕೆಲಸ ಮಾಡುತ್ತಿದ್ದ ಅರಸು 'ಲವ್ ಇನ್ ಮಂಡ್ಯ' ಮುಖೇನ ಡೈರೆಕ್ಟರ್ ಆಗ್ತಿದ್ದಾರೆ. ಇಷ್ಟಕ್ಕೂ ಎರಡೂ ಚಿತ್ರಗಳ ಬಗ್ಗೆ ಚಿತ್ರ ನೋಡಿದವರ ಕಡೆಯಿಂದ ಒಳ್ಳೆಯ ಅಭಿಪ್ರಾಯಗಳು ಬಂದಿದ್ದು ಅವು ನಿರೀಕ್ಷೆ ಹುಟ್ಟಿಸಿದ್ದಾವೆ ಅನ್ನೋ ಮಾತೂ ಇದೆ. ಈ ಎರಡೂ ಚಿತ್ರಗಳು ಒಟ್ಟಿಗೆ ಬರುತ್ತಿರುವುದರಿಂದ ಕಲೆಕ್ಷನ್ ವಿಷಯಕ್ಕೆ ಸಂಬಂಧಿಸಿದಂತೆ ಈ ಎರಡರಲ್ಲಿ ಯಾವ ಚಿತ್ರಕ್ಕೂ ಉಂಡೆ ಭಾಗ ಸಿಕ್ಕದೆ ಹಂಚಿಹೋಗುವ ಸಂಭವವುಂಟು. ಆದರೂ ಥಿಯೇಟರ್‌ಗಳೇ ಸಿಗದ ಈ ಬರಗಾಲದಲ್ಲಿ ಹೇಗಾದರೂ ರಿಲೀಸ್ ಆದರೆ ಅಷ್ಟೇ ಸಾಕು ಎಂಬ ಸ್ಥಿತಿ ಗಾಂಧಿನಗರದ್ದು. ಅಂದಹಾಗೆ ಟೈಟಾನಿಕ್ ಹಡಗಿನಷ್ಟು ವಿಶಾಲವಾದ 'ಕಪಾಲಿ'ಯಲ್ಲಿ 'ಲವ್ ಇನ್ ಮಂಡ್ಯ' ಬಿಡುಗಡೆಯಾಗುತ್ತಿದ್ದರೆ, ಚಿನ್ನಸ್ವಾಮಿ ಸ್ಟೇಡಿಯಂ ಥರ ಕಾಣುವ 'ತ್ರಿಭುವನ್'ನಲ್ಲಿ 'ನಮೋ ಭೂತಾತ್ಮ' ಬಿಡುಗಡೆಯಾಗುತ್ತಿದೆ. ಈ ದೊಡ್ಡ ಥಿಯೇಟರ್‌ಗಳು ತುಂಬಿ ತುಳುಕಿ 'ಹೌಸ್ ಫುಲ್' ಬೋರ್ಡನ್ನು ತಮ್ಮ ಮುಂದೆ ಇರಿಸಿಕೊಂಡು ಹಿಟ್ ಎನಿಸಿಕೊಂಡರೆ ಅದಕ್ಕಿಂತಲೂ ಖುಷಿ ಮತ್ತೇನಿದೆ ಎನ್ನುತ್ತಲೇ ಎರಡೂ ಚಿತ್ರಗಳಿಗೂ ಶುಭಾಶಯ ಹೇಳಿಬಿಡೋಣ.



## ಸಿಗರೇಟ್ ಚಿತ್ರಕ್ಕೆ ಸೆನ್ಸಾರ್

'ಸಿಗರೇಟ್' ಚಿತ್ರಕ್ಕೆ ಸೆನ್ಸಾರ್ ಮಂಡಳಿ ಯು/ಎ ಸರ್ಟಿಫಿಕೇಟ್ ಕೊಟ್ಟಿದೆ. ಸಾಮಾಜಿಕ ಕಳಕಳಿಯ ಜೊತೆಗೆ ಹಾಡು, ಫೈಟು, ಪಂಚಿಂಗ್ ಡೈಲಾಗ್ ಮೂಲಕ ಸಿದ್ಧವಾಗಿರುವ ಈ ಚಿತ್ರದಲ್ಲಿ ಇದೇ ಮೊದಲ ಬಾರಿಗೆ ನಾಗಶೇಖರ್ ಹೀರೋ ಆಗಿ ಅಭಿನಯಿಸಿದ್ದಾರೆ. ಈ ಮೊದಲು 'ನೈಂಟಿ', 'ದೇವ್ರಾಣೆ', 'ಜಮಾನ' ತರಹದ ಚಿತ್ರಗಳನ್ನು ನಿರ್ದೇಶಿಸಿದ್ದ ಶಂಕರ್ (ಲಕ್ಕಿ ಶಂಕರ್) ಈ ಚಿತ್ರದ ಡೈರೆಕ್ಟರ್. 'ಸಿಗರೇಟ್ ಸೇದ್ಬೇಡಿ... ಪ್ರೀತಿ ಮಾಡ್ಬೇಡಿ' ಎಂಬ ಕುತೂಹಲಕಾರಿ ಟ್ಯಾಗ್ ಲೈನಿನೊಂದಿಗೆ ಸದ್ಯದಲ್ಲೇ ಪ್ರೇಕ್ಷಕರೆದುರು ಬರುತ್ತಿರುವ ಈ ಚಿತ್ರಕ್ಕೆ ಇಂದ್ರಸೇನ ಎಂಬುವವರು ಸಂಗೀತ ನೀಡಿದ್ದಾರೆ. ಈಗಾಗಲೇ 'ಒಂದು ಮನಸು ಇನ್ನೊಂದು ಮನಸು' ಹಾಗೂ 'ಶ್ವಾಸಕೋಶ ಸರ್ವನಾಶ' ಎಂಬ ಗೀತೆಗಳು ಒಂದು ರೇಂಜಿಗೆ ಜನರಿಗೆ ಇಷ್ಟವಾಗುತ್ತಿವೆಯಂತೆ. 'ಲವ್ ಇನ್ ಮಂಡ್ಯ'ದಂತಹ ಚಿತ್ರ ಅರ್ಧ ಗಂಟೆಗೂ ಹೆಚ್ಚು ಸೆನ್ಸಾರ್ ಕಟ್‌ಗೆ ಗುರಿಯಾಗಿದೆ ಎಂಬ ಮಾತುಗಳು ಕೇಳಿಬರುತ್ತಿರುವಾಗ 'ಸಿಗರೇಟ್' ಯು/ಎ ಸರ್ಟಿಫಿಕೆಟ್ ಪಡೆದಿರುವುದು ಅಚ್ಚರಿ ಮೂಡಿಸುತ್ತಿದೆ.



## ಜಭೋ ಜೋಡಿಯ ತೆಕ್ಕೆಗೆ ಕಪಾ[ಲಿ]

ವಿತರಕರಾಗಿ ಒಂದಿಷ್ಟು ಕಾಸು ಮಾಡಿಕೊಂಡು ಅನಂತರ ನಿರ್ಮಾ... ಕೈ ಹಾಕಿ ಮತ್ತೊಂದಿಷ್ಟು ಕಾಸು ಮಾಡಿಕೊಳ್ಳುವಲ್ಲಿ ಯಶಸ್ವಿಯಾದ ಜೋ... ಹೆಸರು ಜಯಣ್ಣ-ಭೋಗೇಂದ್ರ ಅಂತ. ಈ ಜೋಡಿ ಈವರೆಗೆ 'ಅಜ... 'ಜಾನು', 'ಜಾನಿ ಮೇರಾ ನಾಮ್', 'ಪರಮಾತ್ಮ', 'ಡ್ರಾಮಾ', 'ಗಜಕೇಸರಿ' ತರಹದ ಸಿನಿಮಾಗಳನ್ನು ನಿರ್ಮಾಣ ಮಾಡಿದೆ. ಆದರೆ ... ಅಭಿನಯದ 'ಅರ್ಜುನ್' ನಿರ್ಮಿಸಿದ ತಪ್ಪಿಗೆ ಅಂದಾಜು ಎರಡು ಕೋಟಿ... ಹಾಗೂ ಯೋಗರಾಜಭಟ್-ಪುನೀತ್ ರಾಜಕುಮಾರ್ ಕಾಂಬಿನ... 'ಪರಮಾತ್ಮ'ಕ್ಕೆ ರೊಕ್ಕ ಹಾಕಿದ ಪಾಪಕ್ಕೆ ಇನ್ನೆರಡು ಕೋಟಿಯಷ್ಟು ನಷ್ಟ ಅನುಭವಿಸಿದೆ. ಇಂತಹ ಜೋಡಿ ಇದೀಗ ಗುಟ್ಟಲ್ಲೇ ಒಂದು ಕೆಲಸ ಮಾಡಿದೆ. ಅದೇನೆಂದರೆ ಗಾಂಧಿನಗರದ ಪ್ರಮುಖ ಥಿಯೇಟರುಗಳ ಪೈಕಿ ಒಂದಾದ 'ಕಪಾಲಿ'



ಯನ್ನು ತಮ್ಮ ತೆಕ್ಕೆಗೆ ಎಳೆದುಕೊಂಡಿದ್ದಾರೆ. ಹೌದು ಸ್ವಾಮೀ, ... ಥಿಯೇಟರ್‌ನ ಸಂಪೂರ್ಣ ಹೊಣೆ ಈಗ ಜಯಣ್ಣ-ಭೋಗೇಂದ್ರ ಜೋಡಿ... ಇಷ್ಟಕ್ಕೂ ಇಲ್ಲಿಯ ವ್ಯವಹಾರ ಎಂಥಾದ್ದು ಎಂದರೆ ಈ ಜಯಣ್ಣ-ಭೋ... ಜೋಡಿ 'ಕಪಾಲಿ'ಯಲ್ಲಿ ತಮ್ಮ ಸಿನಿಮಾವನ್ನು ಬಿಡುಗಡೆ ಮಾಡಲು ಬ... ನಿರ್ಮಾಪಕರಿಂದ ಒಂದಿಷ್ಟು ಹಣವನ್ನು ಡಿಮ್ಯಾಂಡ್ ಮಾಡಿ ಅದರ... ಹಣವನ್ನು ತಮ್ಮ ಲಾಭವಾಗಿ ಉಳಿಸಿಕೊಂಡು ಉಳಿದ ಹಣವನ್ನು 'ಕ... ಮಾಲೀಕರಿಗೆ ಕೊಡುವುದು. ಈ ಬೆಳವಣಿಗೆಯಿಂದ ವಾರಕ್ಕೆ ಕನಿಷ್ಠ ಏನಿಲ್ಲ... ಈ ಜೋಡಿಗೆ ದಕ್ಕುವ ಲಾಭ ಲಕ್ಷಕ್ಕೂ ಮೀರಿದ್ದು-ಇದರಿಂದ ... ಮಾಲೀಕರಿಗೆ ಆರಾಮು ಅನ್ನೋದು ಅಷ್ಟೇ ನಿಜ. ಯಾಕೆಂದರೆ, ಪ್ರ... ಯಾವುದೇ ಹೊಸ ಸಿನಿಮಾವನ್ನು ಗುರ್ತಿಸಿ, ಆಯ್ಕೆ ಮಾಡಿಕೊಂಡು ... ಟಾಕೀಸಿನಲ್ಲಿ ಬಾಡಿಗೆ ಲೆಕ್ಕದಲ್ಲಿ ಬಿಡುಗಡೆ ಮಾಡಿ ಒಂದಿಷ್ಟು ಲಾಭವ... ಕಾಣುವುದೂ ಇವತ್ತಿನ ದಿನಗಳಲ್ಲಿ ತ್ರಾಸದಾಯಕ. ಜಯಣ್ಣ-ಭೋ... ಜೋಡಿ 'ಕಪಾಲಿ'ಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವುದರಿಂದ ಅ... ಲಾಭ, ಥಿಯೇಟರ್ ಮಾಲೀಕರಿಗೂ ಲಾಭ. ಅಂದಹಾಗೆ ಚಿ... ಮಂದಿ ಇನ್ನು ಮುಂದೆ 'ಕಪಾಲಿ'ಯಲ್ಲಿ ತಮ್ಮ ಸಿನಿಮಾ ಬಿಡುಗಡೆ ... ಬಯಸಿದರೆ ಮಾಲೀಕರ ಬದಲು ಜಯಣ್ಣ-ಭೋಗೇಂದ್ರ ಜೋ... ಸಂಪರ್ಕಿಸಬೇಕು ಎಂಬಂತಾಯಿತು ಅಲ್ಲವೇ?

## ಸಿಂಗ್ ಬಾಬು ಅಕಾಡೆಮಿ ಅ...

ಕರ್ನಾಟಕ ಚಲನಚಿತ್ರ ಅಕಾಡೆಮಿಯ... ಅಧ್ಯಕ್ಷರಾಗಿ ರಾಜೇಂದ್ರಸಿಂಗ್ ... ಅವರನ್ನು ಸರ್ಕಾರ ನೇಮಕ ... ಈ ಮೊದಲು ಈ ಸ್ಥಾನದ... ಇದ್ದು ಅವರ ನಂತರ ... ಸ್ಥಾನಕ್ಕೆ ಈವರೆಗೆ ಅಯ್ಕೆ ನ... ಈ ಗೌರವಯುತ ಸ್ಥಾನಕ್ಕೆ ರವಿಚಂದ್ರನ್, ಗಿರೀಶ್ ಕಾಸರವಳ್ಳಿ, ಜಯ... ಬಸಂತ್ ಕುಮಾರ್ ಪಾಟೀಲ್ ಮುಂತಾದವರ ಹೆಸರುಗಳು ಕೇಳಿಬ... ಕಡೆಗೆ ಸಿಂಗ್ ಬಾಬು ಆಯ್ಕೆಯಾಗಿದ್ದಾರೆ. ಕಳೆದ ಎರಡ್ಮೂರು ದ... ನಿರ್ದೇಶಕರಾಗಿ, ನಿರ್ಮಾಪಕರಾಗಿ ಒಳ್ಳೊಳ್ಳೆಯ ಸದಭಿರುಚಿ ... ಕನ್ನಡ ಪ್ರೇಕ್ಷಕರಿಗೆ ಕೊಟ್ಟಿರುವ ಬಾಬು ಈ ನಡುವೆ ತಮ್ಮ ... ಚುರುಕುತನ ಕಳೆದುಕೊಂಡು ಮೂಲೆ ಸೇರಿದ್ದರು. ಮಗ ... ಹೀರೋ ಮಾಡುವ ಪ್ರಯತ್ನದಲ್ಲಿ ಒಂದಿಷ್ಟು ಲಾಸ್ ಮಾಡಿಕೊ... ಈಗ ಅಕಾಡೆಮಿಯ ಅಧ್ಯಕ್ಷರಾಗುವ ಮೂಲಕ ಮತ್ತೆ ಸ... ತೊಡಗಿಸಿಕೊಳ್ಳಲು, ಹೊಸ ಉತ್ತೇಜನದಿಂದ ಇಂಡಸ್ಟ್ರಿಯ ... ಕಾರ್ಯೋನ್ಮುಖರಾಗಲು ದಾರಿ ಒದಗಿದಂತಾಗಿದೆ. ಬಾಬು ಅವರಿಂದ ಒಂದಿಷ್ಟು ಉತ್ತಮ ಕೆಲಸಗಳು ಆಗುವ ಮೂಲಕ ಚಿತ್ರರಂಗ ಇನ್ನಷ್ಟು ಸುಧಾರಿಸಿದರೆ ಅಷ್ಟೇ ಸಾಕು. ಹಾಗೆಯೇ ಜವಾಹರ್ ಬಾಲಭವನದ ಅಧ್ಯಕ್ಷರಾಗಿ ನಟಿ ಭಾವನಾ ಆಯ್ಕೆಯಾಗಿದ್ದಾರೆ.. ಅವರಿಗೂ ಅಭಿನಂದನೆಗಳು.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com